ಮಂಗಳವಾರ, ಜೂನ್ 2, 2026 | ₹ 7.00

prajavani.net prajavani

www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಪ್ರತಿಭಟನೆ

ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ವಿರೋಧಿಸಿ ಎನ್‌ಟಿಎ ವಿರುದ್ಧ ಕ್ರಾಂತಿಕಾರಿ ಯುವ ಸಂಘಟನೆ ಸದಸ್ಯರು ನವದೆಹಲಿಯ ಶಾಸ್ತ್ರಿ ಭವನದ ಎದುರು ಸೋಮವಾರ ಪ್ರತಿಭಟಿಸಿದರು

ತೆರೆಯಿತು ಶಾಲೆ

ಮೈಸೂರಿನ ಕುವೆಂಪುನಗರದ ಕರ್ನಾಟಕ ಪಬ್ಲಿಕ್ ಶಾಲೆಗೆ ವಿದ್ಯಾರ್ಥಿನಿ ಸೋಮವಾರ ಖುಷಿಯಿಂದ ಬಂದಳು



AU SMALL FINANCE BANK

ವಾರ್ಷಿಕ

6.75%*

ವರೆಗೆ ಬಡ್ಡಿ ಹಾಗೂ

ಮಾಸಿಕ ಬಡ್ಡಿ ಪಾವತಿ ಲಭ್ಯ

AU ಉಳಿತಾಯ ಖಾತೆಯಲ್ಲಿ

ನಿಮ್ಮ ಎಲ್ಲಾ ಬ್ಯಾಂಕಿಂಗ್ ಅಗತ್ಯಗಳಿಗಾಗಿ AU ಗೆ ಬದಲಾಯಿಸಿ

ಉಳಿತಾಯ ಖಾತೆ • ಸ್ಥಿರ ಠೇವಣಿ • ಚಾಲ್ತಿ ಖಾತೆ
ಪ್ರೀಮಿಯಂ ಬ್ಯಾಂಕಿಂಗ್ • ಕಾರ್ಪೊರೇಟ್ ವೇತನ ಖಾತೆ
ಎನ್‌ಆರ್‌ಐ ಬ್ಯಾಂಕಿಂಗ್ • ಕ್ರೆಡಿಟ್ ಕಾರ್ಡ್
ಹೂಡಿಕೆ ಮತ್ತು ಸಂಪತ್ತು ಪರಿಹಾರಗಳು • ಗೃಹ ಸಾಲ
ವ್ಯವಹಾರ ಸಾಲ • ಚಿನ್ನದ ಸಾಲ • ಓವರ್
ಡ್ರಾಫ್ಟ್ ಕಾರ್ಯನಿರತ ಬಂಡವಾಳ ಸಾಲ • ವಾಹನ ಸಾಲ
ರಫ್ತು/ಆಮದು ಹಣಕಾಸು • ವೈಯಕ್ತಿಕ ಸಾಲ
ವ್ಯಾಪಾರ, ವಿದೇಶಿ ವಿನಿಮಯ ಮತ್ತು ಹಣ ರವಾನೆಗಳು • ವಿಮೆ

**ಆಲೋಚನೆಯನ್ನು ಬದಲಿಸಿ,
ಮತ್ತು ಬ್ಯಾಂಕನ್ನು ಕೂಡ**

1800 1200 1200
www.au.bank.in

2,700+ ಸಂಪರ್ಕ ಕೇಂದ್ರಗಳು	21 ರಾಜ್ಯಗಳು ಮತ್ತು 4 ಕೇಂದ್ರಾಡಳಿತ ಪ್ರದೇಶಗಳು	1.2 ಕೋಟಿಗೂ ಹೆಚ್ಚು ಗ್ರಾಹಕರು	59,000 ಕ್ಕೂ ಹೆಚ್ಚು ಉದ್ಯೋಗಿಗಳು

*ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ

prajavani.net prajavani | ಮಂಗಳವಾರ, ಜೂನ್ 2, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 152 | ಪುಟ 16 | www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಮೀರಾ ಗೆಲುವಿನ ಓಟ
ರಷ್ಯಾದ ಆಟಗಾರ್ತಿ ಮೀರಾ ಅಂದ್ರಿಯೇವಾ ಅವರು ಸ್ವಿಟ್ಜರ್ಲೆಂಡ್‌ನ ಜಿಲ್ ಟೀಚ್‌ಮನ್ ಅವರನ್ನು ಸೋಲಿಸಿ ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯಲ್ಲಿ ಕ್ವಾರ್ಟರ್‌ಫೈನಲ್ ಪ್ರವೇಶಿಸಿದರು

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ
ಸ್ಕ್ಯಾನ್ ಮಾಡಿ

ಸೆನ್ಸೆಕ್ಸ್ 74,267 | ನಿಫ್ಟಿ 23,382 | $/₹ 95.19 | ಚಿನ್ನ (Std. 10g) ₹1,60,900 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,79,100 (ಬೆಂಗಳೂರು)

ಜುಲೈ 1ರಿಂದ 'ವಿಬಿ ಜಿ ರಾಮ್ ಜಿ' ಜಾರಿ

ಕೃಷಿ ಉತ್ತುಂಗದ 60 ದಿನ ಕೆಲಸ ಸ್ಥಗಿತ • ಚಟುವಟಿಕೆ ಸಮಯದ ಮಾಹಿತಿ ಸಲ್ಲಿಸಲು ಸೂಚನೆ

• ರಾಜೇಶ್ ರೈ ಚಟ್ಲ

ಬೆಂಗಳೂರು: ನರೇಗಾ ಕಾಯ್ದೆ ರದ್ದುಗೊಳಿಸಿ, ಅದರ ಬದಲಿಗೆ 'ವಿಬಿ–ಜಿ ರಾಮ್ ಜಿ' ಕಾಯ್ದೆಯನ್ನು ಜುಲೈ 1ರಿಂದ ಅನುಷ್ಠಾನಗೊಳಿಸುವಂತೆ ಕೇಂದ್ರ ಸರ್ಕಾರ ಸೂಚಿಸಿದ್ದು, ಯೋಜನೆ ಜಾರಿಗಾಗಿ ಗ್ರಾಮೀಣಾಭಿವೃದ್ಧಿ ಇಲಾಖೆ ತಯಾರಿ ಆರಂಭಿಸಿದೆ.

ಎಲ್ಲ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಗ್ರಾಮೀಣಾಭಿವೃದ್ಧಿ ಆಯುಕ್ತಾಲಯದ ಮುಖ್ಯ ಕಾರ್ಯಾಚರಣೆ ಅಧಿಕಾರಿ ಈ ಕುರಿತು ಸೂಚನೆ ನೀಡಿದ್ದಾರೆ.

ಹೊಸ ಕಾಯ್ದೆಯ ನಿಯಮಗಳ ಪ್ರಕಾರ, ಕೃಷಿ ಚಟುವಟಿಕೆಗಳ ಹಂಗಾಮು ಉತ್ತುಂಗದಲ್ಲಿರುವಾಗ ಯಾವುದೇ ಕೆಲಸವನ್ನು ಆರಂಭಿಸಬಾರದು ಅಥವಾ ಕಾರ್ಯಗತಗೊಳಿಸಬಾರದು ಎಂದು ನಿರ್ದೇಶಿಸಿದ್ದಾರೆ. 'ಬಿತ್ತನೆ ಮತ್ತು ಸುಗ್ಗಿ ಕಾಲದಲ್ಲಿ ಒಟ್ಟು 60 ದಿನ ಕೃಷಿ ಕಾರ್ಮಿಕರ ಲಭ್ಯತೆಯನ್ನು ಖಾತ್ರಿಗೊಳಿಸಲು 'ವಿಬಿ ಜಿ ರಾಮ್ ಜಿ' ಅಡಿ ಕಾಮಗಾರಿಗಳನ್ನು ಕೈಗೊಳ್ಳಬಾರದೆಂದು ಹೊಸ ಕಾಯ್ದೆ ಉಲ್ಲೇಖಿಸಿದೆ. ರಾಜ್ಯ ಸರ್ಕಾರಗಳು ಪ್ರತಿ ಆರ್ಥಿಕ ವರ್ಷದಲ್ಲಿ ಕೃಷಿ ಚಟುವಟಿಕೆಗಳು ತೀವ್ರವಾಗಿರುವ ಸಮಯವೂ ಒಳಗೊಂಡಂತೆ ಒಟ್ಟು 60 ದಿನಗಳ ಯಾವುವು ಎಂದು ಜೂನ್ 2ರೊಳಗೆ ದೃಢೀಕರಿಸಿ ತಿಳಿಸಬೇಕು' ಎಂದೂ ಅವರು ಹೇಳಿದ್ದಾರೆ.

'ಜಿಲ್ಲೆಗಳು, ಬ್ಲಾಕ್‌ಗಳು ಅಥವಾ ಗ್ರಾಮ ಪಂಚಾಯಿತಿಗಳು ಸೇರಿದಂತೆ ರಾಜ್ಯದ ವಿವಿಧ ಪ್ರದೇಶಗಳಿಗೆ ಕೃಷಿ,ಹವಾಮಾನ ವಲಯಗಳು, ಸ್ಥಳೀಯ ಕೃಷಿ ಚಟುವಟಿಕೆಗಳ ಮಾದರಿ ಅಥವಾ ಇತರ ಸಂಬಂಧಿತ ಅಂಶಗಳ ಆಧಾರದಲ್ಲಿ ಈ ಅವಧಿಯನ್ನು ನಿರ್ಧರಿಸಿ ರಾಜ್ಯ ಸರ್ಕಾರ ಬೇರೆ ಬೇರೆ ಅಧಿಸೂಚನೆ ಹೊರಡಿಸಲು ಕಾಯ್ದೆಯಲ್ಲಿ ಅವಕಾಶವಿದೆ. ಅಂತಹ ಪ್ರತಿ ಅಧಿಸೂಚನೆಯೂ ಈ ಕಾಯ್ದೆಯ ಉದ್ದೇಶಗಳಿಗೆ ಪೂರಕವಾಗಿರಬೇಕು' ಎಂದೂ ಸೂಚನೆ ನೀಡಿದ್ದಾರೆ.

▸5

ಏಪ್ರಿಲ್‌ನಲ್ಲಿ ಸೃಜನೆಯಾಗದ 1.30 ಕೋಟಿ ಮಾನವ ದಿನ

ಕೌಶಲರಹಿತ ಗ್ರಾಮೀಣ ಜನರಿಗೆ ಉದ್ಯೋಗ ಅವಕಾಶ ಒದಗಿಸುವ ಉದ್ದೇಶದಿಂದ ನರೇಗಾ ಯೋಜನೆಯಡಿ ಏಪ್ರಿಲ್‌ನಲ್ಲಿ 1.30 ಕೋಟಿ ಮಾನವ ದಿನಗಳನ್ನು ಸೃಜಿಸಲು ಅವಕಾಶ ನೀಡುವಂತೆ ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವಾಲಯಕ್ಕೆ ರಾಜ್ಯ ಸರ್ಕಾರ ಬೇಡಿಕೆ ಸಲ್ಲಿಸಿತ್ತು. ಅದಕ್ಕೆ ಅನುಮೋದನೆ ಸಿಕ್ಕಿತ್ತು.

ಸೃಜಿಸಬೇಕಾದ ಮಾನವ ದಿನಗಳ ಗುರಿಯನ್ನು ಎಲ್ಲ ಜಿಲ್ಲೆಗಳಿಗೆ ಹಂಚಿಕೆ ಮಾಡಲಾಗಿತ್ತು. ಆದರೆ, ಬಹುತೇಕ ಜಿಲ್ಲೆಗಳು ಗುರಿ ಸಾಧಿಸಲು ವಿಫಲವಾಗಿವೆ. ಹಲವು ಗ್ರಾಮ ಪಂಚಾಯಿತಿಗಳಲ್ಲಿ ಶೂನ್ಯ ಮಾನವ ದಿನಗಳು ಸೃಜನೆಯಾಗಿವೆ. ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿರುವ ಇಲಾಖೆಯ ಕಾರ್ಯದರ್ಶಿ ಸಮೀರ್ ಶುಕ್ಲಾ, 'ಕೇಂದ್ರ ಸರ್ಕಾರ ನಿಗದಿಪಡಿಸಿರುವ ಮಾನವ ದಿನಗಳ ಸೃಜನೆಯ ಗುರಿ ತಲುಪಲು ವಿಫಲವಾದರೆ ಮುಂಬರುವ ತಿಂಗಳುಗಳಲ್ಲಿ ಮಾನವ ದಿನಗಳ ಹಂಚಿಕೆ ಮತ್ತು ಹಣ ಬಿಡುಗಡೆಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರಲಿದೆ. ಆಡಳಿತಾತ್ಮಕ ನಿರ್ವಹಣೆಯಲ್ಲೂ ತೊಂದರೆ ಉಂಟಾಗುವ ಸಂಭವಿದೆ' ಎಂದು ಕಳವಳ ವ್ಯಕ್ತಪಡಿಸಿ ಜಿಲ್ಲಾ ಪಂಚಾಯಿತಿ ಸಿಇಒಗಳಿಗೆ ಪತ್ರ ಬರೆದಿದ್ದಾರೆ ಎಂದು ಗ್ರಾಮೀಣಾಭಿವೃದ್ಧಿ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

ಸಂಪುಟ: ದೆಹಲಿಯಲ್ಲಿ ಕಸರತ್ತು

40ಕ್ಕೂ ಹೆಚ್ಚು ಶಾಸಕರಿಂದ ಹೈಕಮಾಂಡ್ ಅಂಗಳದಲ್ಲಿ ಲಾಬಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಸಚಿವ ಸ್ಥಾನ ಪಡೆಯಲು ಕಾಂಗ್ರೆಸ್‌ನ 40ಕ್ಕೂ ಹೆಚ್ಚು ಹಿರಿಯ ಹಾಗೂ ಕಿರಿಯ ಶಾಸಕರು ಹೈಕಮಾಂಡ್ ಅಂಗಳದಲ್ಲಿ ಭಾರಿ ಲಾಬಿ ನಡೆಸುತ್ತಿರುವುದರಿಂದ ಕರ್ನಾಟಕದ ನೂತನ ಸಚಿವ ಸಂಪುಟ ರಚನೆ ಕಗ್ಗಂಟಾಗಿದೆ.

ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಿ ಲೋಕಭವನದಲ್ಲಿ ಬುಧವಾರ (ಜೂನ್ 3) ಸಂಜೆ ಪ್ರಮಾಣವಚನ ಸ್ವೀಕರಿಸಲಿದ್ದಾರೆ. ಅವರ ಜೊತೆಗೆ, ಮೊದಲ ಹಂತದಲ್ಲಿ 8ರಿಂದ 10 ಶಾಸಕರು ಸಚಿವರಾಗಿ ಪ್ರಮಾಣವಚನ ಸ್ವೀಕರಿಸುವ ಸಾಧ್ಯತೆ ಇದೆ. ರಾಜ್ಯಸಭೆ ಹಾಗೂ ವಿಧಾನ ಪರಿಷತ್ ಚುನಾವಣೆ ಮುಗಿದ ಬಳಿಕ ಮತ್ತೊಂದಷ್ಟು ಶಾಸಕರನ್ನು ಸಂಪುಟಕ್ಕೆ ಸೇರಿಸಿಕೊಳ್ಳಲು ಕಾಂಗ್ರೆಸ್ ಚಿಂತನೆ ನಡೆಸಿದೆ.

ಸಚಿವರ ಪಟ್ಟಿ ಅಂತಿಮಗೊಳಿಸಲು ಹಾಗೂ ರಾಜ್ಯಸಭಾ ಮತ್ತು ಪರಿಷತ್ ಅಭ್ಯರ್ಥಿಗಳ ಪಟ್ಟಿ ಆಖೈರುಗೊಳಿಸಲು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನೇತೃತ್ವದಲ್ಲಿ ಮಂಗಳವಾರ ಸಭೆ ನಡೆಯಲಿದೆ. ಈ ಸಭೆಯಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್, ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಉಸ್ತುವಾರಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಶಿವಕುಮಾರ್ ಭಾಗಿಯಾಗಿ ಪಟ್ಟಿಗೆ ಅಂತಿಮ ರೂಪ ನೀಡುವ ಕಸರತ್ತು ನಡೆಸಲಿದ್ದಾರೆ.

ವೇಣುಗೋಪಾಲ್ ಮನೆಗೆ ಸೋಮವಾರ ತೆರಳಿದ ಸುರ್ಜೇವಾಲಾ, ಅವರ ಜತೆ ಚರ್ಚೆ ನಡೆಸಿದ್ದಾರೆ. ಬಳಿಕ ವೇಣುಗೋಪಾಲ್ ಅವರ ಮನೆಗೆ ತೆರಳಿದ ಸಿದ್ದರಾಮಯ್ಯ, ಸಂಪುಟ ಸೇರಿಸಲು ಬಯಸುವ ತಮ್ಮ ಆಪ್ತರ ಪಟ್ಟಿಯನ್ನು ನೀಡಿದ್ದಾರೆ. ಅಲ್ಲದೆ, ಉಪ ಮುಖ್ಯಮಂತ್ರಿ ಹುದ್ದೆ ಸೃಷ್ಟಿ ಮತ್ತು ಕೆಪಿಸಿಸಿ ಅಧ್ಯಕ್ಷ ಸ್ಥಾನದ ಬಗ್ಗೆಯೂ ಸಮಾಲೋಚನೆ ನಡೆಸಿದ್ದಾರೆ. ಬಳಿಕ, ಶಿವಕುಮಾರ್ ಅವರ ಜತೆಯೂ ವೇಣುಗೋಪಾಲ್ ಚರ್ಚೆ ನಡೆಸಿದರು.

ಇದೇ ವೇಳೆ ಖರ್ಗೆಯವರನ್ನು ಭೇಟಿ ಮಾಡಿದ ಸತೀಶ ಜಾರಕಿಹೊಳಿ ಸಚಿವ ಸ್ಥಾನ ಮತ್ತು ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ಬೇಡಿಕೆ ಇಟ್ಟಿದ್ದಾರೆ ಎಂದು ಗೊತ್ತಾಗಿದೆ.

ಖರ್ಗೆ ನೇತೃತ್ವದಲ್ಲಿ ಸೋಮವಾರ ಸಂಜೆ ಸಭೆ ನಡೆಯಲಿದೆ ಎಂಬ ಸುದ್ದಿ ಹಬ್ಬಿತ್ತು. ಆದರೆ, ರಾತ್ರಿ 9 ಗಂಟೆಯವರೆಗೂ ರಾಜ್ಯ ನಾಯಕರಿಗೆ ಹೈಕಮಾಂಡ್‌ನಿಂದ ಆಹ್ವಾನ ಬರಲಿಲ್ಲ. ಆ ಬಳಿಕ, ಸಿದ್ದರಾಮಯ್ಯ ಅವರು ಸಂಸದ ಸುನಿಲ್ ಬೋಸ್ ಮನೆಗೆ ತೆರಳಿ ಭೋಜನಕೂಟದಲ್ಲಿ ಭಾಗಿಯಾದರು. ಬಳಿಕ ವೇಣುಗೋಪಾಲ್ ಮನೆಗೆ ತೆರಳಿ ಚರ್ಚೆ ನಡೆಸಿದರು.

ಆಕಾಂಕ್ಷಿಗಳ ದಂಡ ಯಾತ್ರೆ: ಸಚಿವ ಸ್ಥಾನದ ಆಕಾಂಕ್ಷಿಗಳಾದ 40ಕ್ಕೂ ಹೆಚ್ಚು ಶಾಸಕರು ರಾಷ್ಟ್ರ ರಾಜಧಾನಿಗೆ ದಂಡ ಯಾತ್ರೆ ನಡೆಸಿ, ವರಿಷ್ಠರ ಮೇಲೆ ಒತ್ತಡ ಹೇರುವ ಪ್ರಯತ್ನ ಮಾಡಿದರು. ಸಿದ್ದರಾಮಯ್ಯ ಸರ್ಕಾರದಲ್ಲಿ ಸಚಿವರಾಗಿದ್ದವರು ಮತ್ತೊಂದು ಅವಧಿಗೆ ಅವಕಾಶ ನೀಡಬೇಕು ಎಂದು ಹಕ್ಕೊತ್ತಾಯ ಮಂಡಿಸಿದರು. ಹಿರಿಯ ಶಾಸಕರಾದ ಕೆ.ಎಚ್. ಮುನಿಯಪ್ಪ, ಎಚ್.ಕೆ. ಪಾಟೀಲ, ಆರ್.ಬಿ. ತಿಮ್ಮಾಪುರ, ಎನ್. ಚಲುವರಾಯಸ್ವಾಮಿ, ಶಿವರಾಜ ತಂಗಡಗಿ, ಎಂ.ಸಿ. ಸುಧಾಕರ್ ಮತ್ತಿತರರು ದೆಹಲಿಯಲ್ಲಿ ಮೊಕ್ಕಾಂ ಹೂಡಿದ್ದಾರೆ. ಎರಡು ಮೂರು ಅವಧಿಗೆ ಶಾಸಕರಾಗಿದ್ದು ಈವರೆಗೆ ಸಚಿವ ಸ್ಥಾನ ಸಿಗದೇ ಇದ್ದವರು ಈ ಸಲ ತಮ್ಮನ್ನು ಪರಿಗಣಿಸಬೇಕು ಎಂದು ಪಟ್ಟು ಹಿಡಿದಿದ್ದಾರೆ. ಹಲವು ಶಾಸಕರು ಶಿವಕುಮಾರ್ ಹಾಗೂ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಮನವಿ ಮಾಡಿದ್ದಾರೆ.

ಪರಿಷತ್ ಸದಸ್ಯರಾದ ಬಿ.ಕೆ. ಹರಿಪ್ರಸಾದ್ ಹಾಗೂ ಸಲೀಂ ಅಹಮದ್ ಅವರು ಶಿವಕುಮಾರ್ ಅವರನ್ನು ಭೇಟಿ ಮಾಡಿ ಸಮಾಲೋಚನೆ ನಡೆಸಿದರು.

'ಮೂರು ಅವಧಿಯಿಂದ ಪರಿಷತ್ ಸದಸ್ಯನಾಗಿದ್ದೇನೆ. ಕಿತ್ತೂರು ಕರ್ನಾಟಕ ಹಾಗೂ ಮುಸ್ಲಿಂ ಕೋಟಾದಲ್ಲಿ ನನಗೆ ಸಚಿವ ಸ್ಥಾನ ನೀಡಬೇಕು' ಎಂದು ಸಲೀಂ ಅಹಮದ್ ಆಗ್ರಹಿಸಿದರು.

ಸಚಿವ ಸ್ಥಾನದ ಆಕಾಂಕ್ಷಿಯಾಗಿದ್ದೇನೆ. ಮಾಡುವುದಾಗಿ ಹೈಕಮಾಂಡ್ ಭರವಸೆಯನ್ನೂ ಕೊಟ್ಟಿದೆ. ಹೀಗಾಗಿ, ನಿರೀಕ್ಷೆಯಲ್ಲಿದ್ದೇನೆ. ಡಿಸಿಎಂ ಬೇಡಿಕೆಯನ್ನು ಇಟ್ಟಿಲ್ಲ, ಹೈಕಮಾಂಡ್ ಏನು ಮಾಡುತ್ತದೆಯೋ ಗೊತ್ತಿಲ್ಲ
ಡಾ.ಯತೀಂದ್ರ ಸಿದ್ದರಾಮಯ್ಯ, ವಿಧಾನಪರಿಷತ್ ಸದಸ್ಯ

ಡಿಸಿಎಂ ಸ್ಥಾನ: ಇನ್ನೂ ಅಸ್ಪಷ್ಟ

ಶಿವಕುಮಾರ್ ನೇತೃತ್ವದ ಮುಂದಿನ ಸರ್ಕಾರದಲ್ಲಿ ಉಪ ಮುಖ್ಯಮಂತ್ರಿ (ಡಿಸಿಎಂ) ಸ್ಥಾನ ಸೃಷ್ಟಿ ಪ್ರಸ್ತಾವವನ್ನು ಕೈಬಿಡುವ ನಿರ್ಧಾರಕ್ಕೆ ಕಾಂಗ್ರೆಸ್ ಹೈಕಮಾಂಡ್ ಬಂದಿತ್ತು. ಈ ಸ್ಥಾನ ಸೃಷ್ಟಿಗೆ ಸಿದ್ದರಾಮಯ್ಯ ಒಲವು ಹೊಂದಿರುವುದರಿಂದಾಗಿ, ಈ ವಿಷಯದಲ್ಲಿ ಗೊಂದಲ ಮುಂದುವರಿದಿದೆ.

ಮೊದಲ ಹಂತದ ಸಂಪುಟ ರಚನೆಯಲ್ಲಿ ತಮ್ಮ ಬೆಂಬಲಿಗರಿಗೆ ಹೆಚ್ಚಿನ ಸ್ಥಾನ ನೀಡುವಂತೆಯೂ ಹೈಕಮಾಂಡ್ ಮುಂದೆ ಸಿದ್ದರಾಮಯ್ಯ ಬೇಡಿಕೆ ಮಂಡಿಸಿದ್ದಾರೆ ಎಂದು ಗೊತ್ತಾಗಿದೆ. ಆದರೆ, ಹೊಸ ಮುಖಗಳಿಗೆ ಅವಕಾಶ ನೀಡಲು ಶಿವಕುಮಾರ್ ಉತ್ಸುಕರಾಗಿದ್ದಾರೆ.

ವಿಶೇಷ ವಿಮಾನದಲ್ಲಿ ಸಿದ್ದರಾಮಯ್ಯ ಮತ್ತು ಶಿವಕುಮಾರ್ ಅವರು ಸೋಮವಾರ ಬೆಳಿಗ್ಗೆ ದೆಹಲಿಗೆ ತೆರಳಿದರು. ಎಚ್.ಸಿ. ಮಹದೇವಪ್ಪ, ಎಂ.ಬಿ. ಪಾಟೀಲ, ಬೈರತಿ ಸುರೇಶ್, ಕೆ.ಜೆ. ಜಾರ್ಜ್, ಎ.ಎಸ್. ಪೊನ್ನಣ್ಣ, ಯತೀಂದ್ರ ಸಿದ್ದರಾಮಯ್ಯ ಅವರೂ ಜೊತೆಯಲ್ಲಿಯೇ ದೆಹಲಿಗೆ ಪ್ರಯಾಣ ಬೆಳೆಸಿದರು ಇದೇ ವೇಳೆ ದೆಹಲಿಗೆ ತೆರಳಲು ಎಚ್‌ಎಎಲ್ ವರೆಗೂ ಸಿದ್ದರಾಮಯ್ಯ ಜೊತೆಯಲ್ಲಿ ತೆರಳಿದ್ದ ಜಮೀರ್ ಅಹಮದ್ ಖಾನ್ ತಮ್ಮ ಕುರಿತ ಆಡಿಯೊ ವೈರಲ್ ಆಗಿರುವ ಕಾರಣ ವಾಪಸಾಗಿದ್ದಾರೆ. 'ಈ ಸಮಯದಲ್ಲಿ ನೀವು ನಮ್ಮೊಂದಿಗೆ ದೆಹಲಿಗೆ ಬರುವುದು ಬೇಡ' ಎಂದು ಸಿದ್ದರಾಮಯ್ಯ ಅವರೇ ಜಮೀರ್‌ಗೆ ಸಲಹೆ ನೀಡಿದರೆಂದು ಗೊತ್ತಾಗಿದೆ. ಹಲವು ಶಾಸಕರು ಸಂಪುಟ ಸೇರ್ಪಡೆ ಇಂಗಿತ ವ್ಯಕ್ತಪಡಿಸಿದ್ದಾರೆ. ಯು.ಟಿ. ಖಾದರ್ ಅವರು, 'ನನ್ನ ಕೆಲಸ ನೋಡಿ ಜವಾಬ್ದಾರಿ ನೀಡಲಿದ್ದಾರೆ' ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಜಿ.ಎಚ್. ಶ್ರೀನಿವಾಸ್, ಎನ್.ಎ. ಹ್ಯಾರಿಸ್, ರೂಪಕಲಾ ಶಶಿಧರ್, ಕೆ.ಎಂ. ಶಿವಲಿಂಗೇಗೌಡ ಸೇರಿದಂತೆ ಹಲವರು ಸಚಿವ ಸ್ಥಾನ ಸಿಗುವ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ರಾಜ್ಯದ ನಾನಾ ಭಾಗದ ಸ್ವಾಮೀಜಿಗಳಿಂದ ಭೇಟಿ

ಉಸ್ತುವಾರಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿ ಮಾಡಿದ 25ಕ್ಕೂ ಸ್ವಾಮೀಜಿಗಳು ಅವರ ಜತೆ ಸಮಾಲೋಚನೆ ನಡೆಸಿದರು.

ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ವಾಲ್ಮೀಕಿ ಪ್ರಸನ್ನಾನಂದ, ಚಿತ್ರದುರ್ಗದ ಭೋವಿ ಗುರುಪೀಠದ ಇಮ್ಮಡಿ ಸಿದ್ದರಾಮೇಶ್ವರ, ಚಿತ್ರದುರ್ಗದ ಮಾದರ ಚನ್ನಯ್ಯ ಗುರುಪೀಠದ ಮಾದಾರ ಚನ್ನಯ್ಯ, ಹೊಸದುರ್ಗದ ಕುಂಚಟಿಗ ಮಠದ ಶಾಂತವೀರ ಸ್ವಾಮೀಜಿ, ಭಗೀರಥ ಮಠದ ಪುರುಷೋತ್ತಮಾನಂದಪುರಿ, ಅಥಣಿ ಗಚ್ಚಿನಮಠದ ಶಿವಬಸವ, ಟಿ.ನರಸೀಪುರ ತಾಲ್ಲೂಕಿನ ಚಿದರವಳ್ಳಿ–ಬೊಮ್ಮನಹಳ್ಳಿಯ ಪಾರಮಾರ್ಥ ಗವಿ ಮಠದ ಮಲ್ಲಿಕಾರ್ಜುನ ಸ್ವಾಮೀಜಿ, ಮಡಿವಾಳ ಗುರುಪೀಠದ ಬಸವ ಮಾಚಿದೇವ ಸ್ವಾಮೀಜಿ ಸೇರಿದಂತೆ ರಾಜ್ಯದ ನಾನಾ ಭಾಗದ 25ಕ್ಕೂ ಹೆಚ್ಚು ಪೀಠಾಧಿಪತಿಗಳು ಈ ತಂಡದಲ್ಲಿದ್ದರು.

ಶಾಲಾ ಪ್ರಾರಂಭ...

ಪ್ರಜಾವಾಣಿ ಚಿತ್ರ: ಕಿಶೋರ್ ಕುಮಾರ್ ಬೋಳಾರ್

ರಾಜ್ಯದಾದ್ಯಂತ ಸರ್ಕಾರಿ ಶಾಲೆಗಳು ಸೋಮವಾರ ಪುನರಾರಂಭಗೊಂಡಿದ್ದು, ಬೆಂಗಳೂರು ನಗರದ ಶಾಲೆಯೊಂದರ ಮಕ್ಕಳ ಸಂಭ್ರಮ

ಬೆಂಗಳೂರಿನಲ್ಲಿ ಇಲ್ಲ ವಿಜಯೋತ್ಸವ

ಅಹಮದಾಬಾದ್ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಸತತ ಎರಡನೇ ಬಾರಿ ಪ್ರಶಸ್ತಿ ಗೆದ್ದಿರುವ ಆರ್‌ಸಿಬಿ ತಂಡದ ವಿಜಯಯಾತ್ರೆಯನ್ನು ಬೆಂಗಳೂರಿನಲ್ಲಿ ನಡೆಸದಿರಲು ಫ್ರಾಂಚೈಸಿ ನಿರ್ಧರಿಸಿದೆ.

ಹೋದ ವರ್ಷ ಆರ್‌ಸಿಬಿ ಪ್ರಶಸ್ತಿ ಜಯಿಸಿದಾಗ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ವಿಜಯೋತ್ಸವ ಆಯೋಜಿಸಲಾಗಿತ್ತು. ಆದರೆ ಆ ಸಂದರ್ಭದಲ್ಲಿ ಕ್ರೀಡಾಂಗಣದ ಬಳಿ ಕಾಲ್ತುಳಿತ ಸಂಭವಿಸಿದ್ದರಿಂದ 11 ಅಭಿಮಾನಿಗಳು ಮೃತಪಟ್ಟಿದ್ದರು. ಆದ್ದರಿಂದ ಈ ಸಲ ಬೆಂಗಳೂರಿನಲ್ಲಿ ವಿಜಯಯಾತ್ರೆಯನ್ನು ಆಯೋಜಿಸಲಾಗುತ್ತಿಲ್ಲ.

ಅಲ್ಲದೇ ಬುಧವಾರ ಸಂಜೆ ಲೋಕಭವನದಲ್ಲಿ ಡಿ.ಕೆ. ಶಿವಕುಮಾರ್ ಅವರು ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸುವ ಕಾರ್ಯಕ್ರಮವೂ ಇದೆ. ಈ ಸಂದರ್ಭದಲ್ಲಿ ಜನರು ಹೆಚ್ಚಿನ ಸಂಖ್ಯೆಯಲ್ಲಿ ಸೇರುವ ಸಾಧ್ಯತೆ ಇದೆ. ಬೇರೆ ಬೇರೆ ರಾಜ್ಯಗಳಿಂದ ಗಣ್ಯರೂ ಬರುವ ಸಾಧ್ಯತೆ ಇದೆ. ಆದ್ದರಿಂದ ಜನಜಂಗುಳಿ ಹೆಚ್ಚಾಗುವ ನಿರೀಕ್ಷೆ ಇದೆ. ಪೊಲೀಸ್ ಸಿಬ್ಬಂದಿಯ ನಿಯೋಜನೆಯೂ ಸವಾಲಿನದ್ದಾಗಿದೆ.

ಆದ್ದರಿಂದ ನಗರದ ರಸ್ತೆಗಳಲ್ಲಿ ಮೆರವಣಿಗೆ ಅಥವಾ ವಿಜಯಯಾತ್ರೆ ಮಾಡದಿರಲು ಆರ್‌ಸಿಬಿ ನಿರ್ಧರಿಸಿದೆ ಎನ್ನಲಾಗಿದೆ.

'ಪೊಲೀಸ್ ಇಲಾಖೆಯಿಂದ ನೀಡಿರುವ ಮಾರ್ಗಸೂಚಿಯನ್ನು ಪಾಲಿಸಲು ನಾವು ಬದ್ಧರಾಗಿದ್ದೇವೆ. ಸದ್ಯಕ್ಕೆ ಬೆಂಗಳೂರಿನಲ್ಲಿ ಯಾವುದೇ ಕಾರ್ಯಕ್ರಮದ ಯೋಚನೆ ಇಲ್ಲ' ಎಂದು ಆರ್‌ಸಿಬಿಯ ಮೂಲಗಳು ತಿಳಿಸಿವೆ.

'ಯಾವುದೇ ಸಾರ್ವಜನಿಕ ಕಾರ್ಯಕ್ರಮಗಳಿಗೆ ಅವಕಾಶ ನೀಡುವುದಿಲ್ಲ. ಅಭಿಮಾನಿಗಳು ಒಳಾಂಗಣಗಳಲ್ಲಿ ಸಂಭ್ರಮ ಆಚರಿಸಿಕೊಳ್ಳಬಹುದು' ಎಂದು ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್ ಹೇಳಿದ್ದಾರೆ.

ಆರ್‌ಸಿಬಿಯಲ್ಲಿರುವ ಕರ್ನಾಟಕದ ಆಟಗಾರ ದೇವದತ್ತ ಪಡಿಕ್ಕಲ್ ಅವರು ಬುಧವಾರ ಮುಲ್ಲನಪುರಕ್ಕೆ ತೆರಳಲಿದ್ದಾರೆ. ಅಫ್ಗಾನಿಸ್ತಾನ ಎದುರಿನ ಏಕೈಕ ಟೆಸ್ಟ್ ಆಡಲಿರುವ ಭಾರತ ತಂಡವನ್ನು ಅವರು ಸೇರಿಕೊಳ್ಳಲಿದ್ದಾರೆ.

ವಾಣಿಜ್ಯ ಎಲ್‌ಪಿಜಿ ದರ ₹42 ಏರಿಕೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲೋತ್ಪನ್ನ ಮಾರಾಟ ಕಂಪನಿಗಳು ವಾಣಿಜ್ಯ ಉದ್ದೇಶಕ್ಕೆ ಬಳಸುವ ಎಲ್‌ಪಿಜಿ ಸಿಲಿಂಡರ್ ಮತ್ತು 5 ಕೆ.ಜಿ ತೂಕದ ಸಿಲಿಂಡರ್ ದರವನ್ನು ಏರಿಕೆ ಮಾಡಿವೆ. ಇದೇ ವೇಳೆ ಅಂತರರಾಷ್ಟ್ರೀಯ ಮಾರ್ಗದಲ್ಲಿ ಸಂಚರಿಸುವ ವಿಮಾನಗಳಲ್ಲಿ ಬಳಸುವ ಇಂಧನ ಬೆಲೆಯನ್ನು ಕಡಿಮೆ ಮಾಡಿದೆ.

ಪರಿಷ್ಕೃತ ದರವು ಸೋಮವಾರದಿಂದಲೇ ಜಾರಿಗೆ ಬಂದಿದೆ. ವಾಣಿಜ್ಯ ಉದ್ದೇಶದ 19 ಕೆ.ಜಿ ತೂಕದ ಎಲ್‌ಪಿಜಿ ಸಿಲಿಂಡರ್ ದರ ₹42ರಷ್ಟು ಹೆಚ್ಚಳವಾಗಿದೆ. ಮೇ 1ರಂದು ವಾಣಿಜ್ಯ ಸಿಲಿಂಡರ್ ದರ ₹993ರಷ್ಟು ಹೆಚ್ಚಳವಾಗಿತ್ತು.

5 ಕೆ.ಜಿ ತೂಕದ ಎಫ್‌ಟಿಎಲ್ ಸಿಲಿಂಡರ್ ದರ ₹11ರಷ್ಟು ಹೆಚ್ಚಳವಾಗಿ, ₹821.50 ಆಗಿದೆ ಎಂದು ಕಂಪನಿಗಳು ಸೋಮವಾರ ತಿಳಿಸಿವೆ. ಮನೆಗಳಲ್ಲಿ ಬಳಸುವ 14.2 ಕೆ.ಜಿ ತೂಕದ ಸಿಲಿಂಡರ್ ದರವು ಬದಲಾಗಿಲ್ಲ.

ಎಟಿಎಫ್ ದರ ಇಳಿಕೆ: ಅಂತರರಾಷ್ಟ್ರೀಯ ಮಾರ್ಗಗಳಲ್ಲಿ ಸಂಚರಿಸುವ ವಿಮಾನಗಳಲ್ಲಿ ಬಳಸುವ ಇಂಧನ (ಎಟಿಎಫ್) ದರವನ್ನು ಶೇ 27ರಷ್ಟು ಇಳಿಕೆ ಮಾಡಲಾಗಿದೆ. ದೇಶಿ ಮಾರ್ಗದಲ್ಲಿ ಸಂಚರಿಸುವ ವಿಮಾನಗಳ ಇಂಧನ ದರದಲ್ಲಿ ಬದಲಾವಣೆ ಆಗಿಲ್ಲ.

ಆರ್ಯನ್ ಕರ್ನಾಟಕಕ್ಕೆ ಮೊದಲಿಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಂಟಿ ಪ್ರವೇಶ ಪರೀಕ್ಷೆ (ಜೆಇಇ ಅಡ್ವಾನ್ಸ್ಡ್) ಫಲಿತಾಂಶ ಪ್ರಕಟವಾಗಿದ್ದು, ಬೆಂಗಳೂರಿನ ಆರ್ಯನ್ ರಘುಪತಿ ರಾಜ್ಯಕ್ಕೆ ಮೊದಲಸ್ಥಾನ ಪಡೆದಿದ್ದಾರೆ.

ಆರ್ಯನ್

ಜೆಇಇ ಅಡ್ವಾನ್ಸ್ಡ್

ರಾಜ್ಯಕ್ಕೆ ಮೊದಲಿಗರಾದ ಬೆಂಗಳೂರಿನ ಎಮರಾಲ್ಡ್ ಇಂಟರ್‌ನ್ಯಾಷನಲ್ ಸ್ಕೂಲ್ ವಿದ್ಯಾರ್ಥಿ ಆರ್ಯನ್ ಅಖಿಲ ಭಾರತ ಮಟ್ಟದಲ್ಲಿ 12ನೇ ಸ್ಥಾನ, ಸಹಕಾರ ನಗರದ ನಾರಾಯಣ ಒಲಿಂಪಿಯಾಡ್ ಶಾಲೆಯ ವಿದ್ಯಾರ್ಥಿ ಮನು ಪರಮೇಶ್ವರನ್ 13ನೇ ಸ್ಥಾನ ಗಳಿಸಿ ರಾಜ್ಯದಲ್ಲಿ ಎರಡನೇ ಸ್ಥಾನ ಪಡೆದಿದ್ದಾರೆ. ಇಬ್ಬರೂ ಎಂಜಿನಿಯರ್‌ಗಳ ಕುಟುಂಬದಿಂದ ಬಂದವರು. ಕರ್ನಾಟಕದ ಯಾವ ವಿದ್ಯಾರ್ಥಿಯೂ ರಾಷ್ಟ್ರ ಮಟ್ಟದ ಅಗ್ರ 10 ಸ್ಥಾನಗಳ ಪಟ್ಟಿಯಲ್ಲಿ ಸ್ಥಾನ ಪಡೆದಿಲ್ಲ.

▸5

ಬಾಲಕರೇ ಮೇಲುಗೈ

ನವದೆಹಲಿ (ಪಿಟಿಐ): ಭಾರತೀಯ ತಂತ್ರಜ್ಞಾನ ಸಂಸ್ಥೆಗಳು (ಐಐಟಿ) ಮತ್ತು ದೇಶದ ಪ್ರಮುಖ ಎಂಜಿನಿಯರಿಂಗ್ ಶಿಕ್ಷಣ ಸಂಸ್ಥೆಗಳ ಪ್ರವೇಶಕ್ಕೆ ನಡೆದ ಜೆಇಇ–ಅಡ್ವಾನ್ಸ್ಡ್–2026ರ ಪರೀಕ್ಷೆಯ ಫಲಿತಾಂಶ ಸೋಮವಾರ ಪ್ರಕಟವಾಗಿದ್ದು, ಐಐಟಿ ದೆಹಲಿ ವಲಯದ ಶುಭಂ ಕುಮಾರ್ 360ಕ್ಕೆ 330 ಅಂಕಗಳನ್ನು ಪಡೆಯುವ ಮೂಲಕ ಅಗ್ರ ಸ್ಥಾನ ಪಡೆದಿದ್ದಾರೆ. ಪರೀಕ್ಷೆ ಬರೆದ 1,79,694 ಅಭ್ಯರ್ಥಿಗಳ ಪೈಕಿ 56,880 ಅಭ್ಯರ್ಥಿಗಳು ಅರ್ಹತೆ ಪಡೆದಿದ್ದಾರೆ. ಇವರಲ್ಲಿ 46,773 ಬಾಲಕರಾಗಿದ್ದರೆ, 10,107 ಬಾಲಕಿಯರು. ಒಬ್ಬ ತೃತೀಯ ಲಿಂಗಿ ಅಭ್ಯರ್ಥಿ ಪರೀಕ್ಷೆ ಬರೆದಿದ್ದರೂ ಅರ್ಹತೆ ಪಡೆಯುವಲ್ಲಿ ವಿಫಲರಾಗಿದ್ದಾರೆ. ನೋಂದಾಯಿಸಿದ್ದ 3,052 ಅಂಗವಿಕಲ ಅಭ್ಯರ್ಥಿಗಳ ಪೈಕಿ 887 ಮಂದಿ ಅರ್ಹತೆ ಪಡೆದಿದ್ದಾರೆ.

ಅಗ್ರಸ್ಥಾನ ಪಡೆದಿರುವ ಶುಭಂ ಅವರು ಬಿಹಾರದ ಗಯಾದವರು. 329 ಅಂಕಗಳನ್ನು ಪಡೆದಿರುವ ಕಬೀರ್ ಚಿಲ್ಲರ್ ಎರಡನೇ ಸ್ಥಾನ ಮತ್ತು 319 ಅಂಕಗಳನ್ನು ಪಡೆದಿರುವ ಜತಿನ್ ಚಾಹರ್ ಮೂರನೇ ಸ್ಥಾನ ಪಡೆದಿದ್ದಾರೆ.

▸5

'ಸಾಮಾಜಿಕ ಮಾಧ್ಯಮದಿಂದ ದೂರವಿದ್ದದ್ದು ನೆರವಾಯಿತು'

ಕೋಟಾ (ಪಿಟಿಐ): 'ಸಾಮಾಜಿಕ ಮಾಧ್ಯಮಗಳಿಂದ ದೂರವಿದ್ದದ್ದು ಮತ್ತು ಕೋಟಾಗೆ ಸಂಬಂಧಿಸಿದಂತೆ ಬರುತ್ತಿದ್ದ ನಕಾರಾತ್ಮಕ ಸುದ್ದಿಗಳತ್ತ ಲಕ್ಷ್ಯ ಕೊಡದೇ ಇದ್ದುದ್ದರಿಂದ ಜೆಇಇ–ಅಡ್ವಾನ್ಸ್ಡ್‌ನಲ್ಲಿ ಅಗ್ರಸ್ಥಾನ ಪಡೆಯಲು ಸಾಧ್ಯವಾಯಿತು' ಎಂದು ಬಿಹಾರದ ಗಯಾದ ಶುಭಂ ಕುಮಾರ್ ಪ್ರತಿಕ್ರಿಯಿಸಿದರು.

▸5

ಜಿರಳೆ ಪಕ್ಷದ ದೀಪ್ಕೆ ಭಾರತಕ್ಕೆ

ನವದೆಹಲಿ (ಪಿಟಿಐ): ಸಾಮಾಜಿಕ ಮಾಧ್ಯಮದಲ್ಲಿ ಕಾಕ್ರೋಚ್ ಜನತಾ ಪಾರ್ಟಿ (ಸಿಜೆಪಿ) ಹೆಸರಿನ ಖಾತೆಯೊಂದರ ಮೂಲಕ ಸಂಚಲನ ಸೃಷ್ಟಿಸಿರುವ ಅಭಿಜೀತ್ ದೀಪ್ಕೆ ಅವರು ಭಾರತಕ್ಕೆ ಜೂನ್ 6ರಂದು ಬರಲಿದ್ದಾರೆ.

ನೀಟ್ ಪರೀಕ್ಷೆ ಪ್ರಶ್ನೆಪತ್ರಿಕೆ ಸೋರಿಕೆ ಹಾಗೂ ಶಿಕ್ಷಣ ಸಚಿವಾಲಯದ ಇತರ ಲೋಪಗಳಿಗೆ ಸಂಬಂಧಿಸಿದಂತೆ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರ ರಾಜೀನಾಮೆಗೆ ಆಗ್ರಹಿಸಿ ಪ್ರತಿಭಟನೆ ನಡೆಸುವುದಾಗಿ ವಿಡಿಯೊ ಮೂಲಕ ಅವರು ತಿಳಿಸಿದ್ದಾರೆ.

'ಜೂನ್ 6ರ ಶನಿವಾರ ಬೆಳಿಗ್ಗೆ ದೆಹಲಿಗೆ ಬರಲಿದ್ದೇನೆ. ವಿಮಾನ ನಿಲ್ದಾಣದಲ್ಲೇ ಆಸಕ್ತರು ನನ್ನ ಜತೆಗೂಡಿ. ಜಂತರ್‌ಮಂತರ್‌ನಲ್ಲಿ ಶಾಂತಿಯುತವಾಗಿ ಪ್ರತಿಭಟಿಸಲು ಅನುಮತಿ ಕೋರಲಿಕ್ಕಾಗಿ ಪಾರ್ಲಿಮೆಂಟ್ ಸ್ಟ್ರೀಟ್ ಪೊಲೀಸ್ ಠಾಣೆಗೆ ಎಲ್ಲರೂ ಹೋಗೋಣ' ಎಂದು ಅವರು ಆಹ್ವಾನವಿತ್ತಿದ್ದಾರೆ.

ಅಭಿಜೀತ್ ದೀಪ್ಕೆ

'ನಾವೆಲ್ಲರೂ ಒಗ್ಗೂಡಿ ಧರ್ಮೇಂದ್ರ ಪ್ರಧಾನ್ ಅವರ ರಾಜೀನಾಮೆಗೆ ಆಗ್ರಹಿಸಿ ಶಾಂತಿಯುತವಾಗಿ ಧ್ವನಿ ಎತ್ತುವ ಸಮಯ ಬಂದಿದೆ. ಒಟ್ಟಿಗೆ ಧ್ವನಿ ಎತ್ತಿದರೆ ಅವರು ಖಂಡಿತವಾಗಿಯೂ ನಮ್ಮ ಮಾತನ್ನು ಕೇಳಬೇಕಾಗುತ್ತದೆ' ಎಂದು ವಿಡಿಯೊದಲ್ಲಿ ಹೇಳಿದ್ದಾರೆ.

ಕೇಂದ್ರ ಶಿಕ್ಷಣ ಸಚಿವರ ರಾಜೀನಾಮೆಗೆ ಆಗ್ರಹಿಸಿ ಶಾಂತಿಯುತವಾಗಿ ಪ್ರತಿಭಟನೆ ನಡೆಸಲಿದ್ದು, ವಿದ್ಯಾರ್ಥಿಗಳು ಹಾಗೂ ಬೆಂಬಲಿಗರು ಇದರಲ್ಲಿ ಭಾಗಿಯಾಗಬೇಕು ಎಂದು ಮನವಿ ಮಾಡಿದ್ದಾರೆ.

ಜಿಎಸ್‌ಟಿ: ₹1.94 ಲಕ್ಷ ಕೋಟಿ

ನವದೆಹಲಿ (ಪಿಟಿಐ): ಸರಕು ಮತ್ತು ಸೇವೆಗಳಿಗೆ ಹೆಚ್ಚಿನ ಬೇಡಿಕೆ ಬಂದಿದ್ದರಿಂದಾಗಿ ಮೇ ತಿಂಗಳಲ್ಲಿ ಸರಕು ಮತ್ತು ಸೇವಾ ತೆರಿಗೆ ಮೂಲಕ ₹1.94 ಲಕ್ಷ ಕೋಟಿ ವರಮಾನ ಸಂಗ್ರಹ ಆಗಿದೆ.

ವಿವರ ಪುಟ ▸8

ಚಿನಕುರುಳಿ ಪ್ರಕಾಶ್ ಶೆಟ್ಟಿ

ಕೈ–ಕಾಲು ಕತ್ತರಿಸಿದರೆ ಕಾನೂನು ಪಾಲನೆ: ನ್ಯಾಯಮೂರ್ತಿ ನಟರಾಜ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಧ್ಯಪ್ರಾಚ್ಯ ರಾಷ್ಟ್ರಗಳ ರೀತಿಯಲ್ಲೇ ನಮ್ಮಲ್ಲೂ ಕೈ–ಕಾಲು ಕತ್ತರಿಸುವಂತಾದರೆ ಜನರು ಕಾನೂನು ಪಾಲನೆಗೆ ಮುಂದಾಗುತ್ತಾರೆ' ಎಂದು ಹೈಕೋರ್ಟ್ ನ್ಯಾಯಮೂರ್ತಿ ಆರ್.ನಟರಾಜ್ ಮೌಖಿಕವಾಗಿ ಅಭಿಪ್ರಾಯಪಟ್ಟಿದ್ದಾರೆ.

ಇತ್ತೀಚೆಗೆ ರಜಾಕಾಲದ ಏಕಸದಸ್ಯ ನ್ಯಾಯಪೀಠದಲ್ಲಿದ್ದ ಅವರು, ಅತ್ಯಾಚಾರ ಆರೋಪದಡಿ ಬಂಧಿತರಾಗಿ ರುವ ತೆಲಂಗಾಣದ ತರುಣರೊಬ್ಬರು (23) ಸಲ್ಲಿಸಿದ್ದ ಜಾಮೀನು ಅರ್ಜಿ ವಿಚಾರಣೆಯ ವೇಳೆ ಈ ಮಾತುಗಳನ್ನಾಡಿದ್ದಾರೆ.

ಅರ್ಜಿದಾರರರ ಪರ ವಕೀಲರು, 'ಅರ್ಜಿದಾರ ಯಾವುದೇ ಅಪರಾಧ ಎಸಗಿಲ್ಲ. ಮೂರು ವರ್ಷಗಳ ಹಿಂದೆ ನಡೆದ ಪ್ರಕರಣದಲ್ಲಿ ಬಂಧಿಸಿ ಈಗ ಅವರನ್ನು ಜೈಲಿನಲ್ಲಿ ಇರಿಸಲಾಗಿದೆ. ಅರವತ್ತು ದಿನಗಳಿಂದ ಜೈಲಿನಲ್ಲಿದ್ದಾರೆ. ಇದು ಅವರ ವೃತ್ತಿ ಬದುಕಿಗೆ ಹಾನಿಯುಂಟು ಮಾಡಲಿದೆ. ಆದ್ದರಿಂದ, ಜಾಮೀನು ನೀಡಬೇಕು' ಎಂದು ಮನವಿ ಮಾಡಿದ್ದರು.

ನ್ಯಾ.ನಟರಾಜ್

ಇದಕ್ಕೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದ ನ್ಯಾಯಮೂರ್ತಿ, 'ನಮ್ಮ ಪ್ರಜಾಪ್ರಭುತ್ವದಲ್ಲಿ ಅಪರಾಧ ಎಸಗುವುದು ಸುಲಭ ಎನಿಸಿಬಿಟ್ಟಿದೆ. ಅಪರಾಧಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳದೇ ಇರುವ ಕಾರಣ ನಮ್ಮ ಕಾನೂನುಗಳು ಹಲ್ಲು ಕಳೆದುಕೊಂಡಿವೆ. ಬಹುಶಃ ಮಧ್ಯಪ್ರಾಚ್ಯ ದೇಶಗಳಲ್ಲಿ ನೀಡಲಾಗುವ ಕಠಿಣ ಶಿಕ್ಷೆಯನ್ನು ನಮ್ಮಲ್ಲೂ ತಪ್ಪಿತಸ್ಥರಿಗೆ ನೀಡುವಂತಾದರೆ ನಮ್ಮ ಜನರು ತಕ್ಕ ರೀತಿಯಲ್ಲಿ ಕಾನೂನು ಪಾಲಿಸುತ್ತಾರೆ' ಎಂದು ನುಡಿದಿದ್ದಾರೆ.

▸2A

ಪ್ರಕರಣವೇನು?

ಮಹಿಳಾ ಪೊಲೀಸ್ ಠಾಣೆಗೆ ದೂರು ನೀಡಿದ್ದ ತರುಣಿ (23), 'ಆರೋಪಿ ಮತ್ತು ನಾನು ಕರ್ನಾಟಕದಲ್ಲಿನ ಎಂಜಿನಿಯರಿಂಗ್ ಕಾಲೇಜಿನಲ್ಲಿ ಸಹಪಾಠಿಗಳಾಗಿದ್ದೆವು. 2023ರ ಜುಲೈನಲ್ಲಿ ಆತ ನನಗೆ ಪ್ರೇಮ ನಿವೇದನೆ ಮಾಡಿದ್ದ. ಅದಕ್ಕೆ ನಾನು ಸ್ಪಂದಿಸಿದ್ದೆ. ನಂತರದಲ್ಲಿ ಅವನ ನಡವಳಿಕೆ ಇಷ್ಟವಾಗದ ಕಾರಣ ಅಂತರ ಕಾಯ್ದುಕೊಂಡಿದ್ದೆ. 2023ರ ಸೆಪ್ಟೆಂಬರ್ 12ರಂದು ಆತ ನನ್ನನ್ನು ಪುಸಲಾಯಿಸಿ ನಮ್ಮ ಸಂಬಂಧದ ಬಗ್ಗೆ ಚರ್ಚಿಸಲು ತಾನಿದ್ದ ಅಪಾರ್ಟ್‌ಮೆಂಟ್‌ಗೆ ಕರೆಯಿಸಿಕೊಂಡಿದ್ದ. ಈ ವೇಳೆ ಆತ ನನ್ನ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾನೆ. ಇದರಿಂದ ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನೂ ಪಡೆದಿದ್ದೇನೆ' ಎಂದು ದೂರಿನಲ್ಲಿ ವಿವರಿಸಿದ್ದರು. ಇದರ ಆಧಾರದಲ್ಲಿ ಪೊಲೀಸರು ಅರ್ಜಿದಾರರ ವಿರುದ್ಧ ಅತ್ಯಾಚಾರ ಆರೋಪದ ಪ್ರಕರಣ ದಾಖಲಿಸಿ ಬಂಧಿಸಿದ್ದರು.

ರಾಜ್ಯಪಾಲ ಗೆಹಲೋತ್ ಸುಗಮ ಸಂಚಾರಕ್ಕಾಗಿ ಅರ್ಧ ಗಂಟೆ ರಸ್ತೆ ಬಂದ್

ಗರ್ಭಿಣಿ ಪತ್ನಿಗೆ ತೊಂದರೆ: ಪತಿ ಧರಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರ ಸುಗಮ ಸಂಚಾರಕ್ಕಾಗಿ 'ಜೀರೋ ಟ್ರಾಫಿಕ್' ವ್ಯವಸ್ಥೆ ಮಾಡಿದ್ದಕ್ಕೆ ಬೇಸತ್ತ ವ್ಯಕ್ತಿಯೊಬ್ಬರು ರಸ್ತೆ ಮಧ್ಯೆ ಕುಳಿತು ಪ್ರತಿಭಟಿಸಿರುವುದು ಎಚ್‌ಎಎಲ್ ಹಳೇ ವಿಮಾನ ನಿಲ್ದಾಣ ರಸ್ತೆಯಲ್ಲಿ ಭಾನುವಾರ ನಡೆದಿದೆ.

ರಾಜ್ಯಪಾಲರ ಸಂಚಾರಕ್ಕಾಗಿ ಸಂಚಾರ ಪೊಲೀಸರು ಈ ರಸ್ತೆಯನ್ನು ಅರ್ಧ ಗಂಟೆ ಸಂಪೂರ್ಣವಾಗಿ ಬಂದ್ ಮಾಡಿದ್ದರು. ರಸ್ತೆಯ ಈ ಭಾಗದಲ್ಲಿ ಅಂಡರ್‌ಪಾಸ್ ನಿರ್ಮಾಣ ಕಾರ್ಯ ನಡೆಯುತ್ತಿರುವುದರಿಂದ ಸಂಚರಿಸಲು ಇಕ್ಕಟ್ಟಾಗಿದೆ. ಇದರ ನಡುವೆ ನಿರ್ಬಂಧ ವಿಧಿಸಿದ್ದರ ಪರಿಣಾಮ ದಟ್ಟಣೆ ಉಂಟಾಗಿ ನೂರಾರು ಪ್ರಯಾಣಿಕರು ಸಮಸ್ಯೆ ಎದುರಿಸಬೇಕಾಯಿತು.

ಇದಕ್ಕೆ ಆಕ್ರೋಶ ವ್ಯಕ್ತಪಡಿಸಿದ ವ್ಯಕ್ತಿ, ರಸ್ತೆ ಮಧ್ಯೆ ಕುಳಿತು ಪ್ರತಿಭಟನೆ ನಡೆಸಿದರು. ರಸ್ತೆಯಲ್ಲಿ ಕುಳಿತಿದ್ದ ವ್ಯಕ್ತಿಯ ಬಳಿ ಬಂದ ಪೊಲೀಸರು, 'ಎದ್ದೇಳುತ್ತೀಯಾ, ಇಲ್ಲ ಬೇರೆ ಕೆಲಸ ಮಾಡಬೇಕಾ' ಎಂದು ಗದರಿದ್ದಾರೆ. ಇದಕ್ಕೆ ಪ್ರತಿಕ್ರಿಯಿಸಿದ ವ್ಯಕ್ತಿ, 'ಸರ್, ನನ್ನ ಪತ್ನಿ ಗರ್ಭಿಣಿ, ಕಾರಿನಲ್ಲಿ ಕುಳಿತು ಒದ್ದಾಡುತ್ತಿದ್ದಾರೆ. ಆಸ್ಪತ್ರೆಗೆ ಹೇಗೆ ಕರೆದುಕೊಂಡು ಹೋಗಲಿ, ದಾರಿ ಬಿಡಿ' ಎಂದು ಅಂಗಲಾಚಿದ್ದಾರೆ.

ಇದಕ್ಕೆ ಮತ್ತೆ ಪೊಲೀಸರು, 'ನೀನೂ ವಿಐಪಿನೇ. ಎರಡು ನಿಮಿಷ ಹೊರಗೆ ನಿಲ್ಲು' ಎಂದಿದ್ದಾರೆ. ನಂತರ ವ್ಯಕ್ತಿಯನ್ನು ಪೊಲೀಸರು ಸಮಾಧಾನಪಡಿಸಿ ಕಳುಹಿಸಿದ್ದಾರೆ.

ವ್ಯಕ್ತಿ ಹಾಗೂ ಸಂಚಾರ ಪೊಲೀಸರೊಂದಿಗೆ ವಾಗ್ವಾದ ನಡೆಯುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದ್ದು, ಪರ–ವಿರೋಧ ಚರ್ಚೆಗಳು ಆರಂಭವಾಗಿವೆ. ನೆಟ್ಟಿಗರು ಈ ಬಗ್ಗೆ ವಿಭಿನ್ನ ರೀತಿಯ ಪ್ರತಿಕ್ರಿಯೆಗಳನ್ನು ವ್ಯಕ್ತಪಡಿಸಿದ್ದಾರೆ. ಕೆಲವರು, 'ಜನರು ಅದಕ್ಕೆ ಧ್ವನಿಯಾಗಬೇಕಿತ್ತು ಮತ್ತು ರಸ್ತೆಯಲ್ಲಿ ಕುಳಿತಿದ್ದ ಆ ವ್ಯಕ್ತಿಗೆ ಬೆಂಬಲ ನೀಡಬೇಕಿತ್ತು' ಎಂದು ಅಭಿಪ್ರಾಯಪಟ್ಟಿದ್ದಾರೆ. ಇಂತಹ ದಿಟ್ಟ ಹೆಜ್ಜೆಗಳಿಗೆ ಸಾರ್ವಜನಿಕರ ಬೆಂಬಲ ಅತ್ಯಗತ್ಯ ಎಂದು ಹೇಳಿದ್ದಾರೆ.

'ವೈದ್ಯಕೀಯ ತುರ್ತು ಇದ್ದಾಗಲೂ ಹೀಗೆ ರಸ್ತೆ ಬಂದ್ ಮಾಡಿರುವುದು ಎಷ್ಟು ಸರಿ?' ಎಂದು ನೆಟ್ಟಿಗರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. 'ವಿಐಪಿಗಳಿಗೊಂದು ನ್ಯಾಯ, ಸಾಮಾನ್ಯ ಜನರಿಗೊಂದು ನ್ಯಾಯವೇ?' ಎಂಬ ಟೀಕೆಗಳೂ ಜಾಲತಾಣದಲ್ಲಿ ಇವೆ.

ಉನ್ನತ ಹುದ್ದೆಯಲ್ಲಿರುವವರ ಸಂಚಾರದ ವೇಳೆ, ಆಂಬುಲೆನ್ಸ್‌ನಂತಹ ತುರ್ತು ವಾಹನಗಳನ್ನೂ ತಡೆಹಿಡಿಯುತ್ತಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.

ರಸ್ತೆ ಮಧ್ಯೆ ಕುಳಿತು ಪ್ರತಿಭಟನೆ ನಡೆಸುತ್ತಿದ್ದ ವ್ಯಕ್ತಿಯನ್ನು ಪ್ರಶ್ನಿಸಿದ ಸಂಚಾರಿ ಪೊಲೀಸರು

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದೆ

ಕೆರೆಯ ಮಾಲಿನ್ಯ ತಡೆಗೆ ಸೂಚನೆ

ಬೆಂಗಳೂರು: ದಕ್ಷಿಣ ನಗರ ಪಾಲಿಕೆಯ ಬೊಮ್ಮನಹಳ್ಳಿ ವಲಯ ವ್ಯಾಪ್ತಿಯ ಪರಪ್ಪನ ಅಗ್ರಹಾರ ಕೆರೆ, ಹರಳೂರು ಕೆರೆ ಹಾಗೂ ಕೂಡ್ಲು ದೊಡ್ಡ ಕೆರೆಗಳಿಗೆ ಹರಿಯುತ್ತಿರುವ ತ್ಯಾಜ್ಯವನ್ನು ತಡೆಗಟ್ಟಲು ಪಾಲಿಕೆ ಆಯುಕ್ತ ಕೆ.ಎನ್. ರಮೇಶ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಕೆರೆಗಳ ಪರಿಶೀಲನೆ ನಡೆಸಿದ ಅವರು, ತ್ಯಾಜ್ಯ ನೀರನ್ನು ಕೆರೆಗಳಿಗೆ ಬಿಟ್ಟಿರುವುದನ್ನು ಗಮನಿಸಿದರು. ತ್ಯಾಜ್ಯ ನೀರು ಕೆರೆ ನೀರಿಗೆ ಸೇರದಂತೆ ತಡೆ ನಿರ್ಮಿಸಲು ಹೇಳಿದರು.

ತ್ಯಾಜ್ಯ ನೀರನ್ನು ತಡೆಗಟ್ಟಲು ಕೊಳವೆ ಮಾರ್ಗ ಕಾಮಗಾರಿಗೆ ವೇಗ ನೀಡಿ, ತುರ್ತಾಗಿ ಮುಗಿಸಲು ಜಲಮಂಡಳಿ ಅಧಿಕಾರಿಗಳಿಗೆ ಹೇಳಿದರು.

ಪರಪ್ಪನ ಅಗ್ರಹಾರ, ಹರಳೂರು ಹಾಗೂ ಕೂಡ್ಲು ದೊಡ್ಡ ಕೆರೆಗಳನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಿ, ಕೆರೆಗೆ ತಂತಿ ಬೇಲಿ ಅಳವಡಿಕೆ, ತಡೆಗೋಡೆ ನಿರ್ಮಾಣ ಸೇರಿದಂತೆ ಇನ್ನಿತರ ಅಭಿವೃದ್ಧಿ ಕಾಮಗಾರಿ ಕೈಗೊಳ್ಳುವ ಸಂಬಂಧ ಡಿಪಿಆರ್ ಸಿದ್ಧಪಡಿಸಿ ಸಲ್ಲಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

‘ಅಪಾಯಕಾರಿ ಮರ ತೆರವುಗೊಳಿಸಿ’

ಬೆಂಗಳೂರು: ನಗರದಲ್ಲಿರುವ ಅಪಾಯಕಾರಿ ಮರಗಳು, ರೆಂಬೆ-ಕೊಂಬೆಗಳ ತೆರವು ಕಾರ್ಯಾಚರಣೆ ನಡೆಸಲು ಉತ್ತರ ನಗರ ಪಾಲಿಕೆಯ ಆಯುಕ್ತ ಪೊಮ್ಮಲ ಸುನೀಲ್ ಕುಮಾರ್ ಅವರು ಸೂಚಿಸಿದರು.

ಮರ ಅಥವಾ ರೆಂಬೆ-ಕೊಂಬೆಗಳನ್ನು ಕತ್ತರಿಸುವುದಷ್ಟೇ ಅಲ್ಲದೆ, ರಸ್ತೆ, ಪಾದಚಾರಿ ಮಾರ್ಗದಲ್ಲಿ ಬಿದ್ದಿರುವ ಮರದ ಅವಶೇಷಗಳು, ಕೊಂಬೆಗಳು ಹಾಗೂ ಇತರೆ ತ್ಯಾಜ್ಯವನ್ನು ಸಂಪೂರ್ಣವಾಗಿ ತೆರವುಗೊಳಿಸಿ ಸ್ಥಳವನ್ನು ಸ್ವಚ್ಛವಾಗಿರಿಸುವಂತೆ ನಿರ್ದೇಶನ ನೀಡಿದರು.

ಅಗತ್ಯವಿದ್ದಲ್ಲಿ ಹೆಚ್ಚುವರಿ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಬೇಕು. ಆಧುನಿಕ ಉಪಕರಣಗಳನ್ನು ಖರೀದಿಸಿ ಬಳಸಬೇಕು. ಸಾರ್ವಜನಿಕರ ಸುರಕ್ಷತೆ ಹಾಗೂ ಸುಗಮ ಸಂಚಾರಕ್ಕೆ ಯಾವುದೇ ತೊಂದರೆಯಾಗದಂತೆ ನಿರಂತರವಾಗಿ ಕ್ರಮ ಕೈಗೊಳ್ಳುವಂತೆ ಆಯುಕ್ತರು ಸೂಚಿಸಿದರು.

‘ಸ್ಯಾಂಕಿ ಉಳಿಸಿ’ ಅಭಿಯಾನ ಶುರು

ಕೆರೆ ಒಡಲಿಗೆ ಒಳಚರಂಡಿ ನೀರು: ಪರಿಸರವಾದಿಗಳ ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸದಾಶಿವನಗರದ ‘ಸ್ಯಾಂಕಿ’ ಕೆರೆಗೆ ಒಳಚರಂಡಿ ನೀರು ಸೇರುತ್ತಿದ್ದು, ಇದನ್ನು ತಡೆಯಲು ಕ್ರಮ ವಹಿಸುವಂತೆ ಆಗ್ರಹಿಸಿ ‘ವಾಯ್ಸ್ ಆಫ್ ಸದಾಶಿವನಗರ ಸಂಘಟನೆ’ಯು ‘ಸ್ಯಾಂಕಿ ಉಳಿಸಿ’ ಅಭಿಯಾನವನ್ನು ಮತ್ತೆ ಆರಂಭಿಸಿದೆ.

ಈ ಹಿಂದೆಯೂ ಕೊಳಚೆ ನೀರು ಸೇರುತ್ತಿದ್ದರಿಂದ ಸಂಘಟನೆಯು ಅಭಿಯಾನ ನಡೆಸಿ ದೂರು ನೀಡಿದ ಕಾರಣ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಕ್ರಮ ಕೈಗೊಂಡಿತ್ತು. ಇದೀಗ ಕೆರೆಯ ಎರಡನೇ ಪ್ರವೇಶದ್ವಾರದ ಬಳಿ ಒಳಚರಂಡಿ ನೀರು ಸೋರಿಕೆ ಆಗುತ್ತಿರುವುದು ಪತ್ತೆಯಾಗಿದೆ.

‘ಕೆರೆಗೆ ಮಳೆ ನೀರಿನ 11 ಚರಂಡಿಗಳ ಒಳಹರಿವಿದ್ದು, ಅವುಗಳಲ್ಲಿ ಒಂದು ಮಾತ್ರವೇ ಸುಸ್ಥಿತಿಯಲ್ಲಿದೆ. ನೀರಿನ ಹರಿವು ವ್ಯವಸ್ಥೆಯ ಸಮಗ್ರ ಪುನಶ್ಚೇತನ ಆಗಬೇಕಿದೆ. ತುರ್ತಾಗಿ ಅಧಿಕಾರಿಗಳು ಗಮನ ಹರಿಸಬೇಕು’ ಎಂದು ಸದಸ್ಯೆ ಶಿಲ್ಪಾ ಜತ್ತಿ ಒತ್ತಾಯಿಸಿದ್ದಾರೆ.

‘ಕೊಳಚೆ ನೀರು ಸೇರುತ್ತಿದ್ದದ್ದನ್ನು ಅಭಿಯಾನದಡಿ ತಡೆಯಲಾಗಿತ್ತು. ಇದೀಗ ಮತ್ತೆ ಕಲುಷಿತ ನೀರು ಸೇರುತ್ತಿದೆ. ಕೆರೆ ಉಸ್ತುವಾರಿ ನೋಡಿಕೊಳ್ಳುತ್ತಿರುವ ಬಿಬಿಎಂಪಿ ಪಶ್ಚಿಮ ಭಾಗದ ಸಹಾಯಕ ಎಂಜಿನಿಯರ್ ಎಂ.ಸಿದ್ದರಾಮಯ್ಯ ಅವರಿಗೆ ಈಗಾಗಲೇ ದೂರು ನೀಡಿದ್ದರೂ, ಯಾವುದೇ ಕ್ರಮ ಕೈಗೊಂಡಿಲ್ಲ’ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

‘ಜಲಮಂಡಳಿ ಮತ್ತು ಪಾಲಿಕೆ ಹೊಣೆಗಾರಿಕೆಯಿಂದ ಕೆಲಸ ಮಾಡಬೇಕು. ತಕ್ಷಣ ಕ್ರಮ ಕೈಗೊಳ್ಳದಿದ್ದರೆ ಹೋರಾಟ ತೀವ್ರಗೊಳಿಸಲಾಗುವುದು’ ಎಂದು ಅಭಿಯಾನದ ಮನು ಎಚ್ಚರಿಸಿದ್ದಾರೆ.

ಸ್ಯಾಂಕಿ ಕೆರೆಗೆ ಸೇರುತ್ತಿರುವ ಒಳಚರಂಡಿ ನೀರನ್ನು ವೀಕ್ಷಿಸಿದ ‘ವಾಯ್ಸ್ ಆಫ್ ಸದಾಶಿವನಗರ ಸಂಘಟನೆ’ ಸದಸ್ಯೆಯರು

ಭಾರತ ಸರ್ಕಾರ, ಬಾಹ್ಯಾಕಾಶ ಇಲಾಖೆ
ಎಲೆಕ್ಟ್ರೋ-ಆಪ್ಟಿಕ್ಸ್ ಸಿಸ್ಟಮ್ಸ್ (ಎಲ್.ಇ.ಓ.ಎಸ್.) ಪ್ರಯೋಗಾಲಯ
ಪೀಣ್ಯ, ಬೆಂಗಳೂರು - 560058.
ಎಲ್.ಇ.ಓ.ಎಸ್. ನಿರ್ಮಾಣ ಮತ್ತು ನಿರ್ವಹಣಾ ವಿಭಾಗ (ಎಲ್.ಸಿ.ಎಂ.ಡಿ.)
[ದೂರವಾಣಿ : (080)-22685088, 5047, 5045, 5086, (080)-28392310]

ಸಂಕ್ಷಿಪ್ತ ಇ-ಟೆಂಡರ್ (ಎನ್.ಐ.ಇ.ಟಿ.) ಆಹ್ವಾನ ಪ್ರಕಟಣೆ

ಭಾರತದ ರಾಷ್ಟ್ರಪತಿಗಳ ಪರವಾಗಿ, ಈ ಕೆಳಗಿನ ಕೆಲಸಕ್ಕಾಗಿ ಐಟಂ ದರದ ಇ–ಟೆಂಡರ್ ಅನ್ನು ಆಹ್ವಾನಿಸಲಾಗಿದೆ.

ಕೆಲಸದ ಹೆಸರು : ಎನ್.ಐ.ಟಿ. ನಂ. & ದಿನಾಂಕ : ಎ.ಡಿ.ಓ.ಆರ್.ಇ. ಕ್ಯಾಂಪಸ್, ಎಲ್.ಇ.ಓ.ಎಸ್. ಐ.ಎಸ್.ಆರ್.ಓ., ಪೀಣ್ಯ, ಬೆಂಗಳೂರು – 58 ಇಲ್ಲಿಗೆ ಹಾಲೀ ಅಸ್ತಿತ್ವದಲ್ಲಿರುವ ಯಂತ್ರಗಳಿಗೆ ಕಂಟೈನ್‌ಮೆಂಟ್ ರಚನೆಯ ಪ್ರಸ್ತಾವಿತ ತಯಾರಿಕೆ. **ಎನ್.ಐ.ಇ.ಟಿ. ನಂ.:** CMG/LEOS/2026-27/LMN-02, ದಿನಾಂಕ : 25.05.2026; **ಟೆಂಡರ್‌ಗೆ ಇಡಲಾದ ಅಂದಾಜು ವೆಚ್ಚ ರೂ.ಗಳಲ್ಲಿ 22.72 ಲಕ್ಷ ; ಇ.ಎಂ.ಡಿ. ರೂ. 45,440/- ; ಪೂರ್ಣಗೊಳಿಸುವ ಅವಧಿ ತಿಂಗಳುಗಳಲ್ಲಿ : 03** ತಿಂಗಳು, ಟೆಂಡರ್ ಡಾಕ್ಯೂಮೆಂಟ್ ಡೌನ್‌ಲೋಡ್ ಮಾಡಿಕೊಳ್ಳಬಹುದಾದ ಅವಧಿ : **ತೆರೆಯುವ ದಿನಾಂಕ : 02.06.2026 ; ಮುಕ್ತಾಯದ ದಿನಾಂಕ : 15.06.2026.**

ಆಸಕ್ತ ಟೆಂಡರ್‌ಗಳು ಅರ್ಹತಾ ಮಾನದಂಡಗಳು ಮತ್ತು ಇತರ ವಿವರಗಳಿಗಾಗಿ ದಯವಿಟ್ಟು ವೆಬ್‌ಸೈಟ್ : www.isro.gov.in ನಲ್ಲಿ ವಿವರವಾದ ಇ–ಟೆಂಡರ್ ಆಹ್ವಾನ ಸೂಚನೆ (NIET) ಅನ್ನು ನೋಡಬಹುದು ಮತ್ತು ಟೆಂಡರ್ ದಾಖಲೆಗಳನ್ನು www.tenderwizard.com/ISRO ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/-
ಸಮೂಹ ನಿರ್ದೇಶಕರು
ನಿರ್ಮಾಣ ಮತ್ತು ನಿರ್ವಹಣಾ ಸಮೂಹ (ಸಿ & ಎಂ.ಜಿ.)
ಯು.ಆರ್.ಎಸ್.ಸಿ., ಬೆಂಗಳೂರು.

ಮೂವರಿಗೆ ಗೌರವ ಡಾಕ್ಟರೇಟ್

ತುಮಕೂರು: ‘ತುಮಕೂರು ವಿಶ್ವವಿದ್ಯಾಲಯದ 19ನೇ ಘಟಿಕೋತ್ಸವದಲ್ಲಿ ಸ್ವಾತಂತ್ರ್ಯ ಹೋರಾಟಗಾರ ಟಿ.ಆರ್. ರೇವಣ್ಣ, ಸುಪ್ರೀಂ ಕೋರ್ಟ್ ವಕೀಲ ಕೆ.ಆರ್.ಪ್ರದೀಪ್, ಲೇಖಕ ದ್ವಾರನಕುಂಟೆ ಪಾತಣ್ಣ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಗುವುದು’ ಎಂದು ಕುಲಪತಿ ಪ್ರೊ.ಎಂ.ವೆಂಕಟೇಶ್ವರಲು ತಿಳಿಸಿದರು.

ಗೋಪಾಲಪುರ: ಮಣ್ಣು ಅಕ್ರಮ ಸಾಗಣೆ

ಪ್ರಜಾವಾಣಿ ವಾರ್ತೆ

ಹೆಸರಘಟ್ಟ: ಇಲ್ಲಿಗೆ ಸಮೀಪದ ಗೋಪಾಲಪುರ– ಗೊಲ್ಲಹಳ್ಳಿ ಕೆರೆಯಲ್ಲಿ ಕೆಲವು ದಿನಗಳಿಂದ ಅಕ್ರಮವಾಗಿ ಮಣ್ಣು ಸಾಗಣೆ ಮಾಡುತ್ತಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.

‘ಅಧಿಕಾರಿಗಳು ಮತ್ತು ಪೊಲೀಸರ ಭಯವಿಲ್ಲದೆ ನಿಯಮ ಮೀರಿ ಅಕ್ರಮವಾಗಿ ನೂರಾರು ಲೋಡ್ ಮಣ್ಣನ್ನು ಜೆಸಿಬಿ ಯಂತ್ರದ ಮೂಲಕ ಲಾರಿ ಮತ್ತು ಟಿಪ್ಪರ್‌ಗಳಲ್ಲಿ ಸಾಗಣೆ ಮಾಡಲಾಗುತ್ತಿದೆ. ಸಾರ್ವಜನಿಕರು ಪ್ರಶ್ನೆ ಮಾಡಿದರೆ ಸಂಬಂಧಪಟ್ಟ ಗ್ರಾಮ ಪಂಚಾಯಿತಿಯಲ್ಲಿ ಮಣ್ಣು ತುಂಬಲು ಪರವಾನಗಿ ಪಡೆದುಕೊಂಡಿದ್ದೇವೆ ಎಂದು ಸುಳ್ಳು ಹೇಳುತ್ತಾರೆ. ಗ್ರಾಮ ಪಂಚಾಯಿತಿ ಅಧಿಕಾರಿಗಳನ್ನು ಕೇಳಿದರೆ ನಾವು ಯಾವುದೇ ಪರವಾನಗಿ ನೀಡಿಲ್ಲ ಎನ್ನುತ್ತಿದ್ದಾರೆ’ ಎಂದು ಸ್ಥಳೀಯ ನಿವಾಸಿಗಳು ದೂರಿದ್ದಾರೆ.

ಕೆರೆಯಲ್ಲಿ ಜೆಸಿಬಿ ಯಂತ್ರದ ಮೂಲಕ ಟಿಪ್ಪರ್‌ಗೆ ಮಣ್ಣು ತುಂಬಲಾಯಿತು

ಕಂದಾಯ ಇಲಾಖೆ ನಿಯಮಗಳ ಪ್ರಕಾರ, ಕೆರೆಗಳಲ್ಲಿ ಮೂರು ಅಡಿಗಳಿಗಿಂತಲೂ ಹೆಚ್ಚು ಆಳವಾಗಿ ಹಾಗೂ ನೇರವಾಗಿ ಮಣ್ಣು ತೆಗೆಯುವಂತಿಲ್ಲ. ಜೆಸಿಬಿ ಮತ್ತು ಹಿಟಾಚಿ ಯಂತಹ ಭಾರಿ ಯಂತ್ರಗಳನ್ನು ಕೆರೆಗಳಿಗೆ ಇಳಿಸುವಂತಿಲ್ಲ. ಈ ಎಲ್ಲಾ ನಿಯಮಗಳಿದ್ದರೂ ಕೆಲವು ಪ್ರಭಾವಿಗಳಿಂದ ಮಣ್ಣು ದಂಧೆಯು ಅವ್ಯಾಹತವಾಗಿ ನಡೆಯುತ್ತಿದೆ.

‘ದೊಡ್ಡ ಲಾರಿ ಮತ್ತು ಟಿಪ್ಪರ್‌ಗಳಲ್ಲಿ ಮಣ್ಣನ್ನು ಹೊತ್ತೊಯ್ಯಲಾಗುತ್ತಿದೆ. ಕೆರೆಗಳಿಂದ ಗ್ರಾಮಗಳ ಮೂಲಕ ಲಾರಿಗಳು ಹಾದು ಹೋಗುವುದರಿಂದ ರಸ್ತೆಗಳಲ್ಲಿ ಗುಂಡಿಗಳು ಬೀಳುತ್ತಿವೆ. ಕಾಂಕ್ರೀಟ್ ರಸ್ತೆಗಳು ಬಿರುಕು ಬಿಡುತ್ತಿವೆ, ದೂಳು ಹೆಚ್ಚಾಗಿದೆ’ ಎಂದು ಸ್ಥಳೀಯರಾದ ಲಾವಣ್ಯ ತಿಳಿಸಿದರು.

‘ಕೆರೆಯಲ್ಲಿ ಮಣ್ಣು ತೆಗೆಯುತ್ತಿರುವ ಬಗ್ಗೆ ನನ್ನ ಗಮನಕ್ಕೆ ಬಂದಿರಲಿಲ್ಲ. ಸಿಬ್ಬಂದಿಯನ್ನು ಕಳಿಸಿ ಪರಿಶೀಲನೆ ಮಾಡಿ ಕೂಡಲೇ ಸೂಕ್ತ ಕ್ರಮ ಕೈಗೊಳ್ಳುತ್ತೇನೆ’ ಎಂದು ಉತ್ತರ ತಾಲ್ಲೂಕು ತಹಶೀಲ್ದಾರ್ ಮಧುರಾಜ್ ಕೂಡಲಗಿ ಹೇಳಿದರು.

ನೀರಿನ ಕಳವು, ಸೋರಿಕೆ ತಡೆಗೆ ಎ.ಐ ವ್ಯವಸ್ಥೆ

ಬೆಂಗಳೂರು: ನಗರದಲ್ಲಿ ನೀರಿನ ಕಳವು ಮತ್ತು ಸೋರಿಕೆ ತಡೆಗೆ ‘ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ’ಯು ಕೃತಕ ಬುದ್ಧಿಮತ್ತೆ ಹಾಗೂ ರೋಬೋಟಿಕ್ ತಂತ್ರಜ್ಞಾನ ಅಳವಡಿಕೆಗೆ ಮುಂದಾಗಿದೆ.

‘ಸ್ಮಾರ್ಟ್ ಟೆರ್ರಾ’ ಮತ್ತು ‘ಸೊಲಿನಾಸ್’ ನವೋದ್ಯಮಗಳು ಜಲಮಂಡಳಿಗೆ ಶೂನ್ಯ ವೆಚ್ಚದಲ್ಲಿ ಹೊಸ ತಂತ್ರಜ್ಞಾನ ನೀಡುತ್ತಿದ್ದು, ಅವುಗಳಿಗೆ ಟೈಟಾನ್ ಕಂಪನಿಯು ನೆರವಾಗಿದೆ. ಈ ನವೋದ್ಯಮಗಳು ಜಂಟಿ ಪ್ರಾಯೋಗಿಕ ಪರೀಕ್ಷೆ ಮತ್ತು ಅಧ್ಯಯನಕ್ಕೆ ಮುಂದಾಗಿವೆ. ಅದಕ್ಕೆ ಮುಕ್ತ ಅವಕಾಶವನ್ನು ಮಂಡಳಿ ಕಲ್ಪಿಸಿದೆ.

ನೀರಿನ ಕಳವು, ಲೆಕ್ಕಕ್ಕೆ ಸಿಗದ ನೀರು (ಯುಎಫ್‌ಡಬ್ಲ್ಯು), ಆದಾಯ ತರದ ನೀರಿನ (ಎನ್‌ಆರ್‌ಡಬ್ಲ್ಯು) ಪ್ರಮಾಣವನ್ನು ತಗ್ಗಿಸಲು ನವೋದ್ಯಮಗಳು ಜಲಮಂಡಳಿಗೆ ಜೊತೆಯಾಗಿದ್ದು, ಟೈಟಾನ್ ಡಿಸೈನ್ ಇಂಪ್ಯಾಕ್ಟ್ ಅವಾರ್ಡ್ ಯೋಜನೆಯ ಅನುದಾನದಡಿ ಅಧ್ಯಯನ ನಡೆಸಲಿವೆ. ಅಧ್ಯಯನ ನಡೆಯುವ ವರ್ಷದ ಅವಧಿಯಲ್ಲಿ ಯಾವುದೇ ಆರ್ಥಿಕ ವೆಚ್ಚವನ್ನು ಮಂಡಳಿಯು ಭರಿಸಬೇಕಿಲ್ಲ. ಪೈಪ್‌ಗಳ ದುರಸ್ತಿ, ಬದಲಿ ಪೈಪ್ ಅಳವಡಿಕೆ ಸೇರಿದಂತೆ ಸಿವಿಲ್ ಕಾಮಗಾರಿಗಳ ವೆಚ್ಚವನ್ನು ಮಾತ್ರ ನೀಡಬೇಕಿದೆ.

ಗಮನಾರ್ಹ ಬದಲಾವಣೆ: ‘ಆವಿಷ್ಕಾರಗೊಂಡ ಹೊಸ ತಂತ್ರಜ್ಞಾನಗಳನ್ನು ಅನುಷ್ಠಾನಗೊಳಿಸುವ ಅವಕಾಶವನ್ನು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಡಿ.ಕೆ.ಶಿವಕುಮಾರ್ ಅವರ ನಿರ್ದೇಶನದಂತೆ ನವೋದ್ಯಮಗಳಿಗೆ ನೀಡಲಾಗಿದೆ. ದತ್ತಾಂಶ ಆಧರಿಸಿ ಜಾರಿಗೊಳಿಸುವ ವೈಜ್ಞಾನಿಕ ಕ್ರಮಗಳು ನಗರದ ನೀರು ನಿರ್ವಹಣೆಯಲ್ಲಿ ಗಮನಾರ್ಹ ಬದಲಾವಣೆ ತರಬಲ್ಲವು’ ಎಂದು ಜಲಮಂಡಳಿ ಅಧ್ಯಕ್ಷ ವಿ.ರಾಮ್ ಪ್ರಸಾತ್ ಮನೋಹರ್ ತಿಳಿಸಿದ್ದಾರೆ.

ಹೊಸ ತಂತ್ರಜ್ಞಾನದಲ್ಲಿ ಏನಿದೆ?

- ಸೋರಿಕೆ ಮತ್ತು ಶಿಥಿಲವಾದ ಪೈಪ್‌ಲೈನ್ ಭಾಗಗಳ ಪತ್ತೆಗೆ ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಬಳಕೆಯಾಗಲಿದೆ
- ಸೊಲಿನಾಸ್ ಕಂಪನಿಯು ಪೈಪ್‌ಗಳ ಒಳಗೆ ರೋಬೋಟ್‌ಗಳನ್ನು ಕಳುಹಿಸಿ ತಪಾಸಣೆ ನಡೆಸಲಿದೆ
- ಶಬ್ದ ತರಂಗಗಳ ಮೂಲಕ ಸೋರಿಕೆಯ ನಿಖರ ಸ್ಥಳವನ್ನು ಸ್ಮಾರ್ಟ್ ಟೆರ್ರಾ ಕಂಪನಿಯು ಪತ್ತೆ ಮಾಡಲಿದೆ
- ಹೊಸ ತಂತ್ರಜ್ಞಾನಗಳು ನೀರು ಪೂರೈಕೆ, ಮೀಟರ್‌ಗಳ ಬೇಡಿಕೆ ಮತ್ತು ಸೋರಿಕೆ ನಷ್ಟವನ್ನು ನಿರಂತರವಾಗಿ ಕಣ್ಗಾವಲಿನಲ್ಲಿಡಲಿವೆ

ನೈಋತ್ಯ ರೈಲ್ವೆ

ಸಂ.: B/C.565/STBA-NSG-4&5/2026 ದಿನಾಂಕ: 27.05.2026

ತಿದ್ದುಪಡಿ ಸೂಚನೆ–1

ವಿಷಯ: ಹೊಸೂರು (ಹೆಚ್‌ಎಸ್‌ಆರ್‌ಎ) ನಿಲ್ದಾಣದಲ್ಲಿ ಎಸ್‌ಟಿಬಿಎಗಾಗಿ ಒಪ್ಪಂದದ ಅವಧಿಯ ಅಧಿಸೂಚನೆ
ಉಲ್ಲೇಖ: 08.05.2026 ದಿನಾಂಕದ ಈ ಕಚೇರಿ ಅಧಿಸೂಚನೆ

08.05.2026 ದಿನಾಂಕದ ಅಧಿಸೂಚನೆಯ ಮೂಲಕ ಎನ್‌ಎಸ್‌ಜಿ–4 ವರ್ಗ – ಹೊಸೂರು (ಹೆಚ್‌ಎಸ್‌ಆರ್‌ಎ) ನಿಲ್ದಾಣದಲ್ಲಿ ಎಸ್‌ಟಿಬಿಎಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಎನ್‌ಎಸ್‌ಜಿ–4 ವರ್ಗ ಹೊಸೂರು ನಿಲ್ದಾಣದಲ್ಲಿ ಎಸ್‌ಟಿಬಿಎಗಾಗಿ ಒಪ್ಪಂದದ ಅವಧಿ 20.05.2027 ರವರೆಗೆ ಇರುತ್ತದೆ. ರೈಲ್ವೆ ಮಂಡಳಿಯಿಂದ ಸ್ವೀಕರಿಸಿದ ನೀತಿ ಮಾರ್ಗಸೂಚಿಗಳ ಆಧಾರದ ಮೇಲೆ ಒಪ್ಪಂದದ ಅವಧಿಯನ್ನು ಮತ್ತಷ್ಟು ವಿಸ್ತರಿಸಲಾಗುತ್ತದೆ. ಎನ್‌ಎಸ್‌ಜಿ–5 ವರ್ಗ ಧರ್ಮಪುರಿ ನಿಲ್ದಾಣದ ಒಪ್ಪಂದದ ಅವಧಿ ಕೇವಲ 3 ವರ್ಷಗಳು.

PUB/173/AAMO/PRB/SWR/2026-27 — ವರಿಷ್ಠ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು, ಬೆಂಗಳೂರು

ಸುಲಭ ಟಿಕೆಟ್ ಬುಕ್ಕಿಂಗ್, PNR ಸ್ಥಿತಿ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ RailOne ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway - SWR | SWRRLY | SWRAILWAYHQ | sw_railways

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)

ಸಂಖ್ಯೆ: ಅಇಂವಿ/ಎಸ್‌ಸಿಎಡಿಎ/ಕಾನಿಇಂ(ವಿ)/ಸಕಾನಿಇಂ–ಯೋ/ಕ–48/2026–27/1117 ದಿನಾಂಕ:01.06.2026

ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಕವಿಪ್ರನಿನಿಯ ಬಿಡ್ ಟೆಂಡರ್ ಸಂಖ್ಯೆ: KPTCL/2026-27/IND0306(CALL_2)ರ ಸಂಬಂಧ–"**Supply of 450 Nos. of Communication cards (CMU) compatible to existing RTU (RTU560 of ABB), conforming to the Technical Specifications**" ಗಾಗಿ ಮೂಲ ಸಲಕರಣೆ ತಯಾರಿಕರಿಂದ/ಅಧಿಕೃತ ಏಜೆನ್ಸಿಯಿಂದ ಬಿಡ್ ಆಹ್ವಾನಿಸಿದೆ.

ಕೆಪಿಪಿ ಪೋರ್ಟಲ್ ಪ್ರಕ್ರಿಯೆಯಲ್ಲಿ ಭಾಗವಹಿಸುವುದರ ಕುರಿತಾದ ವಿವರಗಳನ್ನು **htpps://kppp.karnataka.gov.in** ಗೆ **ದಿನಾಂಕ: 03.06.2026**ರಂದು ಅಥವಾ ನಂತರ ಲಾಗಿನ್ ಆಗಿ ಪಡೆಯಬಹುದು ಮತ್ತು ಬಿಡ್‌ಗಳ ಸ್ವೀಕೃತಿಯ ಕೊನೆಯ ದಿನಾಂಕವನ್ನು ಕೆಪಿಪಿ ಪೋರ್ಟಲ್‌ನಲ್ಲಿ ನಮೂದಿಸಲಾಗಿದೆ.

ಬಿಡ್ ಸಲ್ಲಿಕೆಯ ಕೊನೆಯ ದಿನಾಂಕದ ಯಾವುದೇ ವಿಸ್ತರಣೆಗಳನ್ನು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ತಿಳಿಸಲಾಗುತ್ತದೆ. ಈ ನಿಟ್ಟಿನಲ್ಲಿ ಅಗತ್ಯವಿರುವ ಯಾವುದೇ ವಿವರಗಳನ್ನು ಕಛೇರಿ ಸಮಯದಲ್ಲಿ ಕೆಳಗೆ ಸಹಿ ಮಾಡಿದವರ ಕಛೇರಿಯಿಂದ ಪಡೆಯಬಹುದು.

ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕದ ಮೊದಲು ಬಿಡ್ದುದಾರರು ಎಲ್ಲಾ ತಿದ್ದುಪಡಿ/ ಅನುಬಂಧಗಳನ್ನು ಗಮನಿಸಬೇಕು.

ಸಹಿ/– ಮುಖ್ಯ ಇಂಜಿನಿಯರ್ (ವಿ), ಎಸ್‌ಎಲ್‌ಡಿಸಿ, ಕವಿಪ್ರನಿನಿ, #28, ರೇಸ್‌ಕೋರ್ಸ್ ಅಡ್ಡ ರಸ್ತೆ, ಆನಂದರಾವ್ ವೃತ್ತ, ಬೆಂಗಳೂರು–560 009

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಬಳ್ಳಾಪುರ
Email.ID:eerdwsd.ckb2@gmail.com, ದೂರವಾಣಿ ಸಂಖ್ಯೆ: 08156– 270058

ಸಂಖ್ಯೆ:/ಕಾಅ/ಗ್ರಾ.ಕು.ನೀ.& ನೈ.ವಿ/ಚಿ.ಪುರ/ಟೆಂಡರ್/ಸ.ಇಂ–1/2025–26 ದಿನಾಂಕ: 30.05.2026

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ)
ಪ್ರಕಟಣೆ ಸಂಖ್ಯೆ: 04/2026–27 Re-call Notification No:(2,4,5,6,10,11/2023–24)(12,13/2024–25), (10,14/2025–26) ದಿನಾಂಕ: 30.05.2026

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಬಳ್ಳಾಪುರ ರವರು 2025–26 ನೇ JJM ಯೋಜನೆಯಡಿ ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿ ತಾಲ್ಲೂಕು–23, ಗೌರಿಬಿದನೂರು –4, ಗುಡಿಬಂಡೆ–2, ಚಿಂತಾಮಣಿ–1, ಚಿಕ್ಕಬಳ್ಳಾಪುರ–1 & ಒಟ್ಟು 31 ಗ್ರಾಮಗಳಲ್ಲಿ ಕುಡಿಯುವ ನೀರು ಸರಬರಾಜು ಯೋಜನೆಗೆ ಸಂಬಂದಿಸಿದಂತೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಸಂಸ್ಥೆಯಲ್ಲಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಇಲಾಖಾ ನಿಯಮಾವಳಿಯ ಮೇರೆಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಐಟಂವಾರು ಟೆಂಡರ್‌ಗಳನ್ನು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ **KW-I & KW-II-KW-III** ನಮೂನೆಯಲ್ಲಿ ಆಹ್ವಾನಿಸಲಾಗಿದೆ. ಅರ್ಜಿ ಮತ್ತು ಇ.ಎಂ.ಡಿಯನ್ನು ಈ ಪೇಮೆಂಟ್‌ನಲ್ಲಿ **(Credit Card/Direct Debit/ NEFT & OTC ಮುಖೇನ)** ಅಥವ ಚಾಲನ್ ಮೂಲಕ ಭರ್ತಿಮಾಡುವ ಗುತ್ತಿಗೆದಾರರು ಕೊನೆಯ ದಿನಾಂಕ ಕ್ಕಿಂತ 2 ದಿನ ಮುಂಚಿತವಾಗಿ ಸಲ್ಲಿಸುವುದು. (1) ಟೆಂಡರ್ ಪ್ರಶ್ನೆಗಳು/ಸ್ಪಷ್ಟೀಕರಣಗಳಿಗೆ ಕೊನೆಯ ದಿನಾಂಕ ಮತ್ತು ಸಮಯ **ದಿನಾಂಕ: 06.06.2026 ರಂದು ಸಂಜೆ 5.00 ಗಂಟೆವರೆಗೆ.** (2) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ದರಗಳನ್ನು ನಮೂದಿಸಿ ಸಲ್ಲಿಸುವ ಕೊನೆಯ **ದಿನಾಂಕ: 08.06.2026 ರಂದು ಸಂಜೆ 5.30 ಗಂಟೆವರೆಗೆ.** (3) ಭರ್ತಿ ಮಾಡಿದ ಟೆಂಡರ್‌ಗಳನ್ನು ತೆರೆಯುವ **ದಿನಾಂಕ: 10.06.2026 ಬೆಳಗ್ಗೆ 11.00 ಗಂಟೆಗೆ.** (4) ಆರ್ಥಿಕ ಬಿಡ್ಡನ್ನು ತೆರೆಯುವ **ದಿನಾಂಕ: 12.06.2026 ಬೆಳಗ್ಗೆ 11.00 ಗಂಟೆಗೆ.** ಒಂದು ವೇಳೆ ಮೇಲೆ ಸೂಚಿಸಲಾಗಿರುವ ದಿನಗಳು ಸಾರ್ವಜನಿಕ ರಜಾ ದಿನಗಳನ್ನಾಗಿ ಘೋಷಿಸಲ್ಪಟ್ಟರೆ ಮುಂದಿನ ದಿನ ಟೆಂಡರ್ ತೆರೆಯಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಬಳ್ಳಾಪುರ

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:82/ಕೆಎಸ್‌ಎಂಸಿಎ/2026–27

ಬೆಂಗಳೂರು ಕೇಂದ್ರ ನಗರ ಪಾಲಿಕೆ

ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಸಂಚಾರ ಅಭಿಯಂತರರವರ ಸೆಲ್ ವಿಭಾಗ, ಕೊಠಡಿ ಸಂಖ್ಯೆ: 09, ನೆಲ ಮಹಡಿ, ಅನೆಕ್ಸ್ ಕಟ್ಟಡ–3, ಗ್ರೇಟರ್ ಬೆಂಗಳೂರು ಪ್ರಾಧಿಕಾರ ಕಚೇರಿ ಆವರಣ, ಎನ್‌ಆರ್ ಚೌಕ, ಬೆಂಗಳೂರು–560002.

ಸಂಖ್ಯೆ: ಬೆಂಕೇನಪಾ/ಕಾಪಾಅ/ಟೀಇಸಿ/04/25–26/2ನೇ ಕರೆ — ದಿನಾಂಕ: 01-06-2026

ಅಲ್ಪಾವಧಿ ಟೆಂಡರ್‌ಗಳ ಆಹ್ವಾನ (ಐಎಫ್‌ಟಿ)
(ದ್ವಿ ಲಕೋಟೆ ಪದ್ಧತಿ) (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)
ವೆಬ್‌ಸೈಟ್: https://kppp.karnataka.gov.in

ಕಾರ್ಯಪಾಲಕ ಅಭಿಯಂತರರು, ಸಂಚಾರ ಅಭಿಯಂತರರು ಸೆಲ್ ವಿಭಾಗ, ಬೆಂಕೇನಪಾ, ಬೆಂಗಳೂರು ರವರು ಪರವಾಗಿ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ನಿರ್ಮಾಣ ಕಾಮಗಾರಿಯನ್ನು ನಿರ್ವಹಿಸಲು ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕೆಲಸದ ಹೆಸರು
1)	ಧನ್ವಂತ್ರಿ ರಸ್ತೆಯ ಅಮರ್ ಜಂಕ್ಷನ್ ನಲ್ಲಿ ವಾಣಿಜ್ಯ ಜಾಹೀರಾತು ಹಕ್ಕುಗಳ ಅಡಿಯಲ್ಲಿ ಡೈನಾಮಿಕ್ ಅವಧಿ ಮಾದರಿಯನ್ನು ಆಧರಿಸಿದ ಪಿಪಿಪಿ ಮಾದರಿಯ ವಿನ್ಯಾಸ, ನಿರ್ಮಾಣ, ಹಣಕಾಸು, ಕಾರ್ಯಾಚರಣೆ ಮತ್ತು ವರ್ಗಾವಣೆ (DBFOT) ಅಡಿಯಲ್ಲಿ ಸ್ಕೈವಾಕ್ ನಿರ್ಮಾಣ. (ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ವರ್ಗಕ್ಕೆ ಮೀಸಲಾಗಿದೆ). ಇಎಂಡಿ ಮೊತ್ತ : ರೂ.5.0 ಲಕ್ಷಗಳು (ಇ–ಪಾವತಿ ಮೂಲಕ ಒಂದು ಲಕ್ಷ ರೂ. ಮತ್ತು ಉಳಿದ ನಾಲ್ಕು ಲಕ್ಷ ರೂ. ಬಿಡ್ ದಾಖಲೆಯಲ್ಲಿ ನಿರ್ದಿಷ್ಟಪಡಿಸಿದಂತೆ).

ಟೆಂಡರ್‌ನ ಕಾರ್ಯಸೂಚಿ: 1) ಆರ್‌ಎಫ್‌ಪಿ ಆನ್‌ಲೈನ್ ಲಭ್ಯತೆ: **02-06-2026** ರ ನಂತರ. **2)** ಟೆಂಡರ್ ವಿವರಗಳಿಗೆ ಕೊನೆಯ **ದಿನಾಂಕ: 11-06-2026 ಮಧ್ಯಾಹ್ನ 3:00 ಗಂಟೆಯವರೆಗೆ.** (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ). **3)** ಪೂರ್ವ ಬಿಡ್ ಸಭೆಯು **ದಿನಾಂಕ: 12-06-2026 ರ ಮಧ್ಯಾಹ್ನ 3:00 ಗಂಟೆಗೆ** ಮುಖ್ಯ ಅಭಿಯಂತರರವರ ಕಚೇರಿ, ಬೆಂಗಳೂರು ಕೇಂದ್ರ ನಗರ ಪಾಲಿಕೆ, ವಲಯ–1, 18ನೇ ಮಹಡಿ, ನೇತಾಜಿ ಸುಭಾಷ್ ಚಂದ್ರ ಬೋಸ್ ಪಬ್ಲಿಕ್ ಯುಟಿಲಿಟಿ ಬಿಲ್ಡಿಂಗ್, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001 ಇಲ್ಲಿ ನಡೆಸಲಾಗುವುದು. **4)** ಟೆಂಡರ್ ಸ್ವೀಕರಿಸಲು ಕೊನೆಯ **ದಿನಾಂಕ 19-06-2026 ರ ಸಂಜೆ 5.00 ಗಂಟೆಯವರೆಗೆ. 5)** ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 22-06-2026 ರ ಬೆಳಗ್ಗೆ 11.00 ಗಂಟೆಗೆ. 6)** ತಾಂತ್ರಿಕ ಬಿಡ್ ಅನುಮೋದನೆಯ ನಂತರ ಆರ್ಥಿಕ ಬಿಡ್ ತೆರೆಯುವ ದಿನಾಂಕ ತಿಳಿಸಲಾಗುವುದು.

ಸಹಿ/–, ಕಾರ್ಯಪಾಲಕ ಅಭಿಯಂತರರು,
ಸಂಚಾರ ಅಭಿಯಂತರರವರ ಸೆಲ್ ವಿಭಾಗ, ಬೆಂಕೇನಪಾ.

TENDER NOTICE

OFFICE OF THE DIGP GROUP CENTRE CRPF, YELAHANKA, BENGLURU-560064 invites sealed tender for running the following shops inside this Group Centre premises for initial period of 11 months.

1. Stationary/Fancy Shop
2. Bakery Shop
3 Tailor Shop
4. Fruit and Juice shop
5. Fast Food Shop (Non veg)
6. Chicken Shop
7. Fish/Mutton Shop
8. Force Personnel Kit Items Shop

2. The tender forms, details of earnest money with terms and conditions may be obtained from Group Centre CRPF Yelahanka, Bengalure-560064 within 14 days from the date of advertisement. Priority will be given to retired force personnel and their dependent, veer nari, widows of force personnel.

Order by
DIGP, GC CRPF BENGALURU

ಕರ್ನಾಟಕ ಸರ್ಕಾರ
ಬೆಂಗಳೂರು ನಗರ ಜಿಲ್ಲಾ ಪಂಚಾಯತಿ
ಕಾರ್ಯಪಾಲಕ ಅಭಿಯಂತರರವರ ಕಛೇರಿ
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರಜಿಲ್ಲೆ, ಬೆಂಗಳೂರು ಜಿಲ್ಲಾ ಪಂಚಾಯತಿ ಕಟ್ಟಡ, ಮೊದಲನೇ ಮಹಡಿ, ಎಸ್.ಕರಿಯಪ್ಪ ರಸ್ತೆ, ಬನಶಂಕರಿ (ಬನಶಂಕರಿ ದೇವಸ್ಥಾನದ ಹತ್ತಿರ), ಬೆಂಗಳೂರು – 560070.
ಫೋನ್ ನಂ. 080–26716046 ವೆಬ್‌ಸೈಟ್: http://kppp.karnataka.gov.in

ಸಂಖ್ಯೆ:ಕಾಅ/ಪಂರಾಇವಿ/ಬೆಂನ/ಎಇ–1/ಟೆಂಡರ್/14/2026–27/478 — ದಿನಾಂಕ:01.06.2026

ಕೆ.ಪಿ.ಪಿ.ಪಿ. ಪೋರ್ಟಲ್ ಅಲ್ಪಾವಧಿ ಟೆಂಡರ್ ಪ್ರಕಟಣೆ ನೋಟೀಸ್ (ದ್ವಿ–ಲಕೋಟೆ)

ಕಾರ್ಯಪಾಲಕ ಅಭಿಯಂತರರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಕಛೇರಿಯಿಂದ **KPS and 4202–01–201–1–08–422 Grants** ಅನುಮೋದನೆಯಾಗಿರುವ ಕಾಮಗಾರಿಗಳಿಗಾಗಿ ದ್ವಿ–ಲಕೋಟೆಯಲ್ಲಿ ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ಟೆಂಡರ್ ಅನ್ನು ಕರೆಯಲಾಗಿದೆ. ವೆಬ್ ಸೈಟ್ ಮೂಲಕ ಟೆಂಡರ್ ಫಾರಂಗಳನ್ನು **ದಿನಾಂಕ:10.06.2026 ರ ಸಂಜೆ 4.00 ಗಂಟೆಯವರೆಗೆ** ಪಡೆದು ಸಲ್ಲಿಸಬಹುದಾಗಿರುತ್ತದೆ. ಕಾಮಗಾರಿವಾರು ವಿವರಗಳನ್ನು ವೆಬ್ ಸೈಟ್ ಮೂಲಕ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸಲು ಅಥವಾ ವೆಬ್ ಸೈಟ್ **http://www.KPPP.karnataka.gov.in** ನಲ್ಲಿ ವಿವರಗಳನ್ನು ಪಡೆಯಬಹುದಾಗಿರುತ್ತದೆ.

ಸಹಿ/–
ಕಾರ್ಯಪಾಲಕ ಅಭಿಯಂತರರು
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ
ಬೆಂಗಳೂರು ನಗರ, ಬೆಂಗಳೂರು.

ವಾಸಾಸಂಇ/ವಾಪ್ರ/917/ಶಿರಡಿ ಸಾಯಿ/2026–27

ಪುರಸಭಾ ಕಾರ್ಯಾಲಯ, ದೇವನಹಳ್ಳಿ
ದೇವನಹಳ್ಳಿ ಬೆಂಗಳೂರು ಗ್ರಾಮಾಂತರ ಜಿಲ್ಲೆ–562110
ದೂರವಾಣಿ : 080–27682221, Email : itstaff_ulb_devanahalli@yahoo.co.in

ನಂ.ದೇಪು/ತಾ.ಶಾ/ಟೆ.ಪ್ರ/ಸಿಆರ್/04/2026–27 — ದಿನಾಂಕ: 01.06.2026

ಟೆಂಡರ್ ಪ್ರಕಟಣೆ (ಇ–ಪ್ರಕ್ಯೂರ್‌ಮೆಂಟ್ (ಕೆ.ಪಿ.ಪಿ.ಪಿ. ಪೋರ್ಟಲ್) ಮೂಲಕ ಮಾತ್ರ)
(ಸ್ಟಾಂಡರ್ಡ್ ಡಾಕ್ಯುಮೆಂಟ್ KC3 & 8 ರ ನಿಬಂಧನೆಗಳಂತೆ ಅರ್ಜಿ ಆಹ್ವಾನಿಸಲಾಗಿದೆ)

ಮೇಲ್ಕಂಡ ವಿಷಯ ಸಂಬಂಧಿಸಿದಂತೆ, ದೇವನಹಳ್ಳಿ ಪುರಸಭಾ ವ್ಯಾಪ್ತಿಯಲ್ಲಿ 2026–27ನೇ ಸಾಲಿನ ಪುರಸಭಾ ಅನುದಾನದಡಿ ಘನತ್ಯಾಜ್ಯ ನಿರ್ವಹಣಾ ವಿಭಾಗಕ್ಕೆ ಅವಶ್ಯಕವಿರುವ ಡ್ರೈವರ್, ಹೆಲ್ಪರ್, ಲೋಡರ್, ಪೌರಕಾರ್ಮಿಕರಿಗೆ ಉಪಹಾರ ಸರಬರಾಜು ಮಾಡುವುದು, ಎನ್ವಿರಾನ್ಮೆಂಟಲ್ ಕ್ಲಿಯರೇನ್ ಪಡೆಯಲು ಕನ್ಸಲ್ಟೆನ್ಸಿ ಸರಬರಾಜು ಮಾಡುವುದು ಇತ್ಯಾದಿ ಒಟ್ಟು ಮೊತ್ತ **ರೂ : 202.13 ಲಕ್ಷಗಳ** ಒಟ್ಟು 05 ಕಾಮಗಾರಿಗಳಿಗೆ ಟೆಂಡರ್ ಪ್ರಕಟಣೆಯನ್ನು ಇ–ಪ್ರಕ್ಯೂರ್‌ಮೆಂಟ್‌ನ ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ಏಕ ಲಕೋಟೆ ಪದ್ಧತಿಯಲ್ಲಿ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಅರ್ಹ ಗುತ್ತೆಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಇ–ಪ್ರಕ್ಯೂರ್‌ಮೆಂಟ್ ವೆಬ್‌ಸೈಟ್: **www.kppp.karnataka.gov.in** ಮೂಲಕ ಟೆಂಡರ್ ಸಲ್ಲಿಸುವುದು.

ಇ–ಪ್ರಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: (As per KPPP Portal ಘಂಟೆಯವರೆಗೆ) ಟೆಂಡರ್ ತೆರೆಯುವ ದಿನಾಂಕ: (As per KPPP Portal) ಹೆಚ್ಚಿನ ವಿವರಗಳಿಗಾಗಿ ಪುರಸಭೆಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸುವುದು.

ಸಹಿ/– ಶ್ರೀ ಮಂಜುನಾಥ ಪಿ.ಆರ್ (ಕೆ.ಎ.ಎಸ್), ಆಡಳಿತಾಧಿಕಾರಿಗಳು, ಪುರಸಭೆ, ದೇವನಹಳ್ಳಿ
ಸಹಿ/– ಶ್ರೀ ಶಿವಮೂರ್ತಿ ಎ, (ಕೆ.ಎಂ.ಎಸ್), ಮುಖ್ಯಾಧಿಕಾರಿ, ಪುರಸಭೆ, ದೇವನಹಳ್ಳಿ

ವಾಸಾಸಂಇ/ವಾಪ್ರ/919/ಎಸ್‌ಎಸ್‌ಸಿ/2026–27

SOBHA LIMITED
CIN : L45201KA1995PLC018475
Regd. Office: 'SOBHA' Sarjapur – Marathahalli Outer Ring Road (ORR), Devarabisanahalli, Bellandur Post, Bangalore - 560 103
Ph: +91-80-49320000, Email: investors@sobha.com, Website: www.sobha.com

NOTICE TO THE SHAREHOLDERS
[For the attention of Equity Shareholders of the Company]
(Transfer of Equity Shares to Investor Education and Protection Fund)

This Notice is given pursuant to the provisions of Section 124(6) of the Companies Act 2013 read with "Investor Education and Protection Fund Authority (Accounting Audit, Transfer and Refund) Rules, 2016 and subsequent amendments thereto.

The shareholders may note that the dividend declared by the Company for the Financial Year 2018-19, which remained unclaimed for seven years, is due for transfer to the Investor Education and Protection Fund (IEPF) after the closure of the 7th year, i.e. on September 15, 2026. The equity shares held by those shareholders who have not claimed the dividend for the consecutive seven years starting from Financial Year 2018-19 are due for transfer to IEPF and will be transferred to IEPF subsequently on transfer of the dividend amount as per the procedure set out in the rules.

In compliance with the provisions of the rules, the Company has sent/is sending individual notices at the latest available addresses of the respective shareholders whose dividends are lying unclaimed for the last 7 consecutive years, advising them to claim the dividends expeditiously. Further the Company has uploaded the full details of shareholders including their folio number or DP-ID-Client ID and shares due for transfer to IEPF on its website www.sobha.com. Shareholders are requested to refer to the website to verify the details of uncashed dividend and shares liable to be transferred to IEPF.

In case the Company does not receive any communication from the concerned shareholders by September 15, 2026, the Company shall with a view to adhering with the requirements set out in the Rules, transfer the shares of concerned shareholders to IEPF by due date i.e., October 15, 2026. Please note that no claim shall lie against the Company in respect of the unclaimed dividend amount and shares transferred to IEPF pursuant to the said rules.

Shareholders may note that both unclaimed/ unpaid dividend(s) and the corresponding shares transferred to IEPF including all benefits accruing thereon, if any, can be claimed back by the shareholders from IEPF Authority after following the procedure prescribed in the aforesaid rules. Concerned shareholders, holding shares in Physical form and whose shares are liable to be transferred to IEPF, may note that the Company would be issuing duplicate share certificates in lieu of the original share certificate(s) held by them for the purpose of transfer of shares to IEPF as per the Rules and upon issue of such duplicate share certificates, the Company shall inform the depository by way of corporate action to convert the duplicate share certificate into DEMAT form and transfer in favour of IEPF. The original share certificate(s) which stand registered in the name of the original shareholder will stand automatically cancelled and be deemed non-negotiable. Concerned shareholders holding shares in dematerialized form may note that the Company shall inform the depository by way of corporate action for transfer of shares in favour of the DEMAT account of the IEPF.

The shareholder may further note that the details uploaded by the Company on its website should be regarded and shall be deemed adequate notice in respect of the issue of duplicate share certificate(s) by the Company for the purpose of transfer of shares to IEPF pursuant to the Rules.

In case the concerned shareholder have any query on the subject matter and the Rules, they may either contact the Secretarial Department of the Company at 'SOBHA' Sarjapur - Marthahalli Outer Ring Road (ORR), Devarabisanahalli, Bellandur Post, Bangalore – 560103, Tel: 080-49320000, e-mail ID: investors@sobha.com or Company's Registrar and Transfer Agent, MUFG Intime India Private Limited, C-101, Embassy 247, L.B.S. Marg,Vikhroli (West), Mumbai - 400083, Tel No. 022-25946970, e-mail ID: investor.helpdesk@in.mpms.mufg.com

For Sobha Limited
On Behalf of the Board of Directors
Sd/-
Bijan Kumar Dash
Company Secretary & Compliance Officer

Date : June 01, 2026
Place : Bangalore

ಪ್ರಜಾವಾಣಿ **ಕ್ಲಾಸಿಫೈಡ್ಸ್**
ಪ್ರತಿಯೊಬ್ಬರಿಗೂ ಉಪಯುಕ್ತ

PUBLIC NOTICE

St.John Ambulance (India)
Karnataka State Centre, Sampangiramnagar, Bangalore-560027,
Ph : 22223384, 22295631, Fax: 080-22223384, Email: stjohnambulanceksc@ymil.com

ಸಾರ್ವಜನಿಕರ ಗಮನಕ್ಕೆ

ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರುವುದೇನಂದರೆ ಕೆಲವು ಅನಾಮಧೇಯ /ಅನಧಿಕೃತ ವ್ಯಕ್ತಿಗಳು ಸೇಂಟ್ ಜಾನ್ ಅಂಬ್ಯುಲೆನ್ಸ್ (ಇಂಡಿಯಾ) ಸಂಸ್ಥೆಯ ಹೆಸರಿನಡಿಯಲ್ಲಿ ಪ್ರಥಮ ಚಿಕಿತ್ಸಾ ತರಬೇತಿ ನೀಡಿ, ಪ್ರಮಾಣ ಪತ್ರಗಳನ್ನು ನೀಡುತ್ತಿರುವುದು ಸಂಸ್ಥೆಯ ಗಮನಕ್ಕೆ ಬಂದಿದೆ. ಸೇಂಟ್ ಜಾನ್ ಅಂಬ್ಯುಲೆನ್ಸ್ (ಇಂಡಿಯಾ) ಕರ್ನಾಟಕ ಕೇಂದ್ರವು "ಬೆಂಗಳೂರು ಘಟಕ" ಎಂಬ ಬೇರೊಂದು ಚಿಕಿತ್ಸಾ ಕೇಂದ್ರವನ್ನು ಹೊಂದಿಲ್ಲ. ಒಂದು ವೇಳೆ ಸೇಂಟ್ ಜಾನ್ ಅಂಬ್ಯುಲೆನ್ಸ್ (ಇಂಡಿಯಾ) ಹೆಸರಿನಲ್ಲಿ ಬೇರೆ ಯಾರಾದರೂ ಪ್ರಥಮ ಚಿಕಿತ್ಸಾ ತರಬೇತಿ–ಯನ್ನು ನೀಡುತ್ತಿದ್ದರೆ ಅಥವಾ ಪ್ರಮಾಣ ಪತ್ರಗಳನ್ನು ನೀಡುತ್ತಿದ್ದರೆ ಈ ಸಂಸ್ಥೆಗೆ ತಿಳಿಸಬೇಕೆಂದು ಮತ್ತು ಅಂಥ ತರಬೇತಿ ಮತ್ತು ಪ್ರಮಾಣ ಪತ್ರಗಳು ಮಾನ್ಯತೆ ಪಡೆದಿಲ್ಲವೆಂದು ತಿಳಿಯುವುದು.

ಸ್ಥಳ: ಬೆಂಗಳೂರು
ದಿನಾಂಕ: 01–06–2026

ಸಹಿ/-
(ಎಸ್. ಆರ್. ಶಿವಶಂಕರ್)
ಪ್ರಧಾನ ಗೌರವ ಕಾರ್ಯದರ್ಶಿಗಳು

CHANGE OF NAME
I, Madhu Sudhan Rao J R, R/at # 1392, Sai Baba Temple Road, Opp. Rajamurali Theatre, Kodigehalli, Bengaluru- 560092, have changed my minor son's name from M CHARVIK RAO JADHAV to **CHARVIK RAO J M** vide affidavit dated 01.06.2026 before notary Uday Kumar K, Bengaluru. Henceforth he shall be called as CHARVIK RAO J M only.

I, ANNAPURNESHWARI K S, W/o Sujieth K S, aged about 24 years, residing at No. 2768, Sri Aswath Nivasa, Santhe Maidhan, Kolar Main Road, Near ICICI Bank, Bangarpet 563114, hereby declare that I have changed my name from ANNAPURNESHWARI B J (ANNAPURNESHWARI BYRAPURA JUTUR) TO ANNAPURNESHWARI K S (ANNAPURNESHWARI KESARLA SUJIETH) after marriage on my Aadhaar card, PAN Card and Voter Id my name is mentioned as ANNAPURNESHWARI K S. Both the names refer to one and the same person, i.e., myself vide affidavit dated 30.05.2026 before Notary V.B Prasad Bangarpet. Hence I shall be called as ANNAPURNESHWARI K S. for all purpose.

Lost

DOCUMENT LOST
I, **Anjanappa S M,** residing at No. 124, A Block, Hebbal, Bengaluru, have lost my **Original Sale agreement Document No./ Identification: Sale of Survey number - 182, Shivanapur Village.** While in transit. If found please contact: **9740017663**

REAL ESTATE SELLING

Flat

M G Road And Around

FULLY FURNISHED beautiful interiors 2 BHK flat on Brunton road opp Prestige office 3 CR 9740919014

PERSONAL

Change of Name

CHANGE OF NAME
I, **AKKAMAHDEVI PATIL,** residing at No 41206, 20th Floor, Prestige Jandal City Tower-1 Anchepalya, Nagasandra Post, Bengaluru-560073, have changed my name to **AKKAMAHADEVI BHEEMANAGOUDA PATIL** vide affidavit dated 01/06/2026 before Notary Gangaraju B.N., Bengaluru.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

ಲಾಲ್‌ಬಾಗ್: ಮಾವು, ಹಲಸಿನ ಮೇಳ 4ರಿಂದ

65 ತಳಿಯ ಮಾವು, 15 ತಳಿಯ ಹಲಸಿನ ಹಣ್ಣು ಲಭ್ಯ

• ಹಣ್ಣುಗಳಿಂದ ತಯಾರಿಸಿದ ಉಪ ಉತ್ಪನ್ನಗಳ ಮಾರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಾಲ್‌ಬಾಗ್‌ನಲ್ಲಿ 'ಮಾವು ಮತ್ತು ಹಲಸು ಮೇಳ' ಜೂನ್ 4ರಿಂದ ಆರಂಭವಾಗಲಿದ್ದು, ಈ ತಿಂಗಳ ಅಂತ್ಯದವರೆಗೂ ನಡೆಯಲಿದೆ.

ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ ಮತ್ತು ತೋಟಗಾರಿಕೆ ಇಲಾಖೆ ಜಂಟಿಯಾಗಿ 'ಮಾವು ಮತ್ತು ಹಲಸು ಮೇಳ- 2026' ಆಯೋಜಿಸಿದ್ದು, ನೈಸರ್ಗಿಕವಾಗಿ ಮಾಗಿಸಿದ, ರಾಸಾಯನಿಕ ಮುಕ್ತ ಹಣ್ಣುಗಳನ್ನು ರೈತರಿಂದಲೇ ಗ್ರಾಹಕರಿಗೆ ನೇರವಾಗಿ ತಲುಪಿಸುವುದು ನಮ್ಮ ಉದ್ದೇಶ' ಎಂದು ನಿಗಮದ ಅಧ್ಯಕ್ಷ ಬಿ.ಸಿ. ಮುದ್ದು ಗಂಗಾಧರ್ ಅವರು ಪತ್ರಿಕಾಗೋಷ್ಠಿಯಲ್ಲಿ ಸೋಮವಾರ ತಿಳಿಸಿದರು.

ಮೇಳದ ಮೂಲಕ ನೇರ ಮಾರುಕಟ್ಟೆ ಒದಗಿಸುವುದರಿಂದ ರೈತರ ಶ್ರಮಕ್ಕೆ ನ್ಯಾಯಯುತ ಬೆಲೆ ಸಿಗಲಿದ್ದು, ಗ್ರಾಹಕರಿಗೂ ಕೈಗೆಟುಕುವ ದರದಲ್ಲಿ ಗುಣಮಟ್ಟದ ಹಣ್ಣುಗಳು ಲಭ್ಯವಾಗಲಿವೆ ಎಂದರು.

ಸಸಿ ಮಾರಾಟಕ್ಕೆ ನೀತಿ

ಹಣ್ಣಿನ ಸಸಿಗಳನ್ನು ಮಾರಾಟ ಮಾಡಲು ನರ್ಸರಿಗಳಿಗೆ ನೀತಿ ಜಾರಿ ಮಾಡಲು ಸರ್ಕಾರಕ್ಕೆ ಮನವಿ ಸಲ್ಲಿಸಲಾಗುವುದು ಎಂದು ತೋಟಗಾರಿಕೆ ಇಲಾಖೆ ನಿರ್ದೇಶಕ ಇಬ್ರಾಹಿಂ ಮೈಗೂರ ತಿಳಿಸಿದರು.

ಮಿಯಾಜಾಕಿ ಮಾವು, ವಿಯೆಟ್ನಾಂ ಹಲಸು ಸೇರಿದಂತೆ ಹಲವು ವಿದೇಶಿ ತಳಿಗಳನ್ನು ನರ್ಸರಿಗಳಲ್ಲಿ ಮಾರಾಟ ಮಾಡಿ, ಪ್ರಚಾರ ಮಾಡುವ ಮೂಲಕ ರೈತರಲ್ಲಿ ಗೊಂದಲ ಮೂಡಿಸಲಾಗುತ್ತಿದೆ. ಅತಿ ಹೆಚ್ಚು ಫಸಲು ಬರುತ್ತದೆ ಎಂದು ವೈಭವೀಕರಿಸಿ, ಸಸಿಗಳನ್ನು ದುಬಾರಿ ಬೆಲೆಗೆ ಮಾರಾಟ ಮಾಡಲುತ್ತಿದೆ. ಹೀಗಾಗಿ, ಇವುಗಳಿಗೆ ನಿಯಂತ್ರಣ ಹಾಕಬೇಕಾಗಿದೆ. ರೈತರು ಹೊಸ ತಳಿಗಳನ್ನು ಖರೀದಿಸುವ ಮುನ್ನ ಅವುಗಳ ಬಗ್ಗೆ ಮಾಹಿತಿ ತಿಳಿದುಕೊಳ್ಳಬೇಕು ಎಂದರು.

ಮಾವು ಬೆಳೆಗಾರರಿಗೆ 168 ಮಳಿಗೆ ಹಾಗೂ ಹಲಸು ಬೆಳೆಗಾರರಿಗೆ 17 ಮಳಿಗೆಗಳನ್ನು ಸಂಪೂರ್ಣ ಉಚಿತವಾಗಿ ನೀಡಿದೆ. ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ತುಮಕೂರು, ಮಂಡ್ಯ, ಕೊಪ್ಪಳ ಹಾಗೂ ಧಾರವಾಡ ಸೇರಿದಂತೆ ಪ್ರಮುಖ ಜಿಲ್ಲೆಗಳ ರೈತರು ಮೇಳದಲ್ಲಿ ಭಾಗವಹಿಸಲಿದ್ದಾರೆ ಎಂದು ಹೇಳಿದರು.

ಈ ಬಾರಿಯ ಮೇಳದಲ್ಲಿ 65ಕ್ಕೂ ಹೆಚ್ಚು ವಿವಿಧ ತಳಿಯ ಮಾವು ಹಾಗೂ 15ಕ್ಕೂ ಹೆಚ್ಚು ತಳಿಯ ಹಲಸಿನ ಹಣ್ಣುಗಳನ್ನು ಪ್ರದರ್ಶಿಸಲಾಗುತ್ತಿದೆ. ಬಾದಾಮಿ, ರತ್ನಗಿರಿ ಆಲ್ಫಾನ್ಸೋ, ರಸಪುರಿ, ಮಲ್ಲಿಕಾ, ಸಿಂಧೂರ, ಇಮಾಮ್ ಪಸಂದ್, ಕೇಸರ್, ಶುಗರ್ ಬೇಬಿ, ದಶೇರಿ, ಬೇನಿಷಾನ್ ಮತ್ತು ಮಲಗೋವಾ ತಳಿಯ ಹಣ್ಣುಗಳು ಖರೀದಿಗೆ ಲಭ್ಯವಾಗಲಿವೆ. ಹಲಸಿನಲ್ಲಿ ತೂಬಗೆರೆ, ಲಾಲ್‌ಬಾಗ್ ಮಧುರ, ರುದ್ರಾಕ್ಷಿ, ಶಿವರಾತ್ರಿ, ಸೂರ್ಯ ಮತ್ತು ಚಂದ್ರ ತಳಿಗಳು ಪ್ರಮುಖ ಆಕರ್ಷಣೆಯಾಗಿವೆ ಎಂದು ಹೇಳಿದರು.

ಬಿ.ಸಿ. ಮುದ್ದು ಗಂಗಾಧರ್, ಇಬ್ರಾಹಿಂ ಮೈಗೂರ, ಟಿ.ಆರ್. ವೇದಮೂರ್ತಿ, ಎಂ. ಜಗದೀಶ್ ಅವರು ವಿವಿಧ ತಳಿಯ ಮಾವುಗಳನ್ನು ಪ್ರದರ್ಶಿಸಿದರು

ರೈತರ ಆದಾಯ ಹೆಚ್ಚಿಸುವ ಉದ್ದೇಶದಿಂದ ಹಣ್ಣುಗಳಿಂದ ತಯಾರಿಸಿದ ಉಪ ಉತ್ಪನ್ನಗಳ ಮಾರಾಟಕ್ಕೂ ಮೇಳದಲ್ಲಿ ಅವಕಾಶ ನೀಡಲಾಗಿದೆ. ಮಾವು ಮತ್ತು ಹಲಸಿನಿಂದ ತಯಾರಿಸಿದ ಜ್ಯೂಸ್, ಜಾಮ್, ಉಪ್ಪಿನಕಾಯಿ, ಒಣಗಿಸಿದ ಹಣ್ಣಿನ ಚೂರುಗಳು, ಚಿಪ್ಸ್, ಪಲ್ಪ್, ಕ್ಯಾಂಡಿ ಹಾಗೂ ವಿಶೇಷ ಐಸ್ ಕ್ರೀಮ್ ಲಭ್ಯವಾಗಲಿವೆ ಎಂದು ಮಾಹಿತಿ ನೀಡಿದರು.

ಮೇಳಕ್ಕೆ ಶುಲ್ಕವಿಲ್ಲ: ಲಾಲ್‌ಬಾಗ್ ಉದ್ಯಾನ ಪ್ರವೇಶಿಸಲು ವಯಸ್ಕರಿಗೆ ₹50 ಹಾಗೂ ಮಕ್ಕಳಿಗೆ ₹30 ಶುಲ್ಕವಿರುತ್ತದೆ. ಶಾಲಾ ಸಮವಸ್ತ್ರದಲ್ಲಿ ಬರುವ 10ನೇ ತರಗತಿಯೊಳಗಿನ ವಿದ್ಯಾರ್ಥಿಗಳಿಗೆ ಉಚಿತ ಪ್ರವೇಶ. ಮಾವು-ಹಲಸು ಮೇಳಕ್ಕೆ ಯಾವುದೇ ರೀತಿಯ ಪ್ರವೇಶ ಶುಲ್ಕ ಇರುವುದಿಲ್ಲ. ವಾಯುವಿಹಾರಕ್ಕೆ ಬರುವವರೂ ಹಣ್ಣುಗಳನ್ನು ಖರೀದಿಸಲಿ ಎಂಬ ಉದ್ದೇಶದಿಂದ ಬೆಳಗ್ಗೆ 6ರಿಂದಲೇ ಮೇಳ ಆರಂಭವಾಗಲಿದ್ದು, ಸಂಜೆ 7ರವರೆಗೆ ನಡೆಯಲಿದೆ ಎಂದರು.

'ಈ ಬಾರಿ ಮಳೆಯಿಂದ ಬೆಳೆ ನಿರೀಕ್ಷಿತ ಪ್ರಮಾಣದಲ್ಲಿಲ್ಲ. ಕಳೆದ ವರ್ಷ 1.39 ಹೆಕ್ಟೇರ್ ಪ್ರದೇಶದಲ್ಲಿ ಮಾವು ಬೆಳೆಯಲಾಗಿತ್ತು. ಈ ವರ್ಷ 1.45 ಲಕ್ಷ ಹೆಕ್ಟೇರ್‌ಗೂ ಹೆಚ್ಚು ಪ್ರದೇಶದಲ್ಲಿ ಮಾವು ಬೆಳೆಯಲಾಗಿದ್ದರೂ, ಹವಾಮಾನ ವೈಪರೀತ್ಯದಿಂದಾಗಿ ಮಾವಿನ ಇಳುವರಿ ಕಡಿಮೆಯಾಗಿದೆ. ಮೇಳದಲ್ಲಿ 150 ಟನ್‌ಗೂ ಹೆಚ್ಚು ಮಾವು, 15 ಟನ್‌ಗೂ ಹೆಚ್ಚು ಹಲಸು ಮಾರಾಟವಾಗುವ ನಿರೀಕ್ಷೆ ಇದೆ. ₹1.8 ಕೋಟಿ ವಹಿವಾಟಿನ ಗುರಿ ಹೊಂದಲಾಗಿದೆ' ಎಂದು ನಿಗಮದ ವ್ಯವಸ್ಥಾಪಕ ನಿರ್ದೇಶಕ ಟಿ.ಆರ್. ವೇದಮೂರ್ತಿ ತಿಳಿಸಿದರು.

ರಫ್ತು: ಮಾಡಿಕೆರೆ ಮಾವು ಅಭಿವೃದ್ಧಿ ಕೇಂದ್ರದ ಪ್ಯಾಕ್‌ಹೌಸ್‌ನ ಮೂಲಕ ಅಮೆರಿಕ, ಜರ್ಮನಿ, ಯುಕೆ, ಐರ್ಲೆಂಡ್, ಲಂಡನ್‌ಗೆ 85 ಟನ್ ಮಾವು ರಫ್ತು ಮಾಡಲಾಗಿದೆ. ಜೂನ್ ಅಂತ್ಯಕ್ಕೆ ಈ ಪ್ರಮಾಣ 100 ಟನ್‌ಗೆ ತಲುಪಲಿದೆ ಎಂದರು.

ಆರ್‌ಸಿಬಿ ಸತತ ಐಪಿಎಲ್ ಟ್ರಾಫಿಗಳನ್ನು ಗೆದ್ದಿದೆ!

ಜೆಇಇ ಅಡ್ವಾನ್ಸ್ಡ್: ಶ್ರೀ ಚೈತನ್ಯ ವಿದ್ಯಾರ್ಥಿಗಳ ಅತ್ಯುತ್ತಮ ಸಾಧನೆ

ಪ್ರಜಾವಾಣಿ ವಾರ್ತೆ

ಆದಿತ್ಯ ಸಿಂಗ್

ತನ್ಮಯ್ ಎಚ್.ಜಿ

ರಾಮ್ ನಿಖಿಲ್

ಬಾಲಾದಿತ್ಯ

ಅರ್ಚಿತ್ ಸಿಂಗ್

ಬೆಂಗಳೂರು: ಜೆಇಇ ಅಡ್ವಾನ್ಸ್ಡ್ ಪರೀಕ್ಷೆಯಲ್ಲಿ ಶ್ರೀ ಚೈತನ್ಯದಲ್ಲಿ ಓದಿದ ರಾಜ್ಯದ ವಿದ್ಯಾರ್ಥಿಗಳು ಅತ್ಯುತ್ತಮ ಸಾಧನೆ ಮಾಡಿದ್ದಾರೆ.

1000 ರ್‍ಯಾಂಕ್‌ಗಳ (ಎಐಆರ್) ಒಳಗೆ ಹತ್ತು ವಿದ್ಯಾರ್ಥಿಗಳು ಸ್ಥಾನ ಗಳಿಸಿದ್ದಾರೆ. ಆದಿತ್ಯ ಸಿಂಗ್-37, ತನ್ಮಯ್ ಎಚ್.ಜಿ- 67, ರಾಮ್ ನಿಖಿಲ್ ಪುವ್ವಡಿ- 74, ಬಾಲಾದಿತ್ಯ ಕೆ- 242, ಅರ್ಚಿತ್ ಸಿಂಗ್- 351, ಚಿರಂತ್ ಭಾರ್ಗವ್- 565, ಕಟ್ಟಾ ಸಂಜಯ್- 595, ಆಕಾಶ್ ಗೋಮತಿ ಸುರೇಶ್- 715, ಆಶ್ರಿತಾ ಅರ್ಯಪು- 755 ಮತ್ತು ವಿಕ್ರಾಂತ್ ಕೊಂಡೂರು- 780ನೇ ರ್‍ಯಾಂಕ್ ಗಳಿಸಿದ್ದಾರೆ ಎಂದು ಶ್ರೀ ಚೈತನ್ಯ ಎಜ್ಯುಕೇಷನಲ್ ಇನ್‌ಸ್ಟಿಟ್ಯೂಷನ್‌ನ ಎಜಿಎಂ ವಿ. ಸತೀಶ್ ಕುಮಾರ್ ತಿಳಿಸಿದ್ದಾರೆ.

ಅತ್ಯುತ್ತಮ ಸಾಧನೆ ಮಾಡಿದ ಪ್ರತಿಯೊಬ್ಬ ವಿದ್ಯಾರ್ಥಿ ಹಾಗೂ ಪೋಷಕರಿಗೆ ಶ್ರೀ ಚೈತನ್ಯ ಎಜ್ಯುಕೇಷನಲ್ ಇನ್‌ಸ್ಟಿಟ್ಯೂಷನ್ಸ್‌ನ ನಿರ್ದೇಶಕಿ ಸುಷ್ಮಾ ಬೋಪಣ್ಣ ಅಭಿನಂದಿಸಿದ್ದಾರೆ.

ದತ್ತಾಂಶ ಆಧಾರಿತ ಕಾರ್ಯಾಚರಣೆ ಮಾದರಿಗಾಗಿ ಪ್ರಶಸ್ತಿ ಗರಿ

ವಿಮಾನ ನಿಲ್ದಾಣಕ್ಕೆ ಡೈಮಂಡ್ ಅವಾರ್ಡ್

ಪ್ರಜಾವಾಣಿ ವಾರ್ತೆ

ಡೈಮಂಡ್ ಅವಾರ್ಡ್

ಬೆಂಗಳೂರು: ಏರ್‌ಪೋರ್ಟ್ಸ್ ಕೌನ್ಸಿಲ್ ಇಂಟರ್‌ನ್ಯಾಷನಲ್ (ಎಸಿಐ) ಏಷ್ಯಾ-ಪೆಸಿಫಿಕ್ ಮತ್ತು ಮಧ್ಯಪ್ರಾಚ್ಯ ಸುರಕ್ಷತಾ ಮಾನ್ಯತಾ ಪ್ರಶಸ್ತಿ 2026ರಲ್ಲಿ 'ಡೈಮಂಡ್ ಅವಾರ್ಡ್'ಗೆ ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪಾತ್ರವಾಗಿದೆ.

ಸುರಕ್ಷಾ ಕ್ರಮಗಳನ್ನು ಉತ್ತೇಜಿಸುವ, ಪರಿಣಾಮಕಾರಿ, ಪ್ರಾಯೋಗಿಕ ಮತ್ತು ನವೀನ ಪರಿಹಾರ ಕ್ರಮಗಳ ಮೂಲಕ ಸುರಕ್ಷತೆಯನ್ನು ನಿರ್ವಹಿಸುವ ವಿಮಾನ ನಿಲ್ದಾಣ ನಿರ್ವಾಹಕರಿಗೆ ಈ ಪ್ರಶಸ್ತಿ ನೀಡಲಾಗುತ್ತದೆ. ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ರನ್‌ವೇ ಸುರಕ್ಷತೆ ಮೇಲಿನ ನಿರಂತರ ಗಮನ ಮತ್ತು ವಿಮಾನ ನಿಲ್ದಾಣ ಪರಿಸರದ ವಿವಿಧ ಪಾಲುದಾರರ ಸಹಯೋಗದೊಂದಿಗೆ ಜಾರಿಯಾಗಿರುವ ದತ್ತಾಂಶ ಆಧಾರಿತ ಕಾರ್ಯಾಚರಣೆ ಮಾದರಿಗೆ ಪ್ರಶಸ್ತಿ ಲಭಿಸಿದೆ.

ರನ್‌ವೇ ಸೇಫ್ಟಿ ಟೀಮ್ (ಆರ್‌ಎಸ್‌ಟಿ) ನೇತೃತ್ವದಲ್ಲಿ ರೂಪಿಸಲಾದ ಸ್ವದೇಶಿ 'ರನ್‌ವೇ ಸೇಫ್ಟಿ ಮೆಚ್ಯುರಿಟಿ ಮ್ಯಾಟ್ರಿಕ್ಸ್', ಅಪಾಯದ ಸ್ಥಳಗಳ ನಿರ್ವಹಣಾ ಕ್ರಮಗಳು, ಪೈಲಟ್ ಜಾಗೃತಿ ಕಾರ್ಯಕ್ರಮಗಳು, ಸುಧಾರಿತ ಫಾರಿನ್ ಆಬ್ಜೆಕ್ಟ್ ಡೆಬ್ರಿಸ್ (ಎಫ್‌ಒಡಿ) ನಿರ್ವಹಣಾ ಪದ್ಧತಿ ಹಾಗೂ ಏರ್‌ಸೈಡ್ ಸುರಕ್ಷತೆ ಮತ್ತು ಕಾರ್ಯಾಚರಣಾ ದಕ್ಷತೆಯನ್ನು ಹೆಚ್ಚಿಸುವ ನಿರಂತರ ಕ್ರಮಗಳು ಈ ಸಾಧನೆಗೆ ಪ್ರಮುಖ ಕಾರಣ ಎಂದು ಮುಖ್ಯ ಕಾರ್ಯಾಚರಣೆ ಅಧಿಕಾರಿ ಗಿರೀಶ್ ನಾಯರ್ ಮಾಹಿತಿ ನೀಡಿದ್ದಾರೆ.

'ವಿಮಾನಯಾನ ಸುರಕ್ಷತೆ ಮತ್ತು ಕಾರ್ಯಾಚರಣೆ ದಕ್ಷತೆ ನಮ್ಮ ಉದ್ಯಮದ ಮೂಲಾಧಾರ. ಹೆಚ್ಚುತ್ತಿರುವ ಸಂಕೀರ್ಣ ಕಾರ್ಯಾಚರಣೆ ಪರಿಸರದಲ್ಲಿ ಪ್ರಯಾಣಿಕರ ವಿಶ್ವಾಸವನ್ನು ಉಳಿಸಿಕೊಳ್ಳಲು ಸುರಕ್ಷಿತ ಕಾರ್ಯಾಚರಣೆ ಮತ್ತು ರನ್‌ವೇ ನಿರ್ವಹಣೆ ಅತ್ಯಂತ ಪ್ರಮುಖವಾಗಿದೆ. ಈ ಪ್ರದೇಶದ ವಿಮಾನ ನಿಲ್ದಾಣವು ಬದಲಾಗುತ್ತಿರುವ ಪರಿಸ್ಥಿತಿಗೆ ಹೊಂದಿಕೊಳ್ಳುವಲ್ಲಿ ಅತ್ಯುತ್ತಮ ನಾಯಕತ್ವ ಮತ್ತು ಸ್ಥೈರ್ಯವನ್ನು ಪ್ರದರ್ಶಿಸಿವೆ' ಎಂದು ಎಸಿಐ ಏಷ್ಯಾ-ಪೆಸಿಫಿಕ್ ಮತ್ತು ಮಧ್ಯಪ್ರಾಚ್ಯದ ಮಹಾನಿರ್ದೇಶಕ ಸ್ಟೆಫಾನೊ ಬರೋನ್ಸಿ ತಿಳಿಸಿದ್ದಾರೆ.

ಪುಸ್ತಕ ಪ್ರಕಟಣೆಗೆ ಸಹಾಯಧನ: ಅರ್ಜಿ ಆಹ್ವಾನ

ಬೆಂಗಳೂರು: ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ ವತಿಯಿಂದ ಬಂಜಾರ ಸಂಸ್ಕೃತಿ, ಭಾಷೆ, ಕಲೆ, ಸಾಹಿತ್ಯ ಕುರಿತು 2024-25 ಮತ್ತು 2025-26ನೇ ಸಾಲಿನಲ್ಲಿ ಪಿಎಚ್.ಡಿ ಪದವಿ ಪಡೆದ ಅಭ್ಯರ್ಥಿಗಳಿಗೆ ಪುಸ್ತಕ ಪ್ರಕಟಣೆಗಾಗಿ ಸಹಾಯಧನ ನೀಡಲು ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿಯನ್ನು ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ, ಕನ್ನಡ ಭವನ, 1ನೇ ಮಹಡಿ, ಜೆ.ಸಿ ರಸ್ತೆ, ಬೆಂಗಳೂರು-02 ಇಲ್ಲಿಗೆ ಸ್ವವಿವರದೊಂದಿಗೆ ಜೂನ್ 15ರೊಳಗೆ ಸಲ್ಲಿಸಬಹುದು.

ಮಾಹಿತಿಗೆ ಸಂಪರ್ಕ ಸಂಖ್ಯೆ: 080-29917745

ರಾಮಯ್ಯ ವಿ.ವಿ: 'ಸ್ಟೆಮ್' ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ ಮೊದಲ 'ಸ್ಟೆಮ್' ಕೇಂದ್ರವು (ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್ ಮತ್ತು ಗಣಿತ) ರಾಮಯ್ಯ ಡೀಮ್ಡ್ ವಿಶ್ವವಿದ್ಯಾಲಯದ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಆ್ಯಂಡ್ ಮ್ಯಾನೇಜ್‌ಮೆಂಟ್‌ನಲ್ಲಿ (ಆರ್‌ಐಎಸ್‌ಎಂ) ಆರಂಭವಾಗಲಿದೆ.

ಸೋಮವಾರ ನಡೆದ ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ಗೋಕುಲ ಎಜುಕೇಷನ್ ಫೌಂಡೇಷನ್ ಅಧ್ಯಕ್ಷ ಎಂ.ಆರ್. ಜಯರಾಂ, 'ಅಲ್ಬನಿಯದ ಸ್ಟೇಟ್ ಯೂನಿವರ್ಸಿಟಿ ಆಫ್ ನ್ಯೂಯಾರ್ಕ್‌ನ ಸಹಯೋಗದಲ್ಲಿ ಸ್ಥಾಪನೆಯಾಗಲಿರುವ ಸ್ಟೆಮ್ ಭಾರತದಲ್ಲಿಯೇ ಮೊದಲ ವಿಶಿಷ್ಟ, ಸಂಪೂರ್ಣ ಹೊಸದಾದ, ಸಕಲ ಸೌಕರ್ಯವುಳ್ಳ ಕೇಂದ್ರವಾಗಿದೆ. ಜೂನ್ 4ರಂದು ಉದ್ಘಾಟನೆಗೊಳ್ಳಲಿದೆ' ಎಂದು ಹೇಳಿದರು.

ಮುಖ್ಯಾಂಶಗಳು

- ದೇಶದಲ್ಲೇ ಮೊದಲ ಕೇಂದ್ರ
- ಸ್ಟೇಟ್ ಯೂನಿವರ್ಸಿಟಿ ಆಫ್ ನ್ಯೂಯಾರ್ಕ್ ಸಹಯೋಗ
- ಜೂನ್ 4ರಂದು ಉದ್ಘಾಟನೆ

'ಉದ್ಯಮಕ್ಕೆ ಪೂರಕ ಎಂಜಿನಿಯರಿಂಗ್ ಪಠ್ಯಕ್ರಮ, ಸ್ಥಿತಿಸ್ಥಾಪಕ ಮತ್ತು ಭಾಷಾಂತರ ಸಂಶೋಧನೆಗೆ ಆದ್ಯತೆ ನೀಡಲಾಗುತ್ತದೆ. ಅಂತರ ರಾಷ್ಟ್ರೀಯಮಟ್ಟದ ಬೋಧಕ ವೃಂದ, ಕ್ಯಾಂಪಸ್‌ನಲ್ಲಿಯೇ ಉದ್ಯಮ ಮಾರ್ಗದರ್ಶನ, ಆಧುನಿಕ ಪಠ್ಯಕ್ರಮದ ಮೂಲಕ ಭಾರತದ ಮುಂದಿನ ದಶಕದ ತಂತ್ರಜ್ಞಾನ ಹಾಗೂ ಉದ್ಯಮದ ಅಗತ್ಯಗಳನ್ನು ಪೂರೈಸುವುದು ಹಾಗೂ ಸಮರ್ಥ ಪದವೀಧರರನ್ನು ಸಿದ್ಧಪಡಿಸುವ ಕೆಲಸವನ್ನು ಕೇಂದ್ರ ಮಾಡಲಿದೆ' ಎಂದರು.

'ಆರ್‌ಐಎಸ್‌ಎಂನಿಂದ ಎಂಜಿನಿಯರಿಂಗ್, ವಿಜ್ಞಾನ ಹಾಗೂ ವ್ಯವಹಾರ ವಿಷಯಗಳಲ್ಲಿ ಪದವಿ, ಸ್ನಾತಕೋತ್ತರ ಹಾಗೂ ಡಾಕ್ಟೋರಲ್ ಪ್ರೋಗ್ರಾಂಗಳನ್ನು ನೀಡಲಾಗುತ್ತದೆ. ಬಿ.ಟೆಕ್‌ನಲ್ಲಿ ಕಂಪ್ಯೂಟರ್ ಸೈನ್ಸ್ ಮತ್ತು ಕೃತಕ ಬುದ್ಧಿಮತ್ತೆ, ವೈಮಾಂತರಿಕ್ಷ ತಂತ್ರಜ್ಞಾನ ಮತ್ತು ಎಲೆಕ್ಟ್ರಿಕಲ್ ಸೈನ್ಸ್ ಕೋರ್ಸ್‌ಗಳನ್ನು ಪರಿಚಯಿಸಲಾಗಿದೆ. ಬಿಬಿಎ ಹಾಗೂ ಎಂಬಿಎ ಪ್ರೋಗ್ರಾಂಗಳು ಇರುತ್ತವೆ' ಎಂದು ವಿವರ ನೀಡಿದರು.

> ರಾಷ್ಟ್ರ ಮಟ್ಟದ ಅರ್ಹತಾ ಪರೀಕ್ಷೆಗಳಾದ ಜೆಇಇ ಮತ್ತು ಕಾಮೆಡ್-ಕೆನಲ್ಲಿ ಅರ್ಹತೆ ಪಡೆದ ಅಭ್ಯರ್ಥಿಗಳು ಪ್ರವೇಶ ಪಡೆಯಬಹುದು. 360 ವಿದ್ಯಾರ್ಥಿಗಳಿಗೆ ಅವಕಾಶ ಇರುತ್ತದೆ
>
> **ಗುರುಚರಣ್ ಗೊಲ್ಲೆಕೇರಿ,** ಕಾರ್ಯನಿರ್ವಾಹಕ ನಿರ್ದೇಶಕ, ಆರ್‌ಐಎಸ್‌ಎಂ

'ಅಂತರ್ ಶಿಸ್ತೀಯ ಕಲಿಕೆ, ಉದ್ಯಮ ಪ್ರಾಯೋಜಿತ ಉತ್ಕೃಷ್ಟ ಕೇಂದ್ರಗಳು, ಇಂಟರ್ನ್‌ಶಿಪ್, ಲೈವ್ ಪ್ರಾಜೆಕ್ಟ್‌ಗಳು ಮತ್ತು ಬಹು ವರ್ಷಗಳ ಕ್ಯಾಪ್ ಸ್ಟೋನ್ ಕಾರ್ಯಕ್ರಮಗಳನ್ನು ಸಂಯೋಜಿಸಲಾಗುತ್ತದೆ. ವಿದ್ಯಾರ್ಥಿಗಳನ್ನು ಪ್ರಾಯೋಗಿಕವಾಗಿ, ನೈಜ ಜಗತ್ತಿನ ಸಾಮರ್ಥ್ಯದೊಂದಿಗೆ ಸಿದ್ಧಗೊಳಿಸಲಾಗುತ್ತದೆ. ನ್ಯೂಯಾರ್ಕ್ ವಿದ್ಯಾಲಯದ ಜತೆಗೆ ಉದ್ಯಮಗಳ ಸಹಯೋಗವೂ ಇರಲಿದೆ' ಎಂದರು.

ಸುದ್ದಿಗೋಷ್ಠಿಯಲ್ಲಿ ಆಡಳಿತ ಮಂಡಳಿಯ ಡೀನ್ ಎನ್.ಡಿ. ಗಂಗಾಧರ್, ಮಾಜಿ ಡೀನ್ ಡಿ.ಎನ್. ರಘುನಂದನ್, ಕಾರ್ಯನಿರ್ವಾಹಕ ನಿರ್ದೇಶಕ ಗುರುಚರಣ್ ಗೊಲ್ಲೆಕೇರಿ, ಕುಲಸಚಿವ ಜೆ.ಡಿ. ದೇಸಾಯಿ ಇದ್ದರು.

ಜೆಇಇ ಪರೀಕ್ಷೆ: 'ದೀಕ್ಷಾ ವೇದಾಂತು' ಸಂಸ್ಥೆಯ 49 ವಿದ್ಯಾರ್ಥಿಗಳು ಉತ್ತೀರ್ಣ

ಬೆಂಗಳೂರು: ಐಐಟಿಗಳಲ್ಲಿನ ವಿವಿಧ ಕೋರ್ಸ್‌ಗಳ ಪ್ರವೇಶಕ್ಕಾಗಿ ನಡೆದ ಜೆಇಇ- ಅಡ್ವಾನ್ಸ್ಡ್ ಪರೀಕ್ಷೆಯಲ್ಲಿ 'ದೀಕ್ಷಾ ವೇದಾಂತು' ಸಂಸ್ಥೆಯ 49 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಮೊದಲ 500 ರ್‍ಯಾಂಕ್‌ಗಳಲ್ಲಿ ಸಂಸ್ಥೆಯಲ್ಲಿ ತರಬೇತಿ ಪಡೆದ ಮೂವರು ಸ್ಥಾನ ಪಡೆದಿದ್ದಾರೆ.

500ರಿಂದ ಸಾವಿರ ರ್‍ಯಾಂಕ್ ಒಳಗೆ 6 ಮಂದಿ, ಸಾವಿರದಿಂದ ಐದು ಸಾವಿರದವರೆಗಿನ ರ್‍ಯಾಂಕ್‌ಗಳಲ್ಲಿ 21, 5 ಸಾವಿರದಿಂದ 10 ಸಾವಿರದೊಳಗಿನ ರ್‍ಯಾಂಕ್‌ಗಳಲ್ಲಿ 29 ಮಂದಿ ಸ್ಥಾನ ಪಡೆದಿದ್ದು, ಎಸ್.ಹೇಮಂತ್ ಅಖಿಲ ಭಾರತ ಮಟ್ಟದಲ್ಲಿ 178ನೇ ರ್‍ಯಾಂಕ್ ಗಳಿಸಿದ್ದಾರೆ.

ಎನ್.ಸಾವಂತ್ (282), ಎ.ಆಕಾಶ್ (408), ಬಿ.ಎಸ್.ಸೃಜನ್ (548), ಬಿ.ಎಸ್.ಯೋಗೇಶ್ (548), ಜೆ.ರಿಷಿ ಚರಣ್ (997), ಋತ್ವಿಕ್ ರಾವ್ (1,134) ಎ.ಆರ್.ಸೂರ್ಯತೇಜ (1435), ಎಚ್.ಹಂಸಪ್ರಿಯಾ (1856), ಭರತ್ ಮಧುಸೂಧನ ಗುಡಿ (2,000) ರ್‍ಯಾಂಕ್ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ.

'ಪ್ರತಿ ವಿದ್ಯಾರ್ಥಿಯ ಸಾಮರ್ಥ್ಯ ಗುರುತಿಸಿ ಮಾರ್ಗದರ್ಶನ ನೀಡಿದ್ದರಿಂದ ಈ ಸಾಧನೆ ಮಾಡಲು ಸಾಧ್ಯವಾಗಿದೆ' ಎಂದು ದೀಕ್ಷಾ ವೇದಾಂತು ಸಂಸ್ಥಾಪಕ ಜಿ.ಶ್ರೀಧರ್ ಹೇಳಿದ್ದಾರೆ.

ಪಿ.ಜಿ ಕೋರ್ಸ್ ಪ್ರವೇಶಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ಡಾ.ಬಿ. ಆರ್.ಅಂಬೇಡ್ಕರ್ ಅರ್ಥಶಾಸ್ತ್ರ ವಿಶ್ವವಿದ್ಯಾಲಯದಲ್ಲಿ ಎಂ.ಎಸ್ಸಿ ಅರ್ಥಶಾಸ್ತ್ರ, ಎಂ.ಎಸ್ಸಿ ಹಣಕಾಸು ಅರ್ಥಶಾಸ್ತ್ರ, ಎಂ.ಎ ಅರ್ಥಶಾಸ್ತ್ರ, ಎಂ.ಎಸ್ಸಿ ಅಭಿವೃದ್ಧಿ ಅರ್ಥಶಾಸ್ತ್ರ, ಡೇಟಾ ಅನಾಲಿಟಿಕ್ಸ್, ಸಾರ್ವಜನಿಕ ನೀತಿ ಕೋರ್ಸ್‌ಗಳ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಸಿಯುಇಟಿ-ಪಿಜಿಗೆ ಹಾಜರಾದ ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಜೂನ್ 15ರವರೆಗೆ ಅವಧಿ ವಿಸ್ತರಿಸಲಾಗಿದೆ. ಮಾಹಿತಿಗೆ http://base.ac.in ವೀಕ್ಷಿಸಬಹುದು ಎಂದು ಕುಲಸಚಿವೆ ಮಮತಾದೇವಿ ತಿಳಿಸಿದ್ದಾರೆ.

ಕೈದಿಗಳಿಗೆ ಉದ್ಯೋಗ ಆಧಾರಿತ ಕೌಶಲ ತರಬೇತಿ

ಕೇಂದ್ರ ಕಾರಾಗೃಹದಲ್ಲಿ ಕಂಪ್ಯೂಟರ್ ಲ್ಯಾಬ್ ಆರಂಭ
• ಜೈಲಿನಿಂದ ಹೊರಬಂದು ಬದುಕು ಕಟ್ಟಿಕೊಳ್ಳಲು ಅನುಕೂಲ

• ಎ.ಎಂ.ಸುರೇಶ

ಬೆಂಗಳೂರು: ಶಿಕ್ಷೆಯ ಅವಧಿ ಪೂರ್ಣಗೊಳಿಸಿ ಜೈಲಿನಿಂದ ಹೊರಬಂದ ಬಳಿಕ ಉತ್ತಮ ಜೀವನ ರೂಪಿಸಿಕೊಳ್ಳಲು ಉದ್ಯೋಗ ಅಗತ್ಯ ಎಂಬುದನ್ನು ಮನಗಂಡು, ಕಾರಾಗೃಹದಲ್ಲೇ ಕೈದಿಗಳಿಗೆ ಉದ್ಯೋಗ ಆಧಾರಿತ ಕೌಶಲ ತರಬೇತಿ ನೀಡಲು ಕಾರ್ಯಕ್ರಮ ರೂಪಿಸಲಾಗಿದೆ.

ಕಾರಾಗೃಹ ಮತ್ತು ಸುಧಾರಣಾ ಸೇವೆಗಳ ಇಲಾಖೆ ಮತ್ತು ಆರ್.ವಿ. ಎಂಜಿನಿಯರಿಂಗ್ ಕಾಲೇಜು ಈ ಕುರಿತ ಒಪ್ಪಂದಕ್ಕೆ ಸಹಿ ಹಾಕಿವೆ. ಪರಪ್ಪನ ಅಗ್ರಹಾರದ ಕೇಂದ್ರ ಕಾರಾಗೃಹದಲ್ಲಿರುವ ಕೈದಿಗಳಿಗೆ ಕಾಲೇಜಿನ ವತಿಯಿಂದ ಉಚಿತ ಕೌಶಲ ತರಬೇತಿ ನೀಡುವ ಕಾರ್ಯ ಒಂದು ವಾರದಲ್ಲಿ ಆರಂಭವಾಗಲಿದೆ.

'ಸೆಲ್ ಟು ಸ್ಕಿಲ್' ಕಾರ್ಯಕ್ರಮದಡಿ ಆರ್.ವಿ. ಎಂಜಿನಿಯರಿಂಗ್ ಕಾಲೇಜಿನ ಸಹಯೋಗದಲ್ಲಿ ಕಾರಾಗೃಹದಲ್ಲಿ ಕಂಪ್ಯೂಟರ್ ಲ್ಯಾಬ್ ಆರಂಭಿಸಲಾಗಿದೆ. ತರಬೇತಿಗಾಗಿ ಇಲ್ಲಿ 30 ಕಂಪ್ಯೂಟರ್‌ಗಳ ವ್ಯವಸ್ಥೆ ಮಾಡಲಾಗಿದೆ. ಸುಸಜ್ಜಿತವಾದ ಈ ಲ್ಯಾಬ್‌ನಲ್ಲಿ ನಿತ್ಯ ಮೂರು ಗಂಟೆಗಳ ಕಾಲ ಕೈದಿಗಳಿಗೆ ಉಚಿತವಾಗಿ ತರಬೇತಿ ನೀಡಲಾಗುತ್ತದೆ.

> **ಕೌಶಲ ತರಬೇತಿ ಇನ್ನು ಮುಂದೆ ನಿರಂತರ ಪ್ರಕ್ರಿಯೆಯಾಗಲಿದೆ. ಪ್ಲಂಬಿಂಗ್ ಕೆಲಸ, ಎಸಿ, ಟಿವಿ ರಿಪೇರಿ ಇತ್ಯಾದಿಗಳ ತರಬೇತಿ ನೀಡಲಾಗುವುದು**
> **ಅಲೋಕ್ ಕುಮಾರ್,** ಡಿಜಿಪಿ, ಕಾರಾಗೃಹ ಮತ್ತು ಸುಧಾರಣಾ ಸೇವೆಗಳ ಇಲಾಖೆ

> **ಹತ್ತು ತಂಡಗಳಾಗಿ ವಿಂಗಡಿಸಿ ಪ್ರತಿ ವರ್ಷ 200ಕ್ಕೂ ಅಧಿಕ ಮಂದಿಗೆ ತರಬೇತಿ ನೀಡಲು ತೀರ್ಮಾನಿಸಲಾಗಿದೆ. ತರಬೇತಿ ಅವಧಿ ಒಟ್ಟು 120 ಗಂಟೆಯಾಗಿರಲಿದೆ**
> **ಕೆ.ಎನ್. ಸುಬ್ರಹ್ಮಣ್ಯ,** ಪ್ರಾಂಶುಪಾಲರು, ಆರ್.ವಿ.ಎಂಜಿನಿಯರಿಂಗ್ ಕಾಲೇಜು.

ಕಂಪ್ಯೂಟರ್ ಹಾರ್ಡ್‌ವೇರ್ ಅಸೆಂಬ್ಲಿ, ನೆಟ್‌ವರ್ಕಿಂಗ್ ಮತ್ತು ಡಿಜಿಟಲ್ ಮೂಲಸೌಕರ್ಯ, ಡಿಜಿಟಲ್ ಸಾಕ್ಷರತೆ, ಡಿಜಿಟಲ್ ಸಂವಹನ, ಡೆಸ್ಕ್‌ಟಾಪ್ ಪಬ್ಲಿಷಿಂಗ್ ಮತ್ತು ಸೃಜನಾತ್ಮಕ ಸಂವಹನ, ಪೋಸ್ಟರ್‌ಗಳ ವಿನ್ಯಾಸ, ಎಂಎಸ್ ವರ್ಡ್, ಎಕ್ಸೆಲ್, ಪವರ್‌ಪಾಯಿಂಟ್, ಇ-ಮೇಲ್ ಆ್ಯಂಡ್ ಡಾಕ್ಯುಮೆಂಟೇಷನ್, ಲ್ಯಾನ್, ಕೇಬಲಿಂಗ್, ತಾಂತ್ರಿಕ ಮತ್ತು ಡಿಜಿಟಲ್ ಕೌಶಲ, ನೆಟ್‌ವರ್ಕಿಂಗ್ ಆ್ಯಂಡ್ ಕನೆಕ್ಟಿವಿಟಿ ಸ್ಕಿಲ್ ಇತ್ಯಾದಿಗಳ ಬಗ್ಗೆ ಕಲಿಸಲಾಗುತ್ತದೆ.

ಶಿಕ್ಷೆಯ ಅವಧಿ ಪೂರ್ಣಗೊಳಿಸಿ ಅಥವಾ ಆರೋಪ ಸಾಬೀತಾಗದೆ ಜೈಲಿನಿಂದ ಹೊರ ಬಂದ ನಂತರ ಬದುಕು ಕಟ್ಟಿಕೊಳ್ಳಲು ಹಣದ ಅಗತ್ಯವಿರುತ್ತದೆ. ಆರ್ಥಿಕವಾಗಿ ಸ್ವಾವಲಂಬಿಯಾಗದೆ ಇದ್ದರೆ ಮತ್ತೆ ಕಳ್ಳತನ, ಸುಲಿಗೆ ಮಾಡುತ್ತಾರೆ. ಇದರಿಂದ ಅವರನ್ನು ಹೊರ ತರಬೇಕಾದರೆ ಯಾವುದಾದರೂ ಉದ್ಯೋಗದಲ್ಲಿ ತೊಡಗುವಂತಾಗಬೇಕು ಎಂಬ ಉದ್ದೇಶದಿಂದ ಕೌಶಲ ತರಬೇತಿ ನೀಡಲಾಗುತ್ತಿದೆ ಎಂದು ಕಾರಾಗೃಹ ಮತ್ತು ಸುಧಾರಣಾ ಸೇವೆಗಳ ಇಲಾಖೆಯ ಡಿಜಿಪಿ ಅಲೋಕ್‌ಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದರು.

'ಕೈದಿಗಳಿಗೆ ಡಿಜಿಟಲ್ ಮತ್ತು ವೃತ್ತಿಪರ ಕೌಶಲಗಳನ್ನು ಕಲಿಸುವ ಮೂಲಕ ಸಮಾಜದಲ್ಲಿ ಉತ್ತಮ ರೀತಿಯಲ್ಲಿ ಜೀವನ ಕಟ್ಟಿಕೊಳ್ಳಲು ನೆರವಾಗುವುದು ಈ ಯೋಜನೆಯ ಉದ್ದೇಶವಾಗಿದೆ. ತೆಲಂಗಾಣ, ತಮಿಳುನಾಡು ಸೇರಿದಂತೆ ಬೇರೆ ರಾಜ್ಯಗಳಿಗೆ ಹೋಲಿಸಿದರೆ ಉತ್ಪಾದನೆ ಮತ್ತು ತರಬೇತಿಯಲ್ಲಿ ನಾವು ಹಿಂದೆ ಇದ್ದೇವೆ. ಇದನ್ನು ಮನಗಂಡು ಆರ್.ವಿ. ಕಾಲೇಜಿನವರು ಸ್ವಯಂ ಪ್ರೇರಣೆಯಿಂದ ಕೌಶಲ ತರಬೇತಿ ನೀಡಲು ಮುಂದೆ ಬಂದಿದ್ದಾರೆ' ಎಂದರು.

ಕೇಂದ್ರ ಕಾರಾಗೃಹದಲ್ಲಿನ ಕಂಪ್ಯೂಟರ್ ಲ್ಯಾಬ್ (ಎಡಚಿತ್ರ). ಅಲೋಕ್ ಕುಮಾರ್ ಮತ್ತು ಸುಬ್ರಹ್ಮಣ್ಯ ಅವರು ಒಪ್ಪಂದ ಪತ್ರವನ್ನು ಪ್ರದರ್ಶಿಸಿದರು

10ನೇ ತರಗತಿ ಉತ್ತೀರ್ಣ: ತರಬೇತಿ ಪಡೆಯಲು ಕನಿಷ್ಠ 10ನೇ ತರಗತಿ ಪಾಸಾಗಿರಬೇಕು. ಕಂಪ್ಯೂಟರ್ ಬಗ್ಗೆ ಏನೂ ಗೊತ್ತಿಲ್ಲದೆ ಇದ್ದರೆ ತರಬೇತಿ ನೀಡಿದರೂ ಪ್ರಯೋಜನವಾಗುವುದಿಲ್ಲ. ಹೀಗಾಗಿ ಸ್ವಲ್ಪಮಟ್ಟಿಗೆ ಅರಿವು ಇರುವ ಹಾಗೂ ಒಂದು ವರ್ಷದಲ್ಲಿ ಜೈಲಿನಿಂದ ಹೊರಗೆ ಹೋಗುವವರನ್ನು ಗುರುತಿಸಿ, ಕೌಶಲ ತರಬೇತಿ ನೀಡಲು ತೀರ್ಮಾನಿಸಲಾಗಿದೆ ಎಂದು ವಿವರಿಸಿದರು.

ಮೊದಲಿಗೆ ಕೇಂದ್ರ ಕಾರಾಗೃಹದಲ್ಲಿ ಈ ಯೋಜನೆಯನ್ನು ಪ್ರಾರಂಭಿಸಿದ್ದು, ಮುಂದಿನ ದಿನಗಳಲ್ಲಿ ರಾಜ್ಯದಲ್ಲಿನ ಬೇರೆ ಕಾರಾಗೃಹಗಳಿಗೂ ಇದನ್ನು ವಿಸ್ತರಿಸಲಾಗುವುದು. ಕೇಂದ್ರ ಕಾರಾಗೃಹದಲ್ಲಿ ಸುಮಾರು 3,500 ಮಂದಿ ವಿಚಾರಣಾಧೀನ ಕೈದಿಗಳಿದ್ದಾರೆ. ಇವರೂ ಸೇರಿದಂತೆ ಶಿಕ್ಷೆ ಅನುಭವಿಸಿ ಹೊರ ಹೋಗುವ ಕೈದಿಗಳನ್ನು ತಂಡಗಳನ್ನಾಗಿ ಮಾಡಿ, ತರಬೇತಿ ನೀಡಲಾಗುತ್ತದೆ.

'ಜೈಲಿನಿಂದ ಹೊರಬರುವ ಪ್ರತಿಯೊಬ್ಬರಿಗೂ ಗೌರವಯುತವಾದ ಜೀವನವನ್ನು ಮತ್ತೆ ರೂಪಿಸಿಕೊಳ್ಳಲು ಅವಕಾಶ ಸಿಗಬೇಕು. ಸಮಾಜದಲ್ಲಿ ಎದುರಾಗುವ ಸವಾಲುಗಳನ್ನು ಎದುರಿಸಿ ಬದುಕಬಲ್ಲೆವು ಎಂಬ ನಂಬಿಕೆ, ಆತ್ಮವಿಶ್ವಾಸವನ್ನು ಅವರಲ್ಲಿ ಮೂಡಿಸುವ ಅಗತ್ಯವಿದೆ. ಇದನ್ನು ಮನಗಂಡು ನಮ್ಮ ಸಂಸ್ಥೆ ವತಿಯಿಂದ ತರಬೇತಿ ನೀಡಲು ಮುಂದಾಗಿದ್ದೇವೆ' ಎಂದು ಆರ್.ವಿ. ಎಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲ ಕೆ.ಎನ್. ಸುಬ್ರಹ್ಮಣ್ಯ ತಿಳಿಸಿದರು.

ಹಿಂದಿನ ತಪ್ಪುಗಳನ್ನು ತಿದ್ದಿಕೊಂಡು, ಜೀವನದಲ್ಲಿ ಎರಡನೇ ಅವಕಾಶದ ಹುಡುಕಾಟದಲ್ಲಿರುವ ವ್ಯಕ್ತಿಗಳಿಗೆ ಸಹಕಾರದ ಅಗತ್ಯವಿರುತ್ತದೆ. ಅವರನ್ನು ಗೌರವದಿಂದ ಕಾಣುವ ಮೂಲಕ ಬದುಕು ರೂಪಿಸಿಕೊಳ್ಳಲು ಅವಕಾಶಗಳನ್ನು ಸೃಷ್ಟಿಸಿಕೊಡಬೇಕು. ಇದರಿಂದ ಅವರ ಜೀವನದಲ್ಲಿ ಸುಧಾರಣೆಯಾಗಲಿದೆ ಎಂದು ಅವರು ಅಭಿಪ್ರಾಯಪಟ್ಟರು.

ಬಯಲು ಕಾರಾಗೃಹದಲ್ಲೂ ತರಬೇತಿ

ದೇವನಹಳ್ಳಿಯ ಬಯಲು ಕಾರಾಗೃಹದಲ್ಲಿ ಸುಮಾರು 70 ಎಕರೆ ಜಾಗವಿದೆ. ಅಲ್ಲಿ ಕೈದಿಗಳಿಗೆ ವೈಜ್ಞಾನಿಕವಾಗಿ ಕೃಷಿ, ಮೀನು ಸಾಕಾಣಿಕೆ ಬಗ್ಗೆ ತರಬೇತಿ ನೀಡಲಾಗುವುದು. ಇದರಿಂದಾಗಿ ಅವರು ಮಾನಸಿಕವಾಗಿ ಮತ್ತು ದೈಹಿಕವಾಗಿ ಸದೃಢವಾಗಿ ಇರಲು ಅನುಕೂಲವಾಗಲಿದೆ ಎಂದು ಅಲೋಕ್ ಕುಮಾರ್ ತಿಳಿಸಿದರು.

ಕೆರೆ ಕೋಡಿಯಲ್ಲಿ ಆಟ: ಬಾಲಕ ನೀರುಪಾಲು

ಆವಲಹಳ್ಳಿ ಸಮೀಪ ಘಟನೆ: ಎರಡು ದಿನಗಳಿಂದ ಅಗ್ನಿಶಾಮಕ ದಳದ ಸಿಬ್ಬಂದಿ ಕಾರ್ಯಾಚರಣೆ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಆವಲಹಳ್ಳಿ ಸಮೀಪವಿರುವ ಎಲೆ ಮಲ್ಲಪ್ಪಶೆಟ್ಟಿ ಕೆರೆ ಕೋಡಿಯಲ್ಲಿ ಗೆಳೆಯರೊಂದಿಗೆ ಆಟವಾಡಲು ತೆರಳಿದ್ದ ಬಾಲಕ ನೀರಿನಲ್ಲಿ ಕೊಚ್ಚಿಕೊಂಡು ಹೋಗಿದ್ದಾನೆ.

ಎರಡು ದಿನಗಳಿಂದ ಅಗ್ನಿಶಾಮಕ ದಳದ ಸಿಬ್ಬಂದಿ ಕಾರ್ಯಾಚರಣೆ ನಡೆಸುತ್ತಿದ್ದರೂ, ಮೃತ ದೇಹ ಪತ್ತೆಯಾಗಿಲ್ಲ. ಉತ್ತರ ಪ್ರದೇಶದ ಹೃತಿಕ್ (16) ಆವಲಹಳ್ಳಿಯಲ್ಲಿ ತಂದೆ ತಾಯಿಯೊಂದಿಗೆ ವಾಸವಾಗಿದ್ದ.

ಹೃತಿಕ್

'ಊರಿನಿಂದ ಶನಿವಾರ ಬಂದಿದ್ದ ಹೃತಿಕ್, ಆ ದಿನವೇ ಸ್ನೇಹಿತರೊಂದಿಗೆ ಕೆರೆ ಕೋಡಿಯಲ್ಲಿ ಆಟವಾಡಲು ಹೋಗಿದ್ದಾನೆ. ಈ ವೇಳೆ ರಭಸವಾಗಿ ಹರಿಯುತ್ತಿರುವ ಕೊಳಚೆ ನೀರಿನಲ್ಲಿ ಜಾರಿ ಬಿದ್ದು ಕೊಚ್ಚಿಕೊಂಡು ಹೋಗಿದ್ದಾನೆ. ನೊರೆ ಹೆಚ್ಚಾಗಿರುವುದರಿಂದ ಹೊರ ಬರಲಾಗದೆ ಅಸುನೀಗಿದ್ದಾನೆ' ಎಂದು ಹೇಳಲಾಗಿದೆ.

ಮೊದಲಿಗೆ ಕಾಣೆಯಾಗಿರುವ ಬಗ್ಗೆ ಶಂಕಿಸಿ ಆವಲಹಳ್ಳಿ ಪೊಲೀಸರಿಗೆ ಪೋಷಕರು ದೂರು ನೀಡಿದ್ದಾರೆ. ಬಳಿಕ ಆಟ ವಾಡಲು ತೆರಳಿದ್ದ ಗೆಳೆಯರನ್ನು ವಿಚಾರಿಸಿದಾಗ ಕೊಚ್ಚಿ ಹೋಗಿರುವ ಮಾಹಿತಿ ನೀಡಿದ್ದಾರೆ.

ಬಾಲಕ ಜಾರಿ ಬಿದ್ದ ಜಾಗದಲ್ಲಿ ರಭಸವಾಗಿ ಹರಿಯುತ್ತಿರುವ ಕೊಳಚೆ ನೀರು ಹೆಚ್ಚಿದ್ದರಿಂದ ಕಾರ್ಯಾ ಚರಣೆಗೆ ಅಡ್ಡಿ ಉಂಟು ಮಾಡಿದೆ.

'ಸುಮಾರು 300 ಎಕರೆ ವಿಸ್ತೀರ್ಣದ ಎಲೆಮಲ್ಲಪ್ಪ ಶೆಟ್ಟಿ ಕೆರೆಗೆ ನಗರದ ಕೊಳಚೆ ನೀರು ಸೇರಿ ಕಲುಷಿತಗೊಂಡಿದೆ. ಕೆರೆ ಕೋಡಿಯಲ್ಲಿ ಸಾರ್ವಜನಿಕರು ಪ್ರವೇಶಿಸದಂತೆ ತಡೆಗೋಡೆಯಿಲ್ಲ. ಈ ಪ್ರದೇಶ ಅನೈತಿಕ ಚಟುವಟಿಕೆಗೆ ತಾಣವಾಗಿದೆ. ಸಣ್ಣ ನೀರಾವರಿ ಇಲಾಖೆ ಕೆರೆ ಅಭಿವೃದ್ಧಿಗೆ ಕ್ರಮಕೈಗೊಂಡಿಲ್ಲ' ಎಂದು ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಕೃಷ್ಣ ದೂರಿದರು.

ಅಗ್ನಿಶಾಮಕ ದಳದ ಸಿಬ್ಬಂದಿ ಮಗುವಿನ ಶೋಧಕ್ಕೆ ಕಾರ್ಯಾಚರಣೆ ನಡೆಸಿದರು

ದೀಪಕ್ ಕೇಬಲ್ಸ್ ಕಂಪನಿ ಮೇಲೆ ಇ.ಡಿ ದಾಳಿ
ಚಿನ್ನ, ₹1.27 ಕೋಟಿ ನಗದು ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅಡಿ ದೀಪಕ್ ಕೇಬಲ್ಸ್ (ಇಂಡಿಯಾ) ಲಿಮಿಟೆಡ್ ಹಾಗೂ ಅದರ ನಿರ್ದೇಶಕರ ಮನೆಗಳ ಮೇಲೆ ದಾಳಿ ನಡೆಸಿದ್ದ ಜಾರಿ ನಿರ್ದೇಶನಾಲಯ(ಇ.ಡಿ) ಚಿನ್ನಾಭರಣ, ₹1.27 ಕೋಟಿ ನಗದು ಹಾಗೂ ₹18 ಕೋಟಿ ಠೇವಣಿಯ ಬ್ಯಾಂಕ್ ಖಾತೆಗಳನ್ನು ಜಪ್ತಿ ಮಾಡಿದ್ದಾರೆ.

ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಹಾಗೂ ಅದರ ಸಹವರ್ತಿ ಬ್ಯಾಂಕ್‌ಗಳಿಂದ ಪಡೆದಿದ್ದ ₹899.35 ಕೋಟಿ ಸಾಲದ ಹಣವನ್ನು ದುರ್ಬಳಕೆ ಮಾಡಿಕೊಂಡಿರುವ ಆರೋಪವನ್ನು ಬೆಂಗಳೂರು ಮೂಲದ ದೀಪಕ್ ಕೇಬಲ್ಸ್ ಲಿಮಿಟೆಡ್ ಎದುರಿಸುತ್ತಿದೆ. ಸಾಲದ ಹಣವನ್ನು ಅಕ್ರಮವಾಗಿ ವರ್ಗಾವಣೆ ಮಾಡಿ ಬೇರೆ ಉದ್ದೇಶಕ್ಕೆ ಬಳಸಿದ ಆರೋಪಕ್ಕೆ ಸಂಬಂಧಿಸಿ ಕಂಪನಿ ಹಾಗೂ ಅದರ ನಿರ್ದೇಶಕರ ವಿರುದ್ಧ ಸಿಬಿಐ ಪ್ರಕರಣ ದಾಖಲಿಸಿತ್ತು.

ಈ ಸಂಬಂಧ ಪಿಎಂಎಲ್‌ಎ ತನಿಖೆ ನಡೆಸುತ್ತಿರುವ ಇ.ಡಿ, ದೀಪಕ್ ಕೇಬಲ್ಸ್ ಲಿಮಿಟೆಡ್‌ನ ಕಚೇರಿ, ಕಂಪನಿಯ ನಿರ್ದೇಶಕ ಕೆ.ವೆಂಕಟೇಶ್ವರರಾವ್, ಆಧುನಿಕ್ ಕಾರ್ಪೋರೇಷನ್ ಲಿಮಿಟೆಡ್‌ನ ನಿರ್ದೇಶಕ ಮಹೇಶ್ ಅಗರ್‌ವಾಲ್ ಅವರ ಮನೆ ಮೇಲೆ ಮೇ 21ರಂದು ದಾಳಿ ನಡೆಸಿತ್ತು. ಬಳಿಕ ಮೇ 29 ರವರೆಗೆ ಶೋಧ ಕಾರ್ಯಾಚರಣೆ ನಡೆಸಿದ್ದ ಅಧಿಕಾರಿಗಳು, ಹಣಕಾಸು ವಹಿವಾಟಿಗೆ ಸಂಬಂಧಿಸಿದಂತೆ ದಾಖಲೆ ಪತ್ರಗಳನ್ನು ವಶಪಡಿಸಿಕೊಂಡಿದ್ದರು.

ಕಂಪನಿಯ ಆದಾಯ ಮತ್ತು ವಹಿವಾಟಿನ ಸಂಬಂಧ ಸುಳ್ಳು ಮಾಹಿತಿ ಕೊಟ್ಟು, ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಿ ಎಸ್‌ಬಿಐ ಮತ್ತು ಅದರ ಸಹವರ್ತಿ ಬ್ಯಾಂಕ್‌ಗಳಿಂದ ಕೋಟ್ಯಂತರ ರೂಪಾಯಿ ಸಾಲ ಪಡೆದು ವಂಚಿಸಿರುವ ಆರೋಪವಿದೆ.

ಬೈಕ್ ಡಿಕ್ಕಿ: ಮಷಿನ್ ಆಪರೇಟರ್ ಸಾವು

ಬೆಂಗಳೂರು: ಮಾದನಾಯಕನಹಳ್ಳಿ ಬಳಿಯ ಲಕ್ಷ್ಮೀಪುರ ಮುಖ್ಯ ರಸ್ತೆಯಲ್ಲಿ ಭಾನುವಾರ ರಾತ್ರಿ ಬೈಕ್ ಮತ್ತು ದ್ವಿಚಕ್ರ ವಾಹನದ ನಡುವೆ ಸಂಭವಿಸಿದ ಅಪಘಾತದಲ್ಲಿ ಮನೋಜ್ (21) ಎಂಬುವರು ಮೃತಪಟ್ಟಿದ್ದಾರೆ.

ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕಿನ ಮನೋಜ್, ಅಡಕಮಾರನಹಳ್ಳಿಯ ಬಾಡಿಗೆ ಮನೆಯಲ್ಲಿ ವಾಸವಾಗಿದ್ದರು. ಖಾಸಗಿ ಕಾರ್ಖಾನೆಯಲ್ಲಿ ಮಷಿನ್ ಆಪರೇಟರ್ ಆಗಿದ್ದ ಅವರು ಲಕ್ಷ್ಮೀಪುರದಲ್ಲಿನ ಸ್ನೇಹಿತನ ಮನೆಗೆ ಊಟಕ್ಕೆ ಹೋಗುತ್ತಿದ್ದಾಗ ಅಪಘಾತ ಸಂಭವಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮನೋಜ್ ಅವರ ದ್ವಿಚಕ್ರ ವಾಹನಕ್ಕೆ ಎದುರುಗಡೆಯಿಂದ ಬೈಕ್ ಡಿಕ್ಕಿ ಹೊಡೆದಿದೆ. ಪರಿಣಾಮ ತಲೆಗೆ ತೀವ್ರ ಪೆಟ್ಟಾಗಿ ಅಸ್ವಸ್ಥಗೊಂಡ ಅವರನ್ನು ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗ ಮಧ್ಯೆ ಮೃತಪಟ್ಟರು. ಅವರು ಹೆಲ್ಮೆಟ್ ಧರಿಸಿರಲಿಲ್ಲ. ಬೈಕ್‌ನಲ್ಲಿದ್ದ ಇಬ್ಬರು ಸವಾರರು ತೀವ್ರವಾಗಿ ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ. ಚಿಕ್ಕಬಾಣಾವರ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಪರಾಧ ಸುದ್ದಿ

ಕಾಂಡಿಮೆಂಟ್ಸ್ ಮಾಲೀಕನ ಮೇಲೆ ಹಲ್ಲೆ

ಬೆಂಗಳೂರು: ಟೀ ಮತ್ತು ಸಿಗರೇಟ್ ತೆಗೆದುಕೊಂಡಿದ್ದಕ್ಕೆ ಹಣ ಕೇಳಿದ ಕಾಂಡಿಮೆಂಟ್ಸ್ ಮಾಲೀಕನ ಮೇಲೆ ಹಲ್ಲೆ ನಡೆಸಿರುವ ಘಟನೆ ಬ್ಯಾಟರಾಯನ ಪುರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಸೋಮವಾರ ಬೆಳಗಿನ ಜಾವ ಬಿಎಚ್‌ಇಎಲ್ ಎದುರುಗಡೆ ಇರುವ ಕಾಂಡಿಮೆಂಟ್ಸ್‌ವೊಂದರಲ್ಲಿ ಆರೋಪಿಗಳು ಟೀ ಮತ್ತು ಸಿಗರೇಟ್ ತೆಗೆದುಕೊಂಡಿದ್ದಾರೆ. ಅಂಗಡಿ ಮಾಲೀಕ ಪ್ರದೀಪ್ ಅವರು ಹಣ ನೀಡುವಂತೆ ಕೇಳುತ್ತಿದಂತೆ ಅವರ ಮೇಲೆ ಹಲ್ಲೆ ನಡೆಸಿ, ಬಾಟಲಿಗಳನ್ನು ಒಡೆದು ಹಾಕಿ ಗಲಾಟೆ ಮಾಡಿದ್ದಾರೆ.

ಪೊಲೀಸರಿಗೆ ದೂರು ನೀಡದಂತೆ ಜೀವ ಬೆದರಿಕೆ ಹಾಕಿದ್ದಾರೆ ಎನ್ನಲಾಗಿದೆ. ಹಲ್ಲೆಯ ದೃಶ್ಯ ಸಿ.ಸಿ.ಟಿ.ವಿ. ಕ್ಯಾಮೆರಾದಲ್ಲಿ ಸೆರೆಯಾಗಿದೆ. ಈ ಸಂಬಂಧ ಇಬ್ಬರನ್ನು ವಶಕ್ಕೆ ಪಡೆದಿರುವ ಪೊಲೀಸರು ವಿಚಾರಣೆ ನಡೆಸುತ್ತಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮದ್ಯಸೇವಿಸಿ ವಾಹನ ಚಾಲನೆ: 699 ಮಂದಿ ವಿರುದ್ಧ ಪ್ರಕರಣ

ಬೆಂಗಳೂರು: ನಗರದಲ್ಲಿ ಪಾನಮತ್ತರಾಗಿ ವಾಹನ ಚಲಾಯಿಸುವ ಚಾಲಕರ ಪತ್ತೆಗೆ ವಿಶೇಷ ಕಾರ್ಯಾಚರಣೆ ನಡೆಸಿರುವ ಪೊಲೀಸರು ವಾರದಲ್ಲಿ 699 ಮಂದಿ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ಮದ್ಯ ಸೇವಿಸಿ ವಾಹನ ಚಾಲನೆ ಮಾಡಿ ಅಪಘಾತಕ್ಕೆ ಕಾರಣರಾಗುತ್ತಿರುವ ಸಂಬಂಧ ವ್ಯಾಪಕ ದೂರುಗಳು ಕೇಳಿಬಂದಿದ್ದವು. ಮತ್ತೊಂದೆಡೆ ಪಾನಮತ್ತ ಚಾಲಕರು ಹಾಗೂ ವಾಹನ ಸವಾರರಿಂದ ಇತರೆ ವಾಹನ ಸವಾರರಿಗೆ ಸಮಸ್ಯೆಯಾಗುತ್ತಿತ್ತು. ಹೀಗಾಗಿ, ಪೊಲೀಸರು 53 ಸಂಚಾರ ಠಾಣೆಗಳ ವ್ಯಾಪ್ತಿಯಲ್ಲಿ ಮೇ 25 ರಿಂದ 31ರವರೆಗೆ ವಿಶೇಷ ಕಾರ್ಯಾಚರಣೆ ನಡೆಸಿ, ಪಾನಮತ್ತ ಚಾಲಕರನ್ನು ಪತ್ತೆಹಚ್ಚಿ ಕಾನೂನು ಕ್ರಮ ಕೈಗೊಂಡಿದ್ದಾರೆ.

ಪೊಲೀಸರು ವಿವಿಧ ಮಾದರಿಯ 41,033 ವಾಹನಗಳನ್ನು ತಡೆದು ಚಾಲಕರನ್ನು ಆಲ್ಕೋಮೀಟರ್ ಮೂಲಕ ತಪಾಸಣೆ ಮಾಡಿದ್ದಾರೆ. ಈ ವೇಳೆ 699 ಮಂದಿ ಮದ್ಯ ಸೇವಿಸಿ ವಾಹನ ಚಾಲನೆ ಮಾಡುತ್ತಿರುವುದು ದೃಢಪಟ್ಟಿದ್ದು, ಇವರ ವಿರುದ್ಧ ಪಾನಮತ್ತ ಚಾಲನೆ ಆರೋಪದಡಿ ಪ್ರಕರಣ ದಾಖಲಿಸಿದ್ದಾರೆ.

ಜತೆಗೆ, ಅಜಾಗರೂಕತೆಯಿಂದ ಅತಿ ವೇಗವಾಗಿ ವಾಹನ ಚಾಲನೆ ಮಾಡುತ್ತಿದ್ದ 155 ಮಂದಿ ವಿರುದ್ಧ ದೂರು ದಾಖಲಿಸಿದ್ದಾರೆ. ಅತಿ ವೇಗ ಹಾಗೂ ಪಾನಮತ್ತ ಚಾಲನೆ ಸಂಬಂಧ ಒಟ್ಟಾರೆ ₹1.56 ಲಕ್ಷ ದಂಡ ವಿಧಿಸಿದ್ದಾರೆ.

ನಗರದಲ್ಲಿ ಪಾನಮತ್ತ ಚಾಲನೆ ಮತ್ತು ಅತಿ ವೇಗದಲ್ಲಿ ವಾಹನ ಚಾಲನೆ ಮಾಡುವುದನ್ನು ತಡೆಯಲು, ರಸ್ತೆ ಸುರಕ್ಷತೆಗಾಗಿ ವಿಶೇಷ ಕಾರ್ಯಾಚರಣೆ ಮುಂದುವರಿಸಲಾಗುತ್ತದೆ ಎಂದು ಹಿರಿಯ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಲೋಕಾಯುಕ್ತ ಬಲೆಗೆ ಪಬ್ಲಿಕ್ ಪ್ರಾಸಿಕ್ಯೂಟರ್

ಬೆಂಗಳೂರು: ಪ್ರಕರಣವೊಂದರಲ್ಲಿ ಜಾಮೀನಿಗೆ ಆಕ್ಷೇಪಣೆ ಅರ್ಜಿ ಸಲ್ಲಿಸಲು ದೂರುದಾರರಿಂದ ₹5 ಸಾವಿರ ಲಂಚ ಪಡೆಯುತ್ತಿದ್ದ ವೇಳೆ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿ, ಮಹಿಳಾ ಪಬ್ಲಿಕ್ ಪ್ರಾಸಿಕ್ಯೂಟರ್ ಅವರನ್ನು ಬಂಧಿಸಿದ್ದಾರೆ.

ನಗರದ ಸಿಟಿ ಸಿವಿಲ್ ಮತ್ತು ಸೆಷನ್ಸ್ (ಸಿಸಿಎಚ್ 54) ಕೋರ್ಟ್‌ನ ಮಹಿಳಾ ಸರ್ಕಾರಿ ಅಭಿಯೋಜಕಿ ಸವಿತಾ ನವೀನ್ ಪಾಟೀಲ್ (55) ಬಂಧಿತರು. ಬನಶಂಕರಿ ನಿವಾಸಿ ಮಂಜುನಾಥ್ ಎಂಬುವವರು ನೀಡಿದ ದೂರಿನ ಮೇರೆಗೆ ಲೋಕಾಯುಕ್ತ ಎಸ್.ಪಿ. ಶಿವಪ್ರಕಾಶ್ ದೇವರಾಜ್ ಅವರ ಮಾರ್ಗದರ್ಶನದಲ್ಲಿ ಲೋಕಾಯುಕ್ತ ಪೊಲೀಸರು ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಹಣದ ಸಮೇತ ಬಂಧಿಸಿ, ಹೆಚ್ಚಿನ ವಿಚಾರಣೆ ನಡೆಸಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಚೆನ್ನಮ್ಮನಕೆರೆ ಅಚ್ಚುಕಟ್ಟು ಪೊಲೀಸ್ ಠಾಣೆಯಲ್ಲಿ ಯುವತಿಯೊಬ್ಬಳ ಮೇಲೆ ಲೈಂಗಿಕ ದೌರ್ಜನ್ಯ ಪ್ರಕರಣ ದಾಖಲಾಗಿತ್ತು. ಈ ಪ್ರಕರಣ ಸಂಬಂಧ ದೂರುದಾರರ ಪರ ನ್ಯಾಯಾಲಯದಲ್ಲಿ ಆಕ್ಷೇಪಣೆ ಸಲ್ಲಿಸಲು ಪಬ್ಲಿಕ್ ಪ್ರಾಸಿಕ್ಯೂಟರ್ ಲಂಚಕ್ಕೆ ಬೇಡಿಕೆ ಇರಿಸಿದ್ದರು. ಟೈಪಿಂಗ್ ಸೇರಿದಂತೆ ಇತರೆ ಖರ್ಚಿಗಾಗಿ ₹5 ಸಾವಿರ ನೀಡುವಂತೆ ಬೇಡಿಕೆಯಿಟ್ಟಿದ್ದರು. ಈ ಸಂಬಂಧ ಸಂತ್ರಸ್ತೆ ಪರವಾಗಿ ಮಂಜುನಾಥ್ ಎಂಬುವರು ದೂರು ನೀಡಿದ್ದರು.

ಕೆಳ ಸೇತುವೆ ಕಾಮಗಾರಿ ಸಂಚಾರ ಮಾರ್ಗ ಬದಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆ.ಆರ್.ಪುರ ಬಳಿಯ ಲೋರಿ ಕೆಳ ಸೇತುವೆಯ ಚಪ್ಪಡಿ (ಸ್ಲ್ಯಾಬ್) ಬದಲಿಸುವ ಕಾಮಗಾರಿ ಕೈಗೊಳ್ಳುತ್ತಿರುವುದರಿಂದ ಜೂನ್ 4ರಿಂದ 9ರವರೆಗೆ ಕೆಳ ಸೇತುವೆಯಲ್ಲಿ ವಾಹನ ಸಂಚಾರವನ್ನು ತಾತ್ಕಾಲಿಕವಾಗಿ ನಿರ್ಬಂಧಿಸಲಾಗಿದೆ.

ಕೃಷ್ಣರಾಜಪುರ, ರಾಮಮೂರ್ತಿ ನಗರ, ಐಟಿಐ ಕಾಲೊನಿ ಕಡೆಗೆ ಸಾಗುವ ರಸ್ತೆ ತಾತ್ಕಾಲಿಕವಾಗಿ ಬಂದ್ ಆಗಲಿದೆ. ಈ ಅವಧಿಯಲ್ಲಿ ಐಟಿಐ ಕಾಲೊನಿ, ರಾಮಮೂರ್ತಿ ನಗರ ಮತ್ತು ಕೃಷ್ಣರಾಜಪುರ ತಲುಪಲು ಕೆ.ಆರ್. ಪುರ ಕೇಬಲ್-ಸ್ಟೇಯ್ಡ್ ಸೇತುವೆಯನ್ನು ಬಳಸಲು ರಸ್ತೆ ಬಳಕೆದಾರರಿಗೆ ಸೂಚಿಸಲಾಗಿದೆ.

ಐಟಿಪಿಎಲ್, ವೈಟ್‌ಫೀಲ್ಡ್ ಕಡೆಗೆ ಹೋಗುವ ರಸ್ತೆಯ ಸಂಚಾರವೂ ಸ್ಥಗಿತಗೊಳ್ಳುವುದರಿಂದ ಆ ಕಡೆಗೆ ಸಾಗುವವರು ಕೆ.ಆರ್. ಪುರ ಕೇಬಲ್-ಸ್ಟೇಯ್ಡ್ ಸೇತುವೆಯನ್ನು ಬಳಸಬಹುದು. ಕೆ.ಆರ್. ಪುರ-ಐಟಿಪಿಎಲ್ ಮುಖ್ಯ ರಸ್ತೆಯನ್ನು ಜೂನ್ 7 ಮತ್ತು 8ರಂದು ಬಂದ್ ಮಾಡಲಾಗುವುದು. ರಸ್ತೆ ಕೆಳ ಸೇತುವೆಯ ಬಳಿ ಒದಗಿಸಲಾದ ಬದಲಿ ಮಾರ್ಗವನ್ನು ಬಳಸಿ ಸಂಚರಿಸಬೇಕು ಎಂದು ನೈರುತ್ಯ ರೈಲ್ವೆ ಬೆಂಗಳೂರು ವಿಭಾಗದ ಅಧಿಕಾರಿಗಳು ತಿಳಿಸಿದ್ದಾರೆ.

ಪೇಯಿಂಗ್ ಗೆಸ್ಟ್‌ಗೆ ನುಗ್ಗಿ 8 ಮೊಬೈಲ್ ಕಳವು

ಬೆಂಗಳೂರು: ಪುರುಷರ ಪೇಯಿಂಗ್ ಗೆಸ್ಟ್‌ಗೆ (ಪಿ.ಜಿ) ನುಗ್ಗಿದ ಕಳ್ಳರು ಕೋಣೆಗಳಲ್ಲಿ ಚಾರ್ಜಿಂಗ್‌ಗೆ ಹಾಕಿದ್ದ 8 ದುಬಾರಿ ಮೌಲ್ಯದ ಮೊಬೈಲ್‌ಗಳನ್ನು ಕಳ್ಳತನ ಮಾಡಿಕೊಂಡು ಪರಾರಿಯಾಗಿರುವ ಘಟನೆ ಬಂಡೆಪಾಳ್ಯ ಪೊಲೀಸ್ ಠಾಣೆ ವ್ಯಾಪ್ತಿಯ ಹೊಸ ಪಾಳ್ಯದ ಕೂಡ್ಲು ಮುಖ್ಯರಸ್ತೆಯಲ್ಲಿ ನಡೆದಿದೆ.

ಪಿ.ಜಿಯಲ್ಲಿ ವಿದ್ಯಾರ್ಥಿಗಳು, ಉದ್ಯೋಗಿಗಳು ಹಾಗೂ ಕ್ಯಾಬ್ ಚಾಲಕರು ವಾಸವಾಗಿದ್ದಾರೆ. ಮೇ 26ರಂದು ಕ್ಯಾಬ್ ಚಾಲಕ ದರ್ಶನ್ ಎಂಬುವರು ಕೆಲಸ ಮುಗಿಸಿಕೊಂಡು ಬಂದು ತಮ್ಮ ಕೋಣೆಯಲ್ಲಿ ಎರಡು ಮೊಬೈಲ್‌ಗಳನ್ನು ಚಾರ್ಜಿಂಗ್‌ಗೆ ಹಾಕಿ ಬಾಗಿಲು ಹಾಕದೇ ಮಲಗಿದ್ದರು. ಮರುದಿನ ಮುಂಜಾನೆ 6 ಗಂಟೆಗೆ ಎದ್ದು ನೋಡಿದಾಗ ಎರಡು ಮೊಬೈಲ್‌ಗಳು ನಾಪತ್ತೆಯಾಗಿದ್ದವು.

ಪಕ್ಕದ ಕೊಠಡಿಗಳಿಗೆ ಹೋಗಿ ವಿಚಾರಿಸಿದಾಗ ಅಲ್ಲಿಯೂ ಸಹ ಮೊಬೈಲ್‌ಗಳು ನಾಪತ್ತೆ ಆಗಿರುವುದು ಕಂಡು ಬಂದಿದೆ. ಕಳ್ಳರು ಒಟ್ಟು ಎಂಟು ಮೊಬೈಲ್‌ಗಳನ್ನು ದೋಚಿ ಪರಾರಿಯಾಗಿದ್ದಾರೆ. ಕೋಣೆಯ ಬಾಗಿಲು ಹಾಕಿಕೊಳ್ಳದೆ ಮಲಗಿದ್ದರಿಂದಲೇ ಮೊಬೈಲ್‌ಗಳ ಕಳ್ಳತನವಾಗಿದೆ. ಕಳ್ಳರು ಮೊಬೈಲ್ ಕದ್ದು ಪರಾರಿಯಾಗುತ್ತಿರುವುದು ಪಿ.ಜಿಯ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಆರೋಪಿಗಳ ಪತ್ತೆ ಕಾರ್ಯ ನಡೆಯುತ್ತಿದೆ ಎಂದು ಪೊಲೀಸರು ಹೇಳಿದರು. ಬಂಡೇಪಾಳ್ಯ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

₹18 ಲಕ್ಷ ಮೌಲ್ಯದ ಕೊಕೇನ್ ಜಪ್ತಿ ಯುವತಿ ಬಂಧನ

ಆನೇಕಲ್: ಅಲಯನ್ಸ್ ವಿಶ್ವವಿದ್ಯಾಲಯ ಬಳಿ ಕೊಕೇನ್ ಮಾರಾಟ ಮಾಡುತ್ತಿದ್ದ ನೈಜೀರಿಯಾ ದೇಶದ ಮಹಿಳೆಯನ್ನು ಶನಿವಾರ ಆನೇಕಲ್ ಪೊಲೀಸರು ಬಂಧಿಸಿ, ₹18 ಲಕ್ಷ ಮೌಲ್ಯದ 180 ಗ್ರಾಂ ಕೊಕೇನ್ ಜಪ್ತಿ ಮಾಡಿದ್ದಾರೆ.

ನೈಜೀರಿಯಾದ ಬ್ಲೆಸ್ಸಿಂಗ್ ಒಪುಟ (34) ಬಂಧಿತ ಮಹಿಳೆ. ಹೊಸಕೋಟೆ ಸಮೀಪದ ತಿರುಮಶೆಟ್ಟಿಹಳ್ಳಿ ಬಳಿ ವಾಸವಿದ್ದ ಬ್ಲೆಸ್ಸಿಂಗ್ ಒಪುಟ ಕಾಲೇಜು ವಿದ್ಯಾರ್ಥಿಗಳಿಗೆ ಮಾದಕವಸ್ತು ಮಾರಾಟ ಮಾಡುತ್ತಿದ್ದರು. ಅಲಯನ್ಸ್ ವಿಶ್ವವಿದ್ಯಾಲಯ ಬಳಿ ಕೊಕೇನ್ ಮಾರಾಟ ಮಾಡುತ್ತಿದ್ದ ಸಮಯದಲ್ಲಿ ಪೊಲೀಸರು ದಾಳಿ ನಡೆಸಿದ್ದಾರೆ. ಮಹಿಳೆಯ ಹಿಂದೆ ದೊಡ್ಡ ಜಾಲ ಇರುವ ಶಂಕೆ ಇದೆ. ಈ ಬಗ್ಗೆ ನಿಗಾ ಇಡಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ವಿ.ಚಂದ್ರಕಾಂತ್ ತಿಳಿಸಿದ್ದಾರೆ.

ಆರ್‌ಸಿಬಿ ಗೆದ್ದ ನಂತರ ರಸ್ತೆಗಿಳಿದಿದ್ದ ವಾಹನ ಸವಾರರು
ನಿಯಮ ಉಲ್ಲಂಘನೆ: 87 ವಾಹನ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐಪಿಎಲ್ ಫೈನಲ್ ಪಂದ್ಯದಲ್ಲಿ ಆರ್‌ಸಿಬಿ ತಂಡ ಗೆದ್ದ ಬೆನ್ನಲ್ಲೇ ರಸ್ತೆಗಿಳಿದು ನಿಯಮ ಉಲ್ಲಂಘಿಸಿದ ವಾಹನ ಸವಾರರ ವಿರುದ್ಧ ಪ್ರಕರಣ ದಾಖಲಿಸಿ, 87 ವಾಹನಗಳನ್ನು ಜಪ್ತಿ ಮಾಡಿದ್ದಾರೆ.

ಪೊಲೀಸರ ಕಟ್ಟೆಚ್ಚರದ ನಡುವೆಯೂ ವ್ಹೀಲೆ, ತ್ರಿಬಲ್ ರೈಡಿಂಗ್ ಹಾಗೂ ಸಂಚಾರ ನಿಯಮ ಉಲ್ಲಂಘಿಸಿದ 83 ದ್ವಿಚಕ್ರ ವಾಹನ, ಮೂರು ಆಟೊ, ನಾಲ್ಕು ಚಕ್ರದ ಒಂದು ವಾಹನವನ್ನು ಪೊಲೀಸರು ಜಪ್ತಿ ಮಾಡಿದರು.

ಐಪಿಎಲ್ ಫೈನಲ್ ಪಂದ್ಯದ ಹಿನ್ನೆಲೆಯಲ್ಲಿ ಆರ್‌ಸಿಬಿ ಅಭಿಮಾನಿಗಳು ಎಲ್ಲೆಂದರಲ್ಲಿ ಸಂಭ್ರಮಾಚರಣೆ ಮಾಡಬಾರದು. ಪಟಾಕಿ ಸಿಡಿಸುವುದು, ಮೆರವಣಿಗೆ ಸೇರಿದಂತೆ ವಿಜಯೋತ್ಸವದ ಇತರೆ ಚಟುವಟಿಕೆಗಳನ್ನು ನಡೆಸದಂತೆ ಪೊಲೀಸರು ಮುಂಚಿತವಾಗಿ ಮಾರ್ಗಸೂಚಿ ಹೊರಡಿಸಿದ್ದರು.

ಆದರೂ ಯುವಕರ ಪಡೆಯು ಪೊಲೀಸರ ಮಾರ್ಗಸೂಚಿ ಲೆಕ್ಕಿಸದೆ ನಗರದ ವಿವಿಧೆಡೆ ರಸ್ತೆಗಿಳಿದು ಮನಸೋ ಇಚ್ಛೆ ವಾಹನ ಚಲಾಯಿಸುತ್ತಾ ಹುಚ್ಚಾಟ ಮೆರೆಯಿತು. ಕೆಲ ಯುವಕರು ವ್ಹೀಲೆ ಮಾಡುತ್ತಾ ಆರ್‌ಸಿಬಿ ತಂಡದ ಗೆಲುವನ್ನು ಸಂಭ್ರಮಿಸಿದರು.

ಈ ಮಧ್ಯೆ ಪೊಲೀಸರು ಮುನ್ನೆಚ್ಚರಿಕೆ ಕ್ರಮವಾಗಿ ನಗರದೆಲ್ಲೆಡೆ ಆಯಕಟ್ಟಿನ ಸ್ಥಳಗಳಲ್ಲಿ ನಾಕಾಬಂದಿ ಹಾಕಿ ಕಟ್ಟೆಚ್ಚರ ವಹಿಸಿದ್ದರು. 99 ಕಡೆ ನಾಕಾಬಂದಿ ಹಾಕಲಾಗಿತ್ತು. 2,502 ದ್ವಿಚಕ್ರ ವಾಹನಗಳು, 556 ಆಟೊ, 458 ನಾಲ್ಕು ಚಕ್ರದ ವಾಹನಗಳನ್ನು ತಪಾಸಣೆ ಮಾಡಲಾಗಿದೆ.

ಉತ್ತರ ವಿಭಾಗದ 13 ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಪೊಲೀಸರು ವಿಶೇಷ ಕಾರ್ಯಾಚರಣೆ ನಡೆಸಿದರು.

ರಸ್ತೆಗಳಲ್ಲಿ ತಡರಾತ್ರಿ ವ್ಹೀಲೆ ಮಾಡುತ್ತಿದ್ದ 83 ಸವಾರರ ವಿರುದ್ಧ ಪ್ರಕರಣ ದಾಖಲಿಸಿ ಬೈಕ್‌ಗಳನ್ನು ಜಪ್ತಿ ಮಾಡಿದರು. ಅಲ್ಲದೆ, ಅನುಮಾನಾಸ್ಪದವಾಗಿ ಓಡಾಡುತ್ತಿದ್ದ ವಾಹನಗಳನ್ನು ತಡೆದು ತಪಾಸಣೆ ಮಾಡಿ 3 ಆಟೊ ಹಾಗೂ ಕಾರನ್ನು ವಶಕ್ಕೆ ಪಡೆದರು.

ಯಲಹಂಕ ಹಾಗೂ ಜಕ್ಕೂರು ವಾರ್ಡ್‌ಗಳಲ್ಲಿ ಉಂಟಾಗಿರುವ ಸಮಸ್ಯೆ
ಕಾವೇರಿ ಸಂಪರ್ಕಕ್ಕೆ ರಸ್ತೆಗಳು ಹಾಳು

• ಡಿ.ಸುರೇಶ್

ಯಲಹಂಕ: ನಗರ ಪಾಲಿಕೆ ಅಧಿಕಾರಿಗಳ ನಿರ್ಲಕ್ಷ್ಯದಿಂದ ಜನರು ಅನುಮತಿ ಪಡೆಯದೆ ಕಾವೇರಿ ಕುಡಿಯುವ ನೀರು ಸಂಪರ್ಕ ಪಡೆಯಲು ಅಗೆದ ರಸ್ತೆಗಳನ್ನು ದುರಸ್ತಿ ಮಾಡದ್ದರಿಂದ ಸಂಚಾರ ದುಸ್ತರವಾಗಿದೆ.

ಯಲಹಂಕ ಹಾಗೂ ಜಕ್ಕೂರು ವಾರ್ಡ್‌ಗಳಲ್ಲಿ ಕಾವೇರಿ ನೀರಿನ ಸಂಪರ್ಕಕ್ಕಾಗಿ ಹೊಸದಾಗಿ ನಿರ್ಮಿಸಲಾಗಿರುವ ಕಾಂಕ್ರೀಟ್ ರಸ್ತೆಗಳನ್ನೂ ಅಗೆಯಲಾಗುತ್ತಿದೆ. ನಂತರ, ಅದನ್ನು ಸಮರ್ಪಕವಾಗಿ ಮುಚ್ಚದೆ ಸಮಸ್ಯೆ ಉಂಟಾಗುತ್ತಿದೆ. ಇತ್ತೀಚಿನ ಮಳೆಯಿಂದ ಹಲವು ಕಡೆಗಳಲ್ಲಿ ರಸ್ತೆಗಳು ಕುಸಿದು ಗುಂಡಿಗಳಾಗಿವೆ.

'ರಸ್ತೆಯನ್ನು ಅಗೆದು ಸಂಪರ್ಕ ಪಡೆಯುವಾಗ ಇರುವ ಆಸಕ್ತಿ ಮತ್ತು ಕಾಳಜಿ, ಕಾಮಗಾರಿ ಮುಗಿದ ನಂತರ ಇರುವುದಿಲ್ಲ. ಕೇವಲ ಮಣ್ಣುಹಾಕಿ ಬೇಕಾಬಿಟ್ಟಿ ಬಿಡುತ್ತಾರೆ. ಅನಧಿಕೃತ ವಾಗಿ ರಸ್ತೆಗಳನ್ನು ಅಗೆದು ಹಾಳು ಮಾಡುವವರ ವಿರುದ್ಧ ಪಾಲಿಕೆಯಲ್ಲಿ ದಂಡ ವಿಧಿಸಿ, ಕ್ರಮಕೈಗೊಳ್ಳುವ ನಿಯಮಗಳಿದ್ದರೂ ಸಹ ಪರಿಣಾಮಕಾರಿಯಾಗಿ ಜಾರಿಯಾಗದ ಕಾರಣ, ಇಂತಹ ಘಟನೆಗಳು ಮರುಕಳಿಸುತ್ತಿವೆ' ಎಂದು ಸ್ಥಳೀಯರು ಆರೋಪಿಸಿದರು.

ಜಕ್ಕೂರು ವಾರ್ಡ್ ವ್ಯಾಪ್ತಿಯ ಜಕ್ಕೂರು ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರದ ಮುಂಭಾಗದ ಪರಿಶಿಷ್ಟ ಕಾಲೊನಿಯಲ್ಲಿ ನೂತನವಾಗಿ ನಿರ್ಮಿಸಿದ್ದ ಕಾಂಕ್ರೀಟ್ ರಸ್ತೆ, ಸರ್ಕಾರಿ ಪ್ರಾಥಮಿಕ ಶಾಲೆ ಮುಂಭಾಗದ ರಸ್ತೆ ಸೇರಿ ವಿವಿಧ ಬಡಾವಣೆಗಳಲ್ಲಿ ರಸ್ತೆ ಅಗೆದು ಕಾವೇರಿ ನೀರಿನ ಸಂಪರ್ಕ ಪಡೆದು ಸುಮ್ಮನಾಗಿದ್ದಾರೆ. ಅಧಿಕಾರಿಗಳಿಗೆ ದೂರು ಕೊಟ್ಟರೂ ಪ್ರಯೋಜನವಾಗಿಲ್ಲ ಎಂದು ನಾಗರಿಕರು ದೂರಿದರು.

'ರಸ್ತೆಯನ್ನು ಅಗೆದು ಸರಿಯಾಗಿ ದುರಸ್ತಿ ಮಾಡದೆ ಬಿಟ್ಟಿರುವ ವ್ಯಕ್ತಿಗಳಿಗೆ ನೋಟಿಸ್ ನೀಡಿಲ್ಲ. ಹೀಗಾಗಿ, ರಸ್ತೆಗಳನ್ನು ಅಗೆದು ಹಾಳು ಮಾಡುತ್ತಿರುವ ಪ್ರಕರಣಗಳು ಹೆಚ್ಚಾಗುತ್ತಿವೆ' ಎಂದು ಜಕ್ಕೂರು ನಿವಾಸಿ ಹರೀಶ್ ದೂರಿದರು.

ರ‍್ಯಾಂಪ್: 'ಜಕ್ಕೂರು-ಯಲಹಂಕ ಮುಖ್ಯರಸ್ತೆಯ ಕೆ.ವಿ.ಬೈರೇಗೌಡ ಸಮುದಾಯ ಭವನದ ಸಮೀಪದಲ್ಲಿ ನಿರ್ಮಾಣವಾಗಿರುವ ನೂತನ ಅಪಾರ್ಟ್‌ಮೆಂಟ್‌ನ ಪ್ರವೇಶ ದ್ವಾರದಲ್ಲಿ ಪಾದಚಾರಿ ಮಾರ್ಗದಿಂದ ಸುಮಾರು 5 ಅಡಿಗಳಷ್ಟು ಹೆಚ್ಚುವರಿಯಾಗಿ ಮುಖ್ಯರಸ್ತೆಗೆ ರ‍್ಯಾಂಪ್ ನಿರ್ಮಿಸಲಾಗಿದೆ. ಅಧಿಕಾರಿಗಳ ಗಮನಕ್ಕೆ ತಂದಿದ್ದರೂ ಪ್ರಯೋಜನ ವಾಗಿಲ್ಲ' ಎಂದು ಜಕ್ಕೂರಿನ ನಿವಾಸಿ ಕುಮಾರ್ ದೂರಿದರು.

ಯಲಹಂಕ–ಜಕ್ಕೂರು ಮುಖ್ಯರಸ್ತೆಯ ಕೆ.ವಿ.ಬೈರೇಗೌಡ ಸಮುದಾಯ ಭವನದ ಸಮೀಪ ಮುಖ್ಯರಸ್ತೆಯಲ್ಲಿ ರ‍್ಯಾಂಪ್ ನಿರ್ಮಿಸಲಾಗಿದೆ

ಜಕ್ಕೂರು ಪರಿಶಿಷ್ಟ ಕಾಲೊನಿಯಲ್ಲಿ ಕಾಂಕ್ರೀಟ್ ರಸ್ತೆ ಅಗೆದು ದುರಸ್ತಿಗೊಳಿಸಿಲ್ಲ

ಅನುಮತಿ ಪಡೆಯದಿದ್ದರೆ ದಂಡ

'ರಸ್ತೆ ಅಗೆಯಲು ಪಾಲಿಕೆಯ ಅನುಮತಿ ಕಡ್ಡಾಯ. ಅನುಮತಿ ಇಲ್ಲದೆ ರಸ್ತೆ ಅಗೆದು ಹಾಳು ಮಾಡಿರುವ ಹಾಗೂ ಮುಖ್ಯರಸ್ತೆಗೆ ಹೆಚ್ಚುವರಿಯಾಗಿ ರ‍್ಯಾಂಪ್ ಅಳವಡಿಸಿದವರಿಗೆ ನೋಟಿಸ್ ನೀಡಿ, ದಂಡ ವಿಧಿಸಲಾಗುವುದು' ಎಂದು ಉತ್ತರ ನಗರ ಪಾಲಿಕೆ ಜಕ್ಕೂರು ವಿಭಾಗದ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ವರುಣ್ ತಿಳಿಸಿದರು.

ನಗರದಲ್ಲಿ ಇಂದು

ಸ್ಟೋರಿ ಥ್ರೂ ಮೈ ಐಸ್– ಪಾರ್ಟ್ 2, ಅನ್‌ಸ್ಪೋಕನ್ ಮಿಸ್ಟ್ರೆಸ್, ವಿಸ್ಪರ್ಸ್ ಆಫ್ ದ ಸಾಯಿಲ್ ಕೃತಿಗಳ ಬಿಡುಗಡೆ: ಉದ್ಘಾಟನೆ: ಚಿರಂತ್, ಪುಸ್ತಕ ಬಿಡುಗಡೆ: ಡಾ. ಸಿ.ಎನ್. ಮಂಜುನಾಥ್, ಸಂವಾದ: ಪ್ರಕೃತಿ ಬದ್ರಿನಾಥ್, ಆರ್.ಪಿ. ಪದ್ಮಶ್ರೀ, ಎನ್. ರಂಗನಾಥ್, ವೀಣಾ ಕೃಷ್ಣ, ಡೆಬೊಲಿನ ಗುಪ್ತ, ತೇಜಸ್ ಪಿ.ಎಸ್., ಧ್ಯಾನೇಂದ್ರ ಕುಮಾರ್ ಚತುರ್ವೇದಿ, ಎನ್.ಎಸ್. ಶ್ರೀಧರ ಮೂರ್ತಿ, ನೇಹಾ ಚತುರ್ವೇದಿ, ಕ್ಯಾ. ಸಹನಾ ಸುಂದರ್, ಸಿ.ಆರ್. ಪಾರ್ಥ ಸಾರಥಿ, ಬಾಬಾಸಾಬ್ ನೇಮಗೌಡ್, ವನಮಾಲಾ ವಿಶ್ವನಾಥ್, ಮಾರುತೇಶ್, ಜಿಗ್ನ ಟನ್ನಾ, ಪ್ರಭ್‌ಜೋತ್ ಕೌರ್, ರಿತು ಗರ್ಗ್, ಅಪರ್ಣಾ ಬಂಡೋಪಾಧ್ಯಾಯ, ಅಪರ್ಣಾ ದೇಧಿಯ, ನೀಲಿಮಾ ಮೋಹೊಲ್, ಮಹೇಶ್ ಭಟ್, ಆಯೋಜನೆ: ಸ್ಪಾರ್ಕ್ ಲೈಟ್ನಿಂಗ್ ಮೈಂಡ್ಸ್ ಪಬ್ಲಿಕೇಶನ್ಸ್, ಸೊಂಥ ಎಂಟರ್‌ಪ್ರೈಸಸ್, ಸ್ಥಳ: ಆಟಾ ಗಲಾಟ, ಬೆಳಿಗ್ಗೆ 10

ನೃಪತುಂಗ ವಿಶ್ವವಿದ್ಯಾಲಯದ ದ್ವಿತೀಯ ಮತ್ತು ತೃತೀಯ ಘಟಿಕೋತ್ಸವ: ಅಧ್ಯಕ್ಷತೆ: ಥಾವರಚಂದ್ ಗೆಹಲೋತ್, ಅತಿಥಿಗಳು: ಎಂ.ಸಿ. ಸುಧಾಕರ್, ಎಚ್.ಎಸ್. ರಾಘವೇಂದ್ರ ರಾವ್, ಮೋಹನ್ ಕುಮಾರ್ ಬಿ.ಕೆ., ಆಯೋಜನೆ: ನೃಪತುಂಗ ವಿಶ್ವವಿದ್ಯಾಲಯ, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಳಿಗ್ಗೆ 11

ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ ಪ್ರದಾನ: ಪ್ರಶಸ್ತಿ ಸ್ವೀಕರಿಸುವವರು: ಗೊ.ರು. ಚನ್ನಬಸಪ್ಪ, ಪ್ರಶಸ್ತಿ ಪ್ರದಾನ: ಹಂ.ಪ. ನಾಗರಾಜಯ್ಯ, ಅಧ್ಯಕ್ಷತೆ: ಆರ್.ಕೆ. ನಲ್ಲೂರು ಪ್ರಸಾದ್, ಅತಿಥಿಗಳು: ಹರಿಕೃಷ್ಣ ಪುನರೂರು, ಪಿ. ಮಲ್ಲಿಕಾರ್ಜುನಪ್ಪ, ಪ್ರಾಸ್ತಾವಿಕ ನುಡಿ: ಸಿ.ಕೆ. ರಾಮೇಗೌಡ, ಆಯೋಜನೆ: ಕನ್ನಡ ಜನಶಕ್ತಿ, ಸ್ಥಳ: ನಯನ ಸಭಾಂಗಣ, ರವೀಂದ್ರ ಕಲಾಕ್ಷೇತ್ರ ಆವರಣ, ಜೆ.ಸಿ. ರಸ್ತೆ, ಸಂಜೆ 5.15

ಪರಿಸರ ವಿಜ್ಞಾನ ಮತ್ತು ಶಕ್ತಿ ಕುರಿತು ವಿಚಾರ ಸಂಕಿರಣ: ಮಾತನಾಡುವವರು: ಪ್ರಕಾಶ್ ಬೆಳವಾಡಿ, ರುದ್ರದೀಪ್ ಮಜುಂದಾರ್, ಎ.ವಿ. ಕೃಷ್ಣನ್, ಪಿ.ಜಿ. ದಿವಾಕರ್, ನಾಗೇಶ್ ಸಿದ್ಧಾಂತಿ, ಆಯೋಜನೆ: ರೋಟರಿ ಇಂಟರ್‌ನ್ಯಾಷನಲ್ ಡಿಸ್ಟಿಕ್ಟ್ 3191, 3192, ಚಾಣಕ್ಯ ವಿಶ್ವವಿದ್ಯಾಲಯದ ಸುಸ್ಥಿರ ಕೇಂದ್ರ, ಸ್ಥಳ: ರೋಟರಿ ಹೌಸ್ ಫಾರ್ ಫ್ರೆಂಡ್‌ಶಿಪ್, ಲಾವೆಲ್ಲೆ ರಸ್ತೆ, ಸಂಜೆ 5.30

26ನೇ ವರ್ಷದ ಪ್ರವಚನ ವಾಹಿನಿ: 'ಹದಿಬದೆಯ ಧರ್ಮ' ವಿಷಯದ ಬಗ್ಗೆ ಪ್ರವಚನ: ಸತ್ಯೇಶ್ ಬೆಳ್ಳೂರ್, ವೈಷ್ಣವಿ ಡಿ. ಆಚಾರ್ಯ, ಆಯೋಜನೆ ಹಾಗೂ ಸ್ಥಳ: ಸಾಂಸ್ಕೃತಿಕ ಮಂದಿರ, ರಾಗೀಗುಡ್ಡದ ಶ್ರೀ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ 9ನೇ ಬಡಾವಣೆ, ಸಂಜೆ 6.30

ವ್ಯೂಹ ಮುದ್ರ ನಾಟಕ: ರಚನೆ: ವಿಶಾಖದತ್ತ, ಅನುವಾದ: ಮಾನಸ ಆರ್., ನಿರ್ದೇಶನ: ತೇಜಸ್ ಕೆ., ಪ್ರದರ್ಶನ: ಉತ್ಕರ್ಷ್ ಅಭಿನಯ ತಂಡ, ಆಯೋಜನೆ ಮತ್ತು ಸ್ಥಳ: ರಂಗ ಶಂಕರ, ಸಂಜೆ 7.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಕುಲಪತಿಗಳ ಆಯ್ಕೆ: ರಾಜ್ಯಪಾಲರಿಗೆ ಪತ್ರ

ಕೃಷಿ ವಿ.ವಿ ನಿವೃತ್ತ ಪ್ರಾಧ್ಯಾಪಕರು, ವಿಜ್ಞಾನಿಗಳು, ಹಿರಿಯ ವಿದ್ಯಾರ್ಥಿಗಳಿಂದ ಪತ್ರ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ‘ರಾಜಕೀಯ ಹಸ್ತಕ್ಷೇಪಕ್ಕೆ ಅವಕಾಶ ನೀಡಬಾರದು’
- ಶೋಧನಾ ಸಮಿತಿಗೆ ಸಂಪೂರ್ಣ ಸ್ವಾಯತ್ತತೆ ನೀಡಲು ಆಗ್ರಹ

ಬೆಂಗಳೂರು: ರಾಜ್ಯದ ಕೃಷಿ ವಿಶ್ವವಿದ್ಯಾಲಯಗಳ ಕುಲಪತಿಗಳ ನೇಮಕಾತಿ ಪ್ರಕ್ರಿಯೆಯಲ್ಲಿ ರಾಜಕೀಯ ಹಸ್ತಕ್ಷೇಪ, ಹಣದ ಪ್ರಭಾವ ಮತ್ತು ಪಕ್ಷಪಾತಕ್ಕೆ ಅವಕಾಶ ನೀಡಬಾರದು ಎಂದು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕರು, ವಿಜ್ಞಾನಿಗಳು ಹಾಗೂ ಹಿರಿಯ ವಿದ್ಯಾರ್ಥಿಗಳು ಒತ್ತಾಯಿಸಿದ್ದಾರೆ.

ನಿವೃತ್ತ ಐಎಫ್‌ಎಸ್ ಅಧಿಕಾರಿ ಅ.ನ.ಯಲ್ಲಪ್ಪ ರೆಡ್ಡಿ, ಅಂತರರಾಷ್ಟ್ರೀಯ ಬೆಳೆ ಸಂಶೋಧನಾ ಸಂಸ್ಥೆಯ ಮಾಜಿ ಅಧಿಕಾರಿ ಸಿ.ಎಲ್.ಲಕ್ಷ್ಮಿಪತಿ ಗೌಡ, ಕೃಷಿ ವಿಶ್ವವಿದ್ಯಾಲಯದ ಮಾಜಿ ಕುಲಸಚಿವ ಎಚ್.ವಿ.ನಂಜಪ್ಪ, ವಿ.ವೀರಭದ್ರಯ್ಯ, ಜಿ.ಎನ್.ನಾಗರಾಜ್, ಎ.ರಾಜಣ್ಣ, ಎಚ್. ವಸಂತ್ ಸೇರಿದಂತೆ 40ಕ್ಕೂ ಹೆಚ್ಚು ಜನರು ಈ ಕುರಿತು ರಾಜ್ಯಪಾಲರಿಗೆ ಪತ್ರ ಬರೆದಿದ್ದಾರೆ

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ

ಕುಲಪತಿಗಳ ಆಯ್ಕೆ ಪ್ರಕ್ರಿಯೆ ಸಂಪೂರ್ಣ ಪಾರದರ್ಶಕ ಹಾಗೂ ಪ್ರಭಾವ ಮುಕ್ತವಾಗಿರಬೇಕು. ಶೋಧನಾ ಸಮಿತಿಯ ರಚನೆ ಹಾಗೂ ಕಾರ್ಯವೈಖರಿಯಲ್ಲಿ ಸ್ವಾಯತ್ತತೆ ಕಾಪಾಡುವ ಅಗತ್ಯವಿದೆ. ಶೋಧನಾ ಸಮಿತಿಗೆ ಸಂಪೂರ್ಣ ಸ್ವಾಯತ್ತತೆ ಇರಬೇಕು. ಸಮಿತಿ ಸದಸ್ಯರು ಹಿತಾಸಕ್ತಿ ಸಂಘರ್ಷವಿಲ್ಲ ಎಂಬ ಘೋಷಣೆ ನೀಡಬೇಕು. ಸರ್ಕಾರದ ಪ್ರತಿನಿಧಿಯಾಗಿ ರಾಜ್ಯದ ಹೊರಗಿನ ಖ್ಯಾತ ಕೃಷಿ ವಿಜ್ಞಾನಿಯನ್ನು ನೇಮಿಸಬೇಕು ಎಂದು ಮನವಿ ಮಾಡಿದ್ದಾರೆ.

ಆಯ್ಕೆ ಪಟ್ಟಿಗೆ ಸೇರುವ ಅಭ್ಯರ್ಥಿಗಳು, ಅವರ ಸಂಗಾತಿಗಳು ಮತ್ತು ಅವಲಂಬಿತರ ಬ್ಯಾಂಕ್ ವ್ಯವಹಾರಗಳು ಹಾಗೂ ಆಸ್ತಿ ವರ್ಗಾವಣೆಗಳನ್ನು ಪರಿಶೀಲಿಸಬೇಕು. ಆಯ್ಕೆ ಪ್ರಕ್ರಿಯೆಗೆ ಸಂಬಂಧಿಸಿದ ಅಕ್ರಮ ಪ್ರಭಾವ ಅಥವಾ ಹಣದ ವ್ಯವಹಾರಗಳ ಬಗ್ಗೆ ಮಾಹಿತಿ ನೀಡಲು ರಹಸ್ಯ ದೂರು ವ್ಯವಸ್ಥೆ ರೂಪಿಸಬೇಕು. ಅಕ್ರಮ ಪ್ರಭಾವ ಬೀರುವವರ ವಿರುದ್ಧ ಕಠಿಣ ಕ್ರಮಗಳನ್ನು ಕಡ್ಡಾಯಗೊಳಿಸುವಂತೆ ಕಾಯ್ದೆಗೆ ತಿದ್ದುಪಡಿ ತರಬೇಕು. ಶೈಕ್ಷಣಿಕ ಸಾಧನೆ, ಸಂಶೋಧನಾ ಪ್ರಕಟಣೆಗಳು ಮತ್ತು ರೈತಪರ ನವೋದ್ಯಮಗಳ ಆಧಾರದ ಮೇಲೆ ಅಂಕಗಳ ವ್ಯವಸ್ಥೆ ರೂಪಿಸಬೇಕು. ಆಯ್ಕೆಯಾದ ಬಳಿಕ ಸಮಿತಿಯ ಕಾರ್ಯವೈಖರಿ ಮತ್ತು ಶಿಫಾರಸುಗಳನ್ನು ಮಾಹಿತಿ ಹಕ್ಕು ಕಾಯ್ದೆಯಡಿ ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಬೇಕು ಎಂದು ಬೇಡಿಕೆ ಮಂಡಿಸಿದ್ದಾರೆ.

ಈಗಾಗಲೇ ಶಿವಮೊಗ್ಗ ಮತ್ತು ಧಾರವಾಡ ಕೃಷಿ ವಿಶ್ವವಿದ್ಯಾಲಯಗಳಿಗಾಗಿ ರಚಿಸಲಾದ ಶೋಧನಾ ಸಮಿತಿಗಳನ್ನು ಮರುಪರಿಶೀಲಿಸಿ ಪುನರ್‌ರಚನೆ ಮಾಡುವಂತೆ ಕೋರಿದ್ದಾರೆ. ಕೃಷಿ ವಿಶ್ವವಿದ್ಯಾಲಯಗಳ ನಾಯಕತ್ವವು ರಾಜ್ಯದ ಆಹಾರ ಭದ್ರತೆ, ಗ್ರಾಮೀಣ ಜೀವನೋಪಾಯ ಮತ್ತು ಕೃಷಿ ವಿಜ್ಞಾನದ ಭವಿಷ್ಯಕ್ಕೆ ಸಂಬಂಧಿಸಿದ್ದರಿಂದ ಆಯ್ಕೆ ಪ್ರಕ್ರಿಯೆ ವಿಶ್ವಾಸಾರ್ಹ ಹಾಗೂ ಪಾರದರ್ಶಕವಾಗಿರಬೇಕು ಎಂದು ಮನವಿಯಲ್ಲಿ ಒತ್ತಾಯಿಸಿದ್ದಾರೆ.

‘ಸ್ವಚ್ಛ ಅತ್ತಿಗುಪ್ಪೆ’

ನಗರದ ಅತ್ತಿಗುಪ್ಪೆಯಲ್ಲಿ ‘ಅತ್ತಿಗುಪ್ಪೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ’ವು ಆಯೋಜಿಸಿದ್ದ ‘ಸ್ವಚ್ಛ ಅತ್ತಿಗುಪ್ಪೆ– ನಮ್ಮ ಊರು, ನಮ್ಮ ಜವಾಬ್ದಾರಿ’ ಅಭಿಯಾನದಲ್ಲಿ ‘ಫಾರ್ ಕ್ಲೀನ್ ಇಂಡಿಯಾ’ ಸಂಸ್ಥೆ ಸ್ಥಾಪಕ ಲಾಜರ್ ಜಾಂಕೋವಿಕ್, ಸಂಘಟನೆ ಅಧ್ಯಕ್ಷೆ ಚಂದನಾ ಪ್ರದೀಪ್ ಹಾಗೂ ಸ್ವಯಂ ಸೇವಕರು ಪಾಲ್ಗೊಂಡಿದ್ದರು

ನೈರುತ್ಯ ರೈಲ್ವೆ: 44 ಲಕ್ಷ ಟನ್ ಸರಕು ಸಾಗಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೈರುತ್ಯ ರೈಲ್ವೆಯು ಮೇ ತಿಂಗಳಲ್ಲಿ ದಾಖಲೆಯ 44 ಲಕ್ಷ ಟನ್ ಸರಕು ಸಾಗಣೆ ಮಾಡಿದೆ. ಇದರಿಂದ ₹425 ಕೋಟಿ ಆದಾಯ ಗಳಿಸಿದೆ. ಇದೇ ಅವಧಿಯಲ್ಲಿ 1.64 ಕೋಟಿ ಜನರು ರೈಲಿನಲ್ಲಿ ಪ್ರಯಾಣಿಸಿದ್ದು, ₹ 302 ಕೋಟಿ ವರಮಾನ ಬಂದಿದೆ.

ಇದು ಮೇ ತಿಂಗಳಲ್ಲಿ ಇದುವರೆಗಿನ ಅತಿ ಹೆಚ್ಚಿನ ದಾಖಲೆಯಾಗಿದೆ. ಕಳೆದ ವರ್ಷದ ಇದೇ ಅವಧಿಯಲ್ಲಿ 42.2 ಲಕ್ಷ ಟನ್ ಸಾಗಣೆ ಮಾಡಲಾಗಿತ್ತು. ಅದಕ್ಕೆ ಹೋಲಿಸಿದರೆ ಶೇ 4.3ರಷ್ಟು ಹೆಚ್ಚಾಗಿದೆ. 2008ರ ಮೇ ತಿಂಗಳಲ್ಲಿ 42.5 ಲಕ್ಷ ಟನ್ ಸಾಗಣೆ ಮಾಡಿರುವುದು ಇದುವರೆಗಿನ ದಾಖಲೆಯಾಗಿತ್ತು.

ದಿನಕ್ಕೆ ಸರಾಸರಿ 2,275 ವ್ಯಾಗನ್‌ಗಳನ್ನು ಲೋಡ್ ಮಾಡಲಾಗಿದ್ದು, ಕಳೆದ ವರ್ಷ ಇದೇ ಅವಧಿಯಲ್ಲಿ ಇದು 2,193 ವ್ಯಾಗನ್‌ಗಳಾಗಿತ್ತು. ಶೇ 3.7ರಷ್ಟು ಬೆಳವಣಿಗೆ ಕಂಡುಬಂದಿದೆ.

ಸರಕುಗಳ ವಿಭಾಗದಲ್ಲಿ ಮೇನಲ್ಲಿ 17.66 ಲಕ್ಷ ಟನ್ ಕಬ್ಬಿಣದ ಅದಿರು, 9.21 ಲಕ್ಷ ಟನ್ ಉಕ್ಕು ಹಾಗೂ 1.08 ಲಕ್ಷ ಟನ್ ಕಚ್ಚಾ ವಸ್ತುಗಳನ್ನು ಸಾಗಿಸಲಾಗಿದೆ. ಕಲ್ಲಿದ್ದಲು ಲೋಡಿಂಗ್ 9.3 ಲಕ್ಷ ಟನ್‌ಗೆ ಏರಿಕೆಯಾಗಿದೆ. ಆಹಾರ ಧಾನ್ಯಗಳ ಲೋಡಿಂಗ್ 22 ಸಾವಿರ ಟನ್‌ಗಳಾಗಿದ್ದು, ಕಂಟೇನರ್ ಸಾಗಣೆ 90 ಸಾವಿರ ಟನ್ ತಲುಪಿದೆ. ಇತರೆ ಸರಕುಗಳ (ಬಿಒಜಿ) ಲೋಡಿಂಗ್ 1.4 ಲಕ್ಷ ಟನ್‌ನಿಂದ 2.2 ಲಕ್ಷ ಟನ್‌ಗೆ ಏರಿಕೆಯಾಗಿದೆ ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

₹770.71 ಕೋಟಿ ಮೇನಲ್ಲಿ ಒಟ್ಟು ಗಳಿಕೆ
ಶೇ 21.37 ವರಮಾನದಲ್ಲಿ ಬೆಳವಣಿಗೆಯ ಪ್ರಮಾಣ
₹302.34 ಕೋಟಿ ಪ್ರಯಾಣಿಕರಿಂದ ಬಂದ ಆದಾಯ
1.63 ಕೋಟಿ ಒಂದು ತಿಂಗಳಲ್ಲಿ ರೈಲಿನಲ್ಲಿ ಪ್ರಯಾಣಿಸಿದವರು
₹425.67 ಕೋಟಿ ಸರಕು ಸಾಗಣೆ ಆದಾಯ
₹26.10 ಕೋಟಿ ಕೋಚಿಂಗ್ ಆದಾಯ
₹13.82 ಕೋಟಿ ಪಾರ್ಸೆಲ್ ಆದಾಯ
₹16.60 ಕೋಟಿ ಇತರೆ ಆದಾಯ
₹5.53 ಕೋಟಿ ಟಿಕೆಟ್ ಪರಿಶೀಲನೆ ಆದಾಯ
₹5.70 ಕೋಟಿ ವಾಣಿಜ್ಯ, ಇತರೆ ಆದಾಯ

ರಾಜ್ಯಸಭೆ ಚುನಾವಣೆ: ಮಾಹಿತಿ ಪಡೆದುಕೊಂಡ ಬಿಜೆಪಿ ವರಿಷ್ಠರು

ಸುಮಲತಾ ಹೆಸರು ಮುಂಚೂಣಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯಸಭಾ ಚುನಾವಣೆಗೆ ಡಿ.ವಿ.ಸದಾನಂದ ಗೌಡ, ನಿರ್ಮಲ್ ಕುಮಾರ್ ಸುರಾನ ಸೇರಿ ಕೆಲವರ ಹೆಸರುಗಳನ್ನು ಒಳಗೊಂಡ ಪಟ್ಟಿಯನ್ನು ಬಿಜೆಪಿ ರಾಜ್ಯ ಘಟಕ ಕಳುಹಿಸಿದ್ದರೂ, ಲೋಕಸಭೆಯ ಮಾಜಿ ಸದಸ್ಯೆ ಸುಮಲತಾ ಅಂಬರೀಷ್ ಅವರ ಕುರಿತಂತೆ ಆ ಪಕ್ಷದ ವರಿಷ್ಠರು ಮಾಹಿತಿ ಪಡೆದು ಕೊಂಡಿದ್ದಾರೆ.

ಸುಮಲತಾ ಅಂಬರೀಷ್

ಹೀಗಾಗಿ, ಬಿಜೆಪಿಯ ಒಂದು ಸ್ಥಾನಕ್ಕೆ ಪೈಪೋಟಿ ಇನ್ನಷ್ಟು ತುರುಸಾಗಿದೆ. ಬಿಜೆಪಿ ಕಳುಹಿಸಿದ್ದ ಮೂಲ ಪಟ್ಟಿಯಲ್ಲಿ ಸುಮಲತಾ ಅವರ ಹೆಸರು ಇರಲಿಲ್ಲ. ಕಳೆದ ಲೋಕಸಭಾ ಚುನಾವಣೆ ವೇಳೆ ಬಿಜೆಪಿ ವರಿಷ್ಠರ ಮನವಿಯ ಮೇರೆಗೆ ಸುಮಲತಾ ಅವರು ಮಂಡ್ಯ ಕ್ಷೇತ್ರದಿಂದ ಸ್ಪರ್ಧಿಸಿರಲಿಲ್ಲ. ಬಳಿಕ ಅವರು ಬಿಜೆಪಿಯನ್ನೂ ಸೇರಿಕೊಂಡರು. ಎನ್‌ಡಿಎ ಅಭ್ಯರ್ಥಿಯಾಗಿ ಎಚ್.ಡಿ.ಕುಮಾರಸ್ವಾಮಿ ಸ್ಪರ್ಧಿಸಿ ಗೆಲುವು ಸಾಧಿಸಿದ್ದರು.

‘ಸತೀಶಗೆ ಕೆಪಿಸಿಸಿ ಅಧ್ಯಕ್ಷ ಸ್ಥಾನ ನೀಡಬೇಡಿ’

ಬೆಂಗಳೂರು: ‘ಅಹಿಂದ ಚಳವಳಿ, ಸಂಘಟನೆಗಳ ಜೊತೆ ಶಾಸಕ ಸತೀಶ ಜಾರಕಿಹೊಳಿ ಯಾವುದೇ ಸಂಬಂಧವನ್ನು ಹೊಂದಿಲ್ಲ. ಹೀಗಾಗಿ ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ಅವರನ್ನು ಪರಿಗಣಿಸಬಾರದು’ ಎಂದು ಅಹಿಂದ ಸಂಘಟನೆಯು ಒತ್ತಾಯಿಸಿದೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್, ಹಿರಿಯ ನಾಯಕಿ ಸೋನಿಯಾ ಗಾಂಧಿ, ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರಿಗೆ ಸಂಘಟನೆ ಪರವಾಗಿ ವೆಂಕಟೇಶ ಗೌಡ, ಅಶೋಕ್ ಕುಮಾರ್ ಗಾಣಿಗ, ವಿಜಯಲಕ್ಷ್ಮಿ ಅರಸ್ ಸೇರಿದಂತೆ 15ಕ್ಕೂ ಹೆಚ್ಚು ಸದಸ್ಯರು ಸೋಮವಾರ ಪತ್ರ ಬರೆದಿದ್ದಾರೆ.

‘ಸಿದ್ದರಾಮಯ್ಯ ಅವರ ನಂತರ ಅಹಿಂದ ಸಂಘಟಿಸುವುದಾಗಿ ಹೇಳುತ್ತಿರುವ ಸತೀಶ್ ಅವರಿಗೆ, ಅಲ್ಪಸಂಖ್ಯಾತರು, ಹಿಂದುಳಿದವರು ಮತ್ತು ದಲಿತರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ರಾಜಕೀಯ ಸ್ಥಿತಿಗತಿಯ ಬಗ್ಗೆ ಯಾವುದೇ ತಿಳಿವಳಿಕೆ ಇಲ್ಲ. ತಮ್ಮ ಕುಟುಂಬದ ರಾಜಕೀಯ ಶಕ್ತಿ ಉಳಿಸಿಕೊಳ್ಳಲು ಅಷ್ಟೇ ಅವರು ಮತ್ತು ಅವರ ಸಹೋದರರು ಎಲ್ಲ ಸರ್ಕಾರಗಳಲ್ಲಿ ಅಧಿಕಾರದಲ್ಲಿ ಇರುತ್ತಾರೆ’ ಎಂದು ಪತ್ರದಲ್ಲಿ ಹೇಳಿದ್ದಾರೆ.

‘ಸಿದ್ದರಾಮಯ್ಯ ಹೆಸರು ಮತ್ತು ಅವರ ನೆರಳಿನಲ್ಲಿ ಅಧಿಕಾರ ಪಡೆದಿರುವ ಸತೀಶ ಅವರಿಂದ ಸಮುದಾಯಗಳಿಗೆ ಯಾವುದೇ ಅನುಕೂಲವಾಗಿಲ್ಲ. ಕೆಪಿಸಿಸಿ ಅಧ್ಯಕ್ಷ ಸ್ಥಾನವನ್ನು ನೀಡಿದರೆ, ವಿರೋಧಿಸಲಾಗುವುದು’ ಎಂದಿದ್ದಾರೆ.

ಸುಮಲತಾ ಅವರು ಬಿಜೆಪಿ ಸೇರುವ ವೇಳೆಯಲ್ಲಿ ಮುಂದಿನ ದಿನಗಳಲ್ಲಿ ಉತ್ತಮ ಸ್ಥಾನಮಾನ ನೀಡುವುದಾಗಿ ವರಿಷ್ಠರು ಭರವಸೆ ನೀಡಿದ್ದರು ಎಂಬ ಮಾತು ಪಕ್ಷದ ವಲಯದಲ್ಲಿ ಚರ್ಚೆ ಆಗಿತ್ತು. ಆ ಬಳಿಕ ಸುಮಲತಾ ಅವರನ್ನು ಪಕ್ಷ ಮರೆತಿತ್ತು. ಈ ಬಾರಿ ರಾಜ್ಯಸಭೆಯ ಒಂದು ಸ್ಥಾನಕ್ಕೆ ಆಕಾಂಕ್ಷಿಗಳು ಹಲವರು ಇದ್ದರು. ಈಗ ಸುಮಲತಾ ಅವರ ಹೆಸರು ಮುನ್ನೆಲೆಗೆ ಬಂದಿದೆ. ಪಕ್ಷದ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಇತ್ತೀಚೆಗೆ ಬೆಂಗಳೂರಿಗೆ ಬಂದ ಸಂದರ್ಭದಲ್ಲಿ ಸುಮಲತಾ ಅವರು ಭೇಟಿ ಮಾಡಿ ಮಾತುಕತೆ ನಡೆಸಿದ್ದರು.

ಹಾಲಿ ಸದಸ್ಯ ಈರಣ್ಣ ಕಡಾಡಿ ಅವರು ಇನ್ನೊಂದು ಅವಧಿಗೆ ಮುಂದುವರಿಯಲು ಬಯಸಿದ್ದಾರೆ. ಆದರೆ, ಅವರ ಅಪೇಕ್ಷೆ ಈಡೇರುವ ಸಾಧ್ಯತೆ ತೀರಾ ಕಡಿಮೆ ಎಂದು ಮೂಲಗಳು ಹೇಳಿವೆ.

ರಾಜ್ಯಸಭೆ ಅಭ್ಯರ್ಥಿ ವಿಚಾರದಲ್ಲಿ ಪ್ರಧಾನಿ ಮೋದಿ ಮತ್ತು ಅಮಿತ್ ಶಾ ಅವರ ತೀರ್ಮಾನವೇ ಅಂತಿಮವಾಗಲಿದೆ. ಎಲ್ಲರ ಲೆಕ್ಕಾಚಾರ ಮೀರಿ ಎಚ್.ಡಿ.ದೇವೇಗೌಡ ಅವರ ಪರ ಒಲವು ಬೀರುತ್ತಾರೋ ಅಥವಾ ದೇವೇಗೌಡರನ್ನು ನಾಮ ನಿರ್ದೇಶನ ಮಾಡಿ ಕರೆಸಿಕೊಳ್ಳುತ್ತಾರೊ ಕಾದು ನೋಡಬೇಕು ಎಂದು ಮೂಲಗಳು ತಿಳಿಸಿವೆ.

ಅದೇ ರೀತಿ ವಿಧಾನಪರಿಷತ್ತಿನ ಎರಡು ಸ್ಥಾನಗಳಿಗೂ ಪೈಪೋಟಿ ಜೋರಾಗಿದೆ. ನಳಿನ್ ಕುಮಾರ್ ಕಟೀಲ್, ಶರಣು ತಳ್ಳಿಕೆರೆ, ರಘು ಕೌಟಿಲ್ಯ, ವೆಂಕಟೇಶ ದೊಡ್ಡೇರಿ, ಮಂಜುಳಾ, ನೆ.ಲ.ನರೇಂದ್ರಬಾಬು, ಎಂ.ಡಿ.ಲಕ್ಷ್ಮೀನಾರಾಯಣ, ಲಿಂಗರಾಜಪಾಟೀಲ, ಶ್ರುತಿ, ಎನ್.ಮಹೇಶ್ ಮತ್ತು ಇತರರ ಹೆಸರು ವರಿಷ್ಠರಿಗೆ ಕಳುಹಿಸಲಾಗಿದೆ. ಇನ್ನು ಒಂದೆರಡು ದಿನಗಳಲ್ಲಿ ಅಭ್ಯರ್ಥಿಗಳ ಪಟ್ಟಿ ಅಂತಿಮವಾಗಲಿದೆ ಎಂದು ಮೂಲಗಳು ಹೇಳಿವೆ.

ಬೆಟ್ಟಿಂಗ್ ವೆಬ್‌ಸೈಟ್, ಆ್ಯಪ್ ವಿರುದ್ಧ ಪ್ರಕರಣ

ಬೆಂಗಳೂರು: ‘ರಾಜ್ಯ ಸೈಬರ್ ಕಮಾಂಡ್ ಘಟಕ’ವು (ಸಿಸಿಯು) ಇಂಡಿಯನ್ ಸೈಬರ್ ಕ್ರೈಂ ಕೋ ಆರ್ಡಿನೇಷನ್ ಸೆಂಟರ್ (ಐ4ಸಿ) ನೆರವಿನೊಂದಿಗೆ ಕಾರ್ಯಾಚರಣೆ ನಡೆಸಿ, ದೇಶದಾದ್ಯಂತ ಅಕ್ರಮ ಬೆಟ್ಟಿಂಗ್ ವೆಬ್‌ಸೈಟ್‌ಗಳು, ಮೊಬೈಲ್ ಅಪ್ಲಿಕೇಶನ್‌ಗಳು ಹಾಗೂ 8,750 ವಂಚಕ ಬೆಟ್ಟಿಂಗ್ ಯುಆರ್‌ಎಲ್‌ಗಳ ಜಾಲವನ್ನು ಭೇದಿಸಿದೆ.

ಗುಪ್ತಚರ ಮಾಹಿತಿ ಆಧರಿಸಿ ತನಿಖೆ ನಡೆಸಿದ ವಿಶೇಷ ಸೈಬರ್ ತಂಡಗಳು, ಆನ್‌ಲೈನ್ ಕ್ರಿಕೆಟ್ ಬೆಟ್ಟಿಂಗ್ ವೇದಿಕೆಗಳನ್ನು ನಿರ್ವಹಿಸುತ್ತಿದ್ದ ಸಂಘಟಿತ ಗುಂಪುಗಳನ್ನು ಗುರುತಿಸಿವೆ. ಈ ವೇದಿಕೆಗಳು ಮಿರರ್ ಡೊಮೇನ್, ಸಬ್ ಡೊಮೇನ್‌ಗಳ ಮತ್ತು ನಕಲಿ ಯುಆರ್‌ಎಲ್‌ಗಳ ಮೂಲಕ ಕಾರ್ಯನಿರ್ವಹಿಸುತ್ತಿರುವುದು ಪತ್ತೆಯಾಗಿದೆ.

ಈ ಸಂಬಂಧ ಮಾಹಿತಿ ತಂತ್ರಜ್ಞಾನ ಕಾಯ್ದೆ ಸೆಕ್ಷನ್ 66ಸಿ, 66ಡಿ ಹಾಗೂ ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್) ಸೆಕ್ಷನ್ 318 (4) ಮತ್ತು 319 (2) ಅಡಿ ಪ್ರಕರಣ ದಾಖಲಿಸಿ ತನಿಖೆ ಕೈಗೊಳ್ಳಲಾಗಿದೆ ಎಂದು ಸಿಸಿಯು ಪೊಲೀಸ್ ಮಹಾ ನಿರ್ದೇಶಕ ಪ್ರಣವ್ ಮೊಹಾಂತಿ ತಿಳಿಸಿದ್ದಾರೆ.

ಅಕ್ರಮ ಬೆಟ್ಟಿಂಗ್ ಜಾಲಗಳ ಪರಿಣಾಮ ಹಲವರಿಗೆ ಆರ್ಥಿಕ ನಷ್ಟ ಉಂಟಾಗುವುದನ್ನು ತಡೆಯಲಾಗಿದೆ.

ಬೆಟ್ಟಿಂಗ್‌ಗೆ ತೊಡಗಿಸುತ್ತಿದ್ದ ಹಣದ ಮೂಲ, ಬೆಟ್ಟಿಂಗ್ ನಿರ್ವಾಹಕರ ಪತ್ತೆ ಮಾಡುವುದು ಸೇರಿದಂತೆ ತಾಂತ್ರಿಕ ತನಿಖೆಗಳು ಪ್ರಗತಿಯಲ್ಲಿವೆ.

‘ಬಸವಣ್ಣನ ತತ್ವ ಅಳವಡಿಸಿಕೊಳ್ಳಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಸವಣ್ಣ ಜಾತಿ, ಭೇದವನ್ನು ಮಾಡದೇ ಎಲ್ಲರನ್ನೂ ಸಮಾನವಾಗಿ ನೋಡಿದ ಸಾಂಸ್ಕೃತಿಕ ನಾಯಕ. ಅವರ ವಚನದಲ್ಲಿನ ತತ್ವಗಳು ಬದುಕಿನಲ್ಲಿ ಬದಲಾವಣೆಗೆ ದಾರಿಯಾಗಲಿವೆ’ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ಜಾಗತಿಕ ಲಿಂಗಾಯತ ಮಹಾಸಭಾದ ಬೆಂಗಳೂರು ಜಿಲ್ಲಾ ಘಟಕ ಆಯೋಜಿಸಿದ್ದ ಬಸವ ಜಯಂತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

‘ಬಸವಣ್ಣ ತಮ್ಮ ಚಿಂತನೆ, ವಚನಗಳ ಮೂಲಕವೇ ನಿಜವಾದ ಸಾಂಸ್ಕೃತಿಕ ನಾಯಕ ಎನ್ನಿಸಿದರು. ಅವರಿಗೆ ಎರಡು ವರ್ಷದ ಹಿಂದೆ ಸಾಂಸ್ಕೃತಿಕ ನಾಯಕ ಎನ್ನುವ ಗೌರವ ನೀಡಿದ್ದನ್ನು ಮೆಚ್ಚಲೇಬೇಕು. ಸಮಾನತೆ ತತ್ವ ಅಳವಡಿಸಿಕೊಂಡರೆ ಸಮಾಜದ ಸ್ವಾಸ್ಥ್ಯ ಹಾಳಾಗದಂತೆ ಮಾಡಬಹುದು ಎಂದು ಹಲವು ದಾರ್ಶನಿಕರು ಹೇಳಿದರು. ಆದರೆ, ಬಸವಣ್ಣ 12ನೇ ಶತಮಾನದಲ್ಲಿಯೇ ತೋರಿಸಿಕೊಟ್ಟ ಈ ಹಾದಿ ಜಗತ್ತಿಗೆ ಮಾದರಿಯಾಗಿದೆ’ ಎಂದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ವಕೀಲ ಸಿ.ಎಸ್.ದ್ವಾರಕಾನಾಥ್, ‘ಬಸವಣ್ಣ ಅವರನ್ನು ಸಾಂಸ್ಕೃತಿಕ ನಾಯಕ ಎಂದು ಘೋಷಿಸುವಂತೆ 2011ರಲ್ಲಿ ಒತ್ತಾಯ ಮಾಡಿದ್ದೆ. ಆ ನಂತರ ಪ್ರಯತ್ನ ನಡೆದರೂ ಘೋಷಣೆಯಾಗಿರಲಿಲ್ಲ. ಸಿದ್ದರಾಮಯ್ಯ ಅವರು 2024ರಲ್ಲಿ ಘೋಷಣೆ ಮಾಡಿ ಬಸವಣ್ಣನವರ ಭಾವಚಿತ್ರ ಸರ್ಕಾರಿ ಕಚೇರಿಗಳಲ್ಲಿ ಬಳಸುವಂತೆ ಆದೇಶ ಮಾಡಿದರು. ಇಂತಹ ಯೋಚನೆಗೆ ಬಲ ತುಂಬಿದ ಸಿದ್ದರಾಮಯ್ಯ ಅಭಿನಂದನಾರ್ಹರು’ ಎಂದರು.

ಜಾಗತಿಕ ಲಿಂಗಾಯತ ಮಹಾಸಭಾದ ಬೆಂಗಳೂರು ಜಿಲ್ಲಾ ಘಟಕ ನಗರದಲ್ಲಿ ಆಯೋಜಿಸಿದ್ದ ಬಸವ ಜಯಂತಿ ಕಾರ್ಯಕ್ರಮದಲ್ಲಿ ವಕೀಲ ಸಿ.ಎಸ್.ದ್ವಾರಕಾನಾಥ್ ಮತ್ತು ಕೋಮಲ ದ್ವಾರಕಾನಾಥ್ ಅವರನ್ನು ಸನ್ಮಾನಿಸಲಾಯಿತು. (ಎಡದಿಂದ) ಗಂಗಾಂಬಿಕೆ ಮಲ್ಲಿಕಾರ್ಜುನ, ಬಸವರಾಜ ಹೊರಟ್ಟಿ, ಶಿವರುದ್ರ ಸ್ವಾಮೀಜಿ, ಎಸ್.ಎಂ ಕೆಂಪಗೌಡರ್, ಎಸ್.ಎಂ.ಜಾಮದಾರ್ ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ

ನಿವೃತ್ತ ಜಿಲ್ಲಾ ನ್ಯಾಯಾಧೀಶ ಎಸ್.ಎಂ.ಕೆಂಪಗೌಡರ್ ಮಾತನಾಡಿ, ‘ಕೆಲವೊಮ್ಮೆ ನಮ್ಮ ಸಮುದಾಯದವರೇ ಉನ್ನತ ಹುದ್ದೆಯಲ್ಲಿದ್ದಾಗ ಸಮಾಜದ ಪರ ಬೇಡಿಕೆ ಇಟ್ಟಾಗ ನಿರ್ಧಾರಗಳು ತ್ವರಿತವಾಗಿ ಆಗುವುದಿಲ್ಲ. ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿದ್ದಾಗ ಪ್ರಮುಖ ನಿರ್ಧಾರ ಕೈಗೊಂಡರು. ಬಸವಣ್ಣನನ್ನು ಸಾಂಸ್ಕೃತಿಕ ನಾಯಕ ಎಂದು ಘೋಷಿಸಿದ್ದು, ಮಹಿಳಾ ವಿಶ್ವವಿದ್ಯಾಲಯಕ್ಕೆ ಅಕ್ಕಮಹಾದೇವಿ ಹೆಸರು ಇಟ್ಟಿದ್ದು, ಅನುಭವ ಮಂಟಪ ಅಭಿವೃದ್ಧಿ, ಕಿತ್ತೂರು ಚನ್ನಮ್ಮ ಉತ್ಸವ, ಕಿತ್ತೂರಿಗೆ ಚನ್ನಮ್ಮನ ಹೆಸರು ಇಟ್ಟಿದ್ದು ಪ್ರಮುಖವಾದವು’ ಎಂದು ಹೇಳಿದರು.

ಬೇಲಿಮಠದ ಶಿವರುದ್ರ ಸ್ವಾಮೀಜಿ, ನಿವೃತ್ತ ಐಎಎಸ್ ಅಧಿಕಾರಿ ಎಸ್.ಎಂ.ಜಾಮದಾರ್, ಮಾಜಿ ಮೇಯರ್ ಗಂಗಾಂಬಿಕೆ ಮಲ್ಲಿಕಾರ್ಜುನ, ಮಹಾಸಭಾ ಬೆಂಗಳೂರು ನಗರ ಅಧ್ಯಕ್ಷ ವೀರಭದ್ರಯ್ಯ, ಪ್ರಧಾನ ಕಾರ್ಯದರ್ಶಿ ಕೃಪಾ ಶಂಕರ್ ಉಪಸ್ಥಿತರಿದ್ದರು.

ಫುಟ್‌ಬಾಲ್: ಅರುಣ್ ಮಿಂಚು; ಅಂಶ್ ಸ್ಪೋರ್ಟ್ಸ್‌ಗೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅರುಣ್ ಕುಮಾರ್ ಕೆ. ಅವರು ಗಳಿಸಿದ ಐದು ಗೋಲುಗಳ ಬಲದಿಂದ ಅಂಶ್ ಸ್ಪೋರ್ಟ್ಸ್ ಕ್ಲಬ್ ತಂಡವು ಕೆಎಸ್‌ಎಫ್‌ಎ ಸಿ ಡಿವಿಷನ್ ಲೀಗ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ (ಉತ್ತರ ವಲಯ) ಪಂದ್ಯದಲ್ಲಿ ಸೋಮವಾರ 12–0ಯಿಂದ ಯಲಹಂಕ ಎಫ್‌ಸಿ ತಂಡವನ್ನು ಏಕಪಕ್ಷೀಯವಾಗಿ ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಸಿ ಗುಂಪಿನ ಪಂದ್ಯದಲ್ಲಿ ಅಂಶ್ ಸ್ಪೋರ್ಟ್ಸ್ ತಂಡದ ಆಟಗಾರರು ಆರಂಭದಿಂದಲೇ ಗೋಲಿನ ಸುರಿಮಳೆಗೈದರು. ಅರುಣ್ (10ನೇ, 32ನೇ, 33ನೇ, 35ನೇ ಹಾಗೂ 38ನೇ ನಿ.) ಐದು ಗೋಲಿನೊಂದಿಗೆ ಮಿಂಚಿದರೆ, ಶೀರಝ್ ಖಾನ್ (7ನೇ ಹಾಗೂ 12ನೇ ನಿ.), ರಿಹಾನ್ ಅನ್ವರ್ (14ನೇ ಹಾಗೂ 15ನೇ ನಿ.) ಮತ್ತು ಸಲೀಮ್ ಎ. (16ನೇ ಹಾಗೂ 17ನೇ ನಿ.) ತಲಾ ಎರಡು ಗೋಲು ಹೊಡೆದರು. ಇ.ಎ.ಅಶ್ವಿನ್ ಕೃಷ್ಣ (41ನೇ ನಿ.) ಒಂದು ಗೋಲು ಗಳಿಸಿದರು.

ಇನ್ನೊಂದು ಪಂದ್ಯದಲ್ಲಿ ಬ್ಲ್ಯಾಕ್ ಮೂನ್ ಎಫ್‌ಸಿ ತಂಡವು 3–2ರಿಂದ ವಿಕ್ಟೋರಿಯಾ ಎಫ್‌ಸಿ ಬೆಂಗಳೂರು ತಂಡವನ್ನು ಸೋಲಿಸಿತು. ರೊನಾಲ್ಡೊ ಎಫ್‌ಸಿ ಬೆಂಗಳೂರು– ಪ್ಲೇ 365 ನಡುವಣ ಪಂದ್ಯವು ಗೋಲು ರಹಿತ ಡ್ರಾ ಆಯಿತು.

ಡಿ ಗುಂಪಿನ ಪಂದ್ಯದಲ್ಲಿ ಅಗ್ನಿಪುತ್ರ ಎಫ್‌ಸಿ– ಡಿ.ಬಿ. ಯುನೈಟೆಡ್ ಎಫ್‌ಸಿ ತಂಡಗಳು 1–1 ಡ್ರಾ ಸಾಧಿಸಿದವು. ಆರ್‌ವಿ ಎಫ್‌ಸಿ ಮತ್ತು ಬ್ಲ್ಯು ಡೈಮಂಡ್ ಎಫ್‌ಸಿ ತಂಡಗಳೂ 1–1 ಡ್ರಾ ಮಾಡಿಕೊಂಡವು.

ಡಿ ಡಿವಿಷನ್ ಲೀಗ್ ಪಂದ್ಯದಲ್ಲಿ ಎಲೀಟ್ ಸಾಕ್ಸರ್ ಸ್ಕೂಲ್ ತಂಡವು 7–1ರಿಂದ ಬ್ಲ್ಯೂಸ್ ಫುಟ್‌ಬಾಲ್ ಅಸೋಸಿಯೇಷನ್ ವಿರುದ್ಧ ಸುಲಭ ಜಯ ಸಾಧಿಸಿತು. ಆ್ಯಮಿ– ಆಲ್‌ಸ್ಟಾರ್ ನಡುವಣ ಪಂದ್ಯ 1–1 ಡ್ರಾ ಆಯಿತು.

ನ್ಯಾಯಮೂರ್ತಿಗಳ ಸಂಖ್ಯೆ 48ಕ್ಕೆ ಏರಿಕೆ

ನ್ಯಾ.ರಾಜೇಶ್ವರಿ ಎನ್.ಹೆಗ್ಡೆ

ನ್ಯಾ.ಕೆದಂಬಾಡಿ ಗಣೇಶ ಶಾಂತಿ

ನ್ಯಾ.ಬೃಂಗೇಶ್ ಮಹದೇವಪ್ಪ

ಬೆಂಗಳೂರು: ಕರ್ನಾಟಕ ಹೈಕೋರ್ಟ್‌ನ ನೂತನ ನ್ಯಾಯಮೂರ್ತಿಗಳಾಗಿ ಪದೋನ್ನತಿ ಹೊಂದಿರುವ ಮೂವರು ಜಿಲ್ಲಾ ನ್ಯಾಯಾಧೀಶರಿಗೆ ಮುಖ್ಯ ನ್ಯಾಯಮೂರ್ತಿಗಳ ಕೋರ್ಟ್ ಹಾಲ್ 1ರಲ್ಲಿ ಸೋಮವಾರ ರಾಜ್ಯ ವಕೀಲರ ಪರಿಷತ್ ವತಿಯಿಂದ ಸ್ವಾಗತ ಕೋರಲಾಯಿತು.

ನೂತನ ನ್ಯಾಯಮೂರ್ತಿಗಳಾದ ರಾಜೇಶ್ವರಿ ನಾರಾಯಣ ಹೆಗ್ಡೆ, ಕೆದಂಬಾಡಿ ಗಣೇಶ ಶಾಂತಿ ಮತ್ತು ಬೃಂಗೇಶ್ ಮಹದೇವಪ್ಪ ಅವರು, ‘ಸಂವಿಧಾನದ ಚೌಕಟ್ಟಿನಲ್ಲಿ ತಮ್ಮ ಕರ್ತವ್ಯ ನಿರ್ವಹಣೆ ಮಾಡುವುದಾಗಿ ತಿಳಿಸಿದರು. ಅಂತೆಯೇ ತಮ್ಮ ಪದೋನ್ನತಿಗೆ ಕೃತಜ್ಞತೆ ಸಲ್ಲಿಸಿದರು.

ಮೂವರು ನೂತನ ನ್ಯಾಯಮೂರ್ತಿಗಳ ನೇಮಕದಿಂದಾಗಿ ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿಗಳ ಸಂಖ್ಯೆ 48ಕ್ಕೆ ಏರಿದಂತಾಗಿದೆ. ಬೆಂಗಳೂರಿನ ಪ್ರಧಾನ, ಧಾರವಾಡ ಮತ್ತು ಕಲಬುರಗಿ ಪೀಠಗಳೂ ಸೇರಿದಂತೆ ಕರ್ನಾಟಕ ಹೈಕೋರ್ಟ್‌ನ ಒಟ್ಟು ನ್ಯಾಯಮೂರ್ತಿಗಳ ಮಂಜೂರಾತಿ ಸಂಖ್ಯೆ 62.

ಬೆಂಗಳೂರು ವಕೀಲರ ಸಂಘದ (ಎಎಬಿ) ವತಿಯಿಂದಲೂ ಹೈಕೋರ್ಟ್‌ನ ವಕೀಲರ ಸಂಘದ ಹಾಲ್‌ನಲ್ಲಿ ಮೂವರೂ ನೂತನ ನ್ಯಾಯಮೂರ್ತಿಗಳನ್ನು ಸ್ವಾಗತಿಸಲಾಯಿತು.

ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ.ಅರವಿಂದ ಕಾಮತ್, ಸಂಘದ ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ, ಪ್ರಧಾನ ಕಾರ್ಯದರ್ಶಿ ಎಚ್.ವಿ.ಪ್ರವೀಣ್ ಗೌಡ, ಉಪಾಧ್ಯಕ್ಷ ಸಿ.ಎಸ್.ಗಿರೀಶ್ ಕುಮಾರ್, ಖಜಾಂಚಿ ಶ್ವೇತಾ ರವಿಶಂಕರ್ ಮತ್ತು ಹೈಕೋರ್ಟ್ ಘಟಕದ ಪದಾಧಿಕಾರಿಗಳಾದ ಎಂ.ಚಾಮರಾಜ, ಆತ್ಮ ವಿ.ಹಿರೇಮಠ ಸೇರಿದಂತೆ ಹಲವು ವಕೀಲರು ಇದ್ದರು.

ರಾಜಾನುಕುಂಟೆ–ಬೆಟ್ಟ ಹಲಸೂರು ಮಾರ್ಗಕ್ಕೆ ಆಕ್ಷೇಪ

ರೈಲ್ವೆ ಮಾರ್ಗಕ್ಕೆ ಗ್ರಾಮಸ್ಥರ ವಿರೋಧ

ಪ್ರಜಾವಾಣಿ ವಾರ್ತೆ

ಯಲಹಂಕ: ನೈರುತ್ಯ ರೈಲ್ವೆ ನಿರ್ಮಿಸಲು ಉದ್ದೇಶಿಸಿರುವ ರಾಜಾನುಕುಂಟೆ-ಬೆಟ್ಟಹಲಸೂರು ಹೊಸ ರೈಲು ಮಾರ್ಗವನ್ನು ವಿರೋಧಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ನೇತೃತ್ವದಲ್ಲಿ ಬೆಟ್ಟಹಲಸೂರು ಸಮೀಪದ ಜೋಮಲಕುಂಟೆ ಬಳಿ ರೈತರು ಹಾಗೂ ಗ್ರಾಮಸ್ಥರು ಪ್ರತಿಭಟನೆ ನಡೆಸಿದರು.

ಯೋಜನೆ ಅವೈಜ್ಞಾನಿಕವಾಗಿದ್ದು, ಇದರಿಂದ ಪರಿಸರ ಹಾನಿಯ ಜೊತೆಗೆ ಸಾವಿರಾರು ಸಣ್ಣ ಮತ್ತು ಅತಿಸಣ್ಣ ರೈತರ ಬದುಕು ಸಂಕಷ್ಟಕ್ಕೆ ಸಿಲುಕಲಿದೆ. ಯೋಜನೆಯನ್ನು ತಕ್ಷಣ ಕೈಬಿಡಬೇಕು ಎಂದು ಪ್ರತಿಭಟನಕಾರರು ಆಗ್ರಹಿಸಿದರು.

‘ರಾಜಾನುಕುಂಟೆಯಿಂದ ಬೆಟ್ಟಹಲಸೂರುವರೆಗೆ 6.14 ಕಿ.ಮೀ ಉದ್ದದ ಹೊಸ ರೈಲು ಮಾರ್ಗವು ಸಿಂಗನಾಯಕನಹಳ್ಳಿಯ ಅಮಾನಿ ಕೆರೆ, ನಾಗದಾಸನಹಳ್ಳಿ ಮತ್ತು ಹೊನ್ನೇನಹಳ್ಳಿ ಕೆರೆಗಳೂ ಸೇರಿದಂತೆ ಬೆಟ್ಟಹಲಸೂರು ಗ್ರಾಮದ ಸರ್ವೆ ನಂ. 259ರಲ್ಲಿ ಉದ್ಯಾನಕ್ಕೆ ಮೀಸಲಿಟ್ಟಿರುವ ಜಮೀನಿನ ಮೂಲಕ ಹಾದು ಹೋಗಲಿದೆ. ಇದರಿಂದ 200 ವರ್ಷಗಳಿಗೂ ಹಳೆಯ ಹಲವಾರು ಮರಗಳನ್ನು ತೆರವುಗೊಳಿಸುವ ಪರಿಸ್ಥಿತಿ ನಿರ್ಮಾಣವಾಗಲಿದೆ. ಈ ಯೋಜನೆಯಿಂದ ಪರಿಸರ ಸಮತೋಲನಕ್ಕೆ ಧಕ್ಕೆಯಾಗುವುದರ ಜೊತೆಗೆ ಕೃಷಿ ಭೂಮಿಯೂ ನಾಶವಾಗಲಿದೆ. ಇದರಿಂದ ರೈತರು, ಪ್ರಾಣಿ, ಪಕ್ಷಿ, ವೃಕ್ಷ ಸಂಪತ್ತಿಗೆ ಹಾನಿಯಾಗಲಿದೆ ಎಂದು ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ರಾಜ್ಯ ಕಾರ್ಯದರ್ಶಿ ಬಿ.ಜಿ. ನಂಜುಂಡಪ್ಪ ದೂರಿದರು.



ರಾಜಾನುಕುಂಟೆ –ಬೆಟ್ಟಹಲಸೂರು ರೈಲು ಮಾರ್ಗ ಯೋಜನೆಯನ್ನು ಕೈಬಿಡಬೇಕು ಎಂದು ಆಗ್ರಹಿಸಿ, ಬೆಟ್ಟಹಲಸೂರು ಸಮೀಪದ ಜೋಮಲಕುಂಟೆ ಬಳಿ ರೈತ ಮುಖಂಡರು ಪ್ರತಿಭಟನೆ ನಡೆಸಿದರು

ಬೆಟ್ಟಹಲಸೂರು, ತಿಮ್ಮಸಂದ್ರ ಹಾಗೂ ರಾಜಾನುಕುಂಟೆ ಗ್ರಾಮಗಳ ರೈತರು ಮತ್ತು ಗ್ರಾಮಸ್ಥರು ಈ ಯೋಜನೆಗೆ ಆರಂಭದಿಂದಲೂ ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ರೈಲ್ವೆ ಇಲಾಖೆ, ಕಂದಾಯ ಇಲಾಖೆ ಹಾಗೂ ಸಂಬಂಧಪಟ್ಟ ಸಚಿವರಿಗೆ ಹಲವು ಬಾರಿ ಮನವಿ ಸಲ್ಲಿಸಿದ್ದಾರೆ. ಈ ಕುರಿತು ಉಪವಿಭಾಗಾಧಿಕಾರಿಗಳ ಕಚೇರಿಯಲ್ಲಿ ನಡೆದ ಸಭೆಯಲ್ಲಿಯೂ ವಿರೋಧ ವ್ಯಕ್ತಪಡಿಸಲಾಗಿತ್ತು. ಅದರ ನಡಾವಳಿಯನ್ನು ಸಂಬಂಧಪಟ್ಟ ಇಲಾಖೆಗೆ ರವಾನಿಸಲಾಗಿದೆ ಎಂದು ಹೇಳಿದರು.

ಈ ಯೋಜನೆಯನ್ನು ಕೈಬಿಟ್ಟು, 2013ರಲ್ಲಿ ಪ್ರಸ್ತಾಪಿಸಲಾಗಿದ್ದ ಗೌರಿಬಿದನೂರು-ಚಿಕ್ಕಬಳ್ಳಾಪುರ ಹಾಗೂ ಪುಟ್ಟಪರ್ತಿ-ಚಿಕ್ಕಬಳ್ಳಾಪುರ ರೈಲು ಮಾರ್ಗ ಯೋಜನೆಗಳನ್ನು ಜಾರಿಗೆ ತರಬೇಕು ಎಂದು ಒತ್ತಾಯಿಸಿದರು.

ಒಂದುವೇಳೆ ರೈಲ್ವೆ ಇಲಾಖೆ ಹಾಗೂ ಸಂಬಂಧಪಟ್ಟ ಅಧಿಕಾರಿಗಳು ರೈತರ ಮನವಿಗೆ ಸ್ಪಂದಿಸದೆ ಒತ್ತಾಯವಾಗಿ ಯೋಜನೆ ಜಾರಿಗೊಳಿಸಲು ಮುಂದಾದರೆ, ಮುಂದಿನ ದಿನಗಳಲ್ಲಿ ಈ ಭಾಗದ ಎಲ್ಲ ರೈತರೂ ಒಗ್ಗೂಡುವ ಮೂಲಕ ಉಗ್ರ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ರೈತ ಮುಖಂಡರಾದ ಬಿ.ಎಂ. ಶ್ರೀನಿವಾಸಮೂರ್ತಿ, ಟಿ.ಪಿ. ಪ್ರಕಾಶ್, ಜೇರಿಗೆ ಬಾಬು, ಅಂಬರೀಶ್, ಸನತ್ ಕುಮಾರ್, ಶ್ರೇಯಸ್, ಬಿ.ಎನ್. ನಾಗರಾಜು, ಕಾಟಪ್ಪ ಭಾಗವಹಿಸಿದ್ದರು.

ಕ್ರಿಕೆಟ್ ಪಂದ್ಯ ಕಿತ್ತುಕೊಳ್ಳದಂತೆ ಕ್ರಮ– ಡಿಕೆಶಿ

ಬೆಂಗಳೂರು: ‘ಐಪಿಎಲ್ ಕ್ರಿಕೆಟ್ ಅಂತಿಮ ಪಂದ್ಯ ಬೆಂಗಳೂರಿನಲ್ಲಿ ನಡೆಯಬೇಕಿತ್ತು. ನಾವು ಅದಕ್ಕೆ ಅನುಮತಿ ನೀಡಿದ್ದೆವು. ಆದರೆ, ಗುಜರಾತಿನವರು ತಮ್ಮ ಪ್ರಭಾವ ಬಳಸಿ ನಮ್ಮಿಂದ ಪಂದ್ಯ ಕಿತ್ತುಕೊಂಡಿದ್ದಾರೆ’ ಎಂದು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಡಿ.ಕೆ. ಶಿವಕುಮಾರ್ ಆರೋಪಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಮುಂದೆ ಮತ್ತೆ ಈ ರೀತಿ ಕಿತ್ತುಕೊಳ್ಳದಂತೆ ಅಗತ್ಯ ಸಿದ್ಧತೆ ಮಾಡುತ್ತಿದ್ದೇವೆ. ಅದಕ್ಕೆ ಸ್ವಲ್ಪ ಸಮಯ ಬೇಕಾಗುತ್ತದೆ’ ಎಂದರು.

‘ನಮ್ಮ ಕ್ರೀಡಾಪ್ರೇಮಿಗಳಿಗೆ ಅನ್ಯಾಯ ಆಗಿರಬಹುದು. ನಮ್ಮ ರಾಜ್ಯದ ಹೆಸರಿನಲ್ಲಿ ಪ್ರತಿನಿಧಿಸುವ ತಂಡ ಉತ್ತಮವಾಗಿ ಆಡಿ ಗೆದ್ದಿದೆ. ನಮ್ಮೆಲ್ಲರಿಗೂ ಹೆಮ್ಮೆ ತಂದಿದೆ. ಕರ್ನಾಟಕ ರಾಜ್ಯದ ಜನರ ಪರವಾಗಿ ಆರ್‌ಸಿಬಿ ತಂಡವನ್ನು ಅಭಿನಂದಿಸುತ್ತೇನೆ’ ಎಂದೂ ಹೇಳಿದರು.

ಸ್ವಯಂ ಪ್ರಕಾಶ ಸಚ್ಚಿದಾನಂದ ಶ್ರೀ ಅಭಿಪ್ರಾಯ

‘ರಾಜಕಾರಣಿಗಳ ಸ್ವಾರ್ಥ: ಸಮಾಜ ಹೋಳು’

ಪ್ರಜಾವಾಣಿ ವಾರ್ತೆ

ನೆಲಮಂಗಲ: ‘ಕಮಲ ಮತ್ತು ಕಪ್ಪೆ ಎರಡೂ ಕೆಸರಿನಲ್ಲಿಯೇ ಜನಿಸಿದರೂ ಕಮಲ ಶ್ರೀಕಮಲವನ್ನು ಸೇರುವುದು. ಸದ್ದು ಮಾಡುವ ಕಪ್ಪೆ ಕೆಸರಿನಲ್ಲಿಯೇ ಮಡಿಯುವುದು. ಕೆಸರಿಗೆ ಅಂಟಿಕೊಳ್ಳದ ಕಮಲದಂತೆ ಪೂರ್ಣಾನಂದ ಶ್ರೀ ಧರ್ಮಕ್ಕಾಗಿ ಸಮಾಜಕ್ಕಾಗಿ ತಮ್ಮನ್ನು ಸಮರ್ಪಿಸಿಕೊಂಡಿದ್ದಾರೆ’ ಎಂದು ಸ್ವಯಂ ಪ್ರಕಾಶ ಸಚ್ಚಿದಾನಂದ ಶ್ರೀ ಹೇಳಿದರು.

ನಗರೂರಿನ ತೈಲೇಶ್ವರ ಗಾಣಿಗರ ಮಹಾ ಸಂಸ್ಥಾನ ಮಠದಲ್ಲಿ ಪೀಠದ 5ನೇ ವಾರ್ಷಿಕೋತ್ಸವ, ಅನ್ನದಾಸೋಹ ಕಟ್ಟಡಕ್ಕೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು, ‘ರಾಜಕಾರಣಿಗಳು ಸ್ವಾರ್ಥಕ್ಕಾಗಿ, ಸಮಾಜವನ್ನು ಒಡೆದು ಆಳುವುದಕ್ಕಾಗಿ, ಹಿಂದುಳಿದವರು -ಮುಂದುವರಿದವರು ಎಂಬ ಕಂದಕ ಸೃಷ್ಟಿ ಮಾಡಿದ್ದಾರೆ’ ಎಂದರು.

ಸಮಾರಂಭದಲ್ಲಿ ಸ್ವಯಂಪ್ರಕಾಶ ಶ್ರೀ ಮಾತನಾಡಿದರು. ವನಕಲ್ಲು ಮಠದ ಬಸವರಮಾನಂದ ಶ್ರೀ, ತೈಲೇಶ್ವರ ಗಾಣಿಗ ಸಂಸ್ಥಾನದ ಪೂರ್ಣಾನಂದ ಶ್ರೀ ಉಪಸ್ಥಿತರಿದ್ದರು

‘ಸಿದ್ದರಾಮಯ್ಯ ಅವರು ಕೊನೆಯ ಕ್ಷಣಗಳಲ್ಲಿ ಜಾತಿಗಣತಿಯನ್ನು ಸ್ವೀಕರಿಸಿ ಮುಂದಿನ ಸರ್ಕಾರವನ್ನು ಬಲಿಪಶುವಾಗಿಸಿದ್ದಾರೆ. ವೈಜ್ಞಾನಿಕ ವಲ್ಲದ ಇದನ್ನು ಯಾವುದೇ ಕಾರಣಕ್ಕೂ ಅನುಷ್ಠಾನ ಮಾಡಲು ಸಾಧ್ಯವಿಲ್ಲ. ದೇವರಾಜ ಅರಸು ಅವರಂತೆ ಗಣತಿಯಲ್ಲಿ ಕ್ರಮ ಅನುಸರಿಸಿಲ್ಲ. ಕೇವಲ ಸ್ವಜಾತಿ ಪ್ರೇಮದಿಂದ ಗಾಣಿಗ, ಮಡಿವಾಳ, ಸವಿತಾ ಹಾಗೂ ಸಣ್ಣಪುಟ್ಟ ಸಮುದಾಯಗಳಿಗೆ ಅನ್ಯಾಯವಾಗಲಿದೆ’ ಎಂದರು.

ಕೈಲಾಸ ಆಶ್ರಮದ ಜಯೇಂದ್ರಪುರಿ ಶ್ರೀ, ವನಕಲ್ಲು ಮಠದ ಬಸವರಮಾನಂದ ಶ್ರೀ, ಒಕ್ಕಲಿಗರ ಮಹಾಸಂಸ್ಥಾನ ಮಠದ ನಿಶ್ಚಲಾನಂದನಾಥ ಶ್ರೀ, ದಮ್ಮೂರು ಗೋವರ್ಧನ ನಂದಪುರಿ, ಕ್ಷತ್ರಿಯ ದಿವ್ಯಜ್ಞಾನಾನಂದಗಿರಿ, ತಿಗಳ ಪ್ರಣವಾನಂದ ಶ್ರೀ ಸಾನ್ನಿಧ್ಯ ವಹಿಸಿದ್ದರು.

ಗಾಣಿಗರ ಹಬ್ಬದ ಪ್ರಯುಕ್ತ ರಿಯಾಯಿತಿ ದರದಲ್ಲಿ ಸೀರೆ ಮಾರಾಟ, ಕ್ರೀಡಾಸ್ಪರ್ಧೆ, ಪ್ರತಿಭಾ ಪುರಸ್ಕಾರ, ವಧುವರರ ಅನ್ವೇಷಣೆ, ಉಚಿತ ಆರೋಗ್ಯ ಶಿಬಿರ, ಕನ್ನಡಕ ವಿತರಣೆ ನಡೆಯಿತು.

ಅಂಗವಿಕಲರ ಗಾಲ್ಫ್ ಟೂರ್ನಿ ಇಂದಿನಿಂದ

ಬೆಂಗಳೂರು: ಇಲ್ಲಿನ ಬೆಂಗಳೂರು ಗಾಲ್ಫ್ ಕ್ಲಬ್‌ನಲ್ಲಿ ಅಂಗವಿಕಲರಿಗಾಗಿ ಮೊದಲ ಆವೃತ್ತಿಯ ‘ಅಡಾಪ್ಟಿವ್ ಗಾಲ್ಫ್ ಓಪನ್’ ಟೂರ್ನಿಯನ್ನು ಇದೇ 2 ಮತ್ತು 3ರಂದು ಆಯೋಜಿಸಲಾಗಿದೆ.

ಅಡಾಪ್ಟಿವ್ ಗಾಲ್ಫ್ ಅಲೈಯನ್ಸ್ ಫೌಂಡೇಷನ್‌ನ ಸಹಯೋಗದೊಂದಿಗೆ ನಡೆಯುವ ಈ ಟೂರ್ನಿಯಲ್ಲಿ ವಿವಿಧ ಅಂಗವೈಕಲ್ಯ ಹೊಂದಿರುವ 19 ಆಟಗಾರರು ನಿಯಮಿತ ಸ್ವರೂಪಗಳಲ್ಲಿ ಮತ್ತು ಗಾಲ್ಫ್ ಆಟಗಾರರು ಮೋಜಿನ ಸ್ವರೂಪದ ಸ್ಪರ್ಧೆಗಳಲ್ಲಿ ಭಾಗವಹಿಸಲಿದ್ದಾರೆ.

‘150 ವರ್ಷಗಳ ಇತಿಹಾಸವನ್ನು ಹೊಂದಿರುವ ಬೆಂಗಳೂರು ಗಾಲ್ಫ್ ಕ್ಲಬ್‌ನಲ್ಲಿ ದೇಶದಲ್ಲೇ ಮೊದಲ ಬಾರಿಗೆ ಅಂಗವಿಕಲರಿಗಾಗಿ ಟೂರ್ನಿಯನ್ನು ನಡೆಸಲಾಗುತ್ತಿದೆ. ಈ ಪ್ರಯತ್ನವು ಕ್ಲಬ್‌ನ ಸಾಮಾಜಿಕ ಸಂಪರ್ಕದ ಭಾಗವಾಗಿದೆ ಮತ್ತು ಎಲ್ಲರ ಒಳಗೊಳ್ಳುವಿಕೆಯನ್ನು ಉತ್ತೇಜಿಸುತ್ತದೆ’ ಎಂದು ಕ್ಲಬ್‌ನ ಕ್ಯಾಪ್ಟನ್ ರವಿಕುಮಾರ್ ರಾಜು ತಿಳಿಸಿದ್ದಾರೆ.

ಬಿರುಗಾಳಿ ಮಳೆ

ಚನ್ನಪಟ್ಟಣ: ನಗರದಲ್ಲಿ ಭಾನುವಾರ ಸಂಜೆ ಬಿರುಗಾಳಿ ಸಹಿತ ಭಾರಿ ಮಳೆ ಸುರಿದಿದೆ.

ಬಿರುಗಾಳಿಯ ಅಬ್ಬರಕ್ಕೆ ವಿದ್ಯುತ್ ಪರಿವರ್ತಕದ ಪಕ್ಕದಲ್ಲಿದ್ದ ಮರವೊಂದು ವಿದ್ಯುತ್ ತಂತಿಗಳ ಮೇಲೆ ಬಿದ್ದಿದೆ. ಬಿದ್ದ ರಭಸಕ್ಕೆ ಸನಿಹದಲ್ಲೇ ಇದ್ದ ಟಿ.ಸಿ ಧರಾಶಾಹಿಯಾಗಿದೆ. ತಾಲ್ಲೂಕಿನ ವಿವಿಧೆಡೆಯೂ ಉತ್ತಮ ಮಳೆಯಾಗಿದೆ.

'ಕೈ' ವಿರುದ್ಧ ಬಿಜೆಪಿ ಟೀಕಾಪ್ರಹಾರ

ಮುಸ್ಲಿಮರ ಮೇಲಿನ ಪ್ರಕರಣ ಹಿಂಪಡೆದ ರಾಜ್ಯ ಸರ್ಕಾರದ ವಿರುದ್ಧ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಬಿ.ವೈ.ವಿಜಯೇಂದ್ರ ನೇತೃತ್ವದಲ್ಲಿ ಪ್ರತಿಭಟನೆ
- ಕಾಂಗ್ರೆಸ್ ವಿರುದ್ಧ ಘೋಷಣೆ ಕೂಗಿದ ಪ್ರತಿಭಟನಕಾರರು

ಕಲಬುರಗಿ: 2022ರಲ್ಲಿ ಆಳಂದದ ಲಾಡ್ಲೆ ಮಶಾಕ್ ದರ್ಗಾ ಆವರಣದಲ್ಲಿ ನಡೆದ ಗಲಭೆಗೆ ಸಂಬಂಧಿಸಿದಂತೆ ಮುಸ್ಲಿಮರ ಮೇಲಿನ ಪ್ರಕರಣಗಳನ್ನು ಹಿಂಪಡೆದ ರಾಜ್ಯ ಕಾಂಗ್ರೆಸ್ ಸರ್ಕಾರದ ನಿರ್ಧಾರ ಖಂಡಿಸಿ ಬಿಜೆಪಿ ನಗರದಲ್ಲಿ ಸೋಮವಾರ ಬೃಹತ್ ಪ್ರತಿಭಟನೆ ನಡೆಸಿತು.

ನಗರದ ಸರ್ದಾರ್ ವಲ್ಲಭಭಾಯಿ ಪಟೇಲ್ ವೃತ್ತದಲ್ಲಿ ಜಮಾಯಿಸಿದ ಸಾವಿರಾರು ಬಿಜೆಪಿ ಕಾರ್ಯಕರ್ತರು, ಬಿರು ಬಿಸಿಲಿನಲ್ಲೂ ತಮಟೆ ಬಾರಿಸುತ್ತ, ಕಾಂಗ್ರೆಸ್ ವಿರುದ್ಧ ಘೋಷಣೆ ಕೂಗುತ್ತ ಜಿಲ್ಲಾಧಿಕಾರಿ ಕಚೇರಿ ತನಕ ಪ್ರತಿಭಟನಾ ಮೆರವಣಿಗೆ ನಡೆಸಿದರು.

ಈ ವೇಳೆ ಮಾತನಾಡಿದ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, 'ಹಿಂದೂ ವಿರೋಧಿಗಳ ಕೃತ್ಯ ಎಸಗಿದ ದೇಶದ್ರೋಹಿಗಳ ವಿರುದ್ಧದ ಪ್ರಕರಣಗಳನ್ನು ಹಿಂಪಡೆಯಲು ಲಜ್ಜೆಗೆಟ್ಟ ಕಾಂಗ್ರೆಸ್ ಸರ್ಕಾರ ನಿರ್ಧರಿಸಿದೆ. ಇದೊಂದು ದುಸ್ಸಾಹಸ. ಎಲ್ಲಿಯ ತನಕ ಈ ಹಿಂದೂ ವಿರೋಧಿ ಕಾಂಗ್ರೆಸ್ ಸರ್ಕಾರವನ್ನು ಬುಡಸಮೇತ ಕಿತ್ತು ಹಾಕುವುದಿಲ್ಲವೋ ಅಲ್ಲಿಯವರೆಗೂ ನಾವು ವಿರಮಿಸುವುದಿಲ್ಲ' ಎಂದು ಗುಡುಗಿದರು.

'ರಾಜ್ಯದಲ್ಲಿ ಎಲ್ಲೇ ಹಿಂದೂಗಳ ವಿರುದ್ಧ ಸುಳ್ಳು ಪ್ರಕರಣ ಹಾಕಿದರೆ, ಹಾಲಿ–ಮಾಜಿ ಶಾಸಕರು–ಸಂಸದರೊಂದಿಗೆ ಪೊಲೀಸ್ ಠಾಣೆಗಳಿಗೆ ಘೇರಾವ್ ಹಾಕಿ ಧರಣಿ ಕೂಡಿಸುವಂತೆ ಎಲ್ಲ ಜಿಲ್ಲೆಗಳ ಪಕ್ಷದ ಅಧ್ಯಕ್ಷರಿಗೆ ಸೂಚಿಸಿದ್ದೇನೆ. ರಾಜ್ಯದಲ್ಲಿ ಯಾವುದೇ ಕ್ಷಣದಲ್ಲಿ ಚುನಾವಣೆ ನಡೆದರೂ ಬಿಜೆಪಿಗೆ ಅಭೂತಪೂರ್ವ ಗೆಲುವು ಸಿಗಲಿದೆ. ಅಧಿಕಾರಕ್ಕೆ ಬಂದ 24 ಗಂಟೆಗಳಲ್ಲಿ ರಾಜ್ಯದಲ್ಲಿ ಹಿಂದುತ್ವ ಪರ ಕಾರ್ಯಕರ್ತರ ವಿರುದ್ಧ ದಾಖಲಾದ ಸುಳ್ಳು ಮೊಕದ್ದಮೆಗಳನ್ನು ನಮ್ಮ ಸರ್ಕಾರ ಹಿಂಪಡೆಯಲಿದೆ' ಎಂದು ಆಶ್ವಾಸನೆ ನೀಡಿದರು.

'ಮುಂದಿನ ಚುನಾವಣೆಯಲ್ಲಿ ಆಳಂದದಲ್ಲಿ ಕಾಂಗ್ರೆಸ್ ಸೋಲು ನಿಶ್ಚಿತ. ರಾಹುಲ್ ಗಾಂಧಿ, ಮುಖ್ಯಮಂತ್ರಿ ಸೇರಿದಂತೆ ಯಾವ ಶಕ್ತಿಗಳು ಬಂದು ಕುಳಿತರೂ ಮುಂದಿನ ಚುನಾವಣೆಯಲ್ಲಿ ಆಳಂದದಲ್ಲಿ ಕಮಲ ಅರಳಿಸುತ್ತೇವೆ' ಎಂದು ಅವರು 2028ರ ವಿಧಾನಸಭಾ ಚುನಾವಣೆಗೆ ರಣಕಹಳೆ ಮೊಳಗಿದರು.

'2028ರ ವಿಧಾನಸಭೆ ಚುನಾವಣೆಯಲ್ಲಿ ಹಿಂದುತ್ವ ಪರ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರಲಿದ್ದು, ಆಳಂದದಲ್ಲಿ ಮತ್ತೊಮ್ಮೆ ರಾಘವಚೈತನ್ಯ ಶಿವಲಿಂಗಕ್ಕೆ ನಿತ್ಯ ಪೂಜೆಗಳು ಆರಂಭವಾಗಲಿವೆ' ಎಂದು ಭರವಸೆ ನೀಡಿದರು.

ಕಲಬುರಗಿಯ ಎಸ್‌ವಿಪಿ ವೃತ್ತದಿಂದ ಜಿಲ್ಲಾಧಿಕಾರಿ ಕಚೇರಿ ತನಕ ಬಿ.ವೈ. ವಿಜಯೇಂದ್ರ ನೇತೃತ್ವದಲ್ಲಿ ಪಕ್ಷದ ಕಾರ್ಯಕರ್ತರು ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ಸೋಮವಾರ ಪ್ರತಿಭಟನಾ ಮೆರವಣಿಗೆ ನಡೆಸಿದರು –ಪ್ರಜಾವಾಣಿ ಚಿತ್ರ

ರಾಜ್ಯಸಭೆ, ಮೇಲ್ಮನೆ ಚುನಾವಣೆ: ಅಧಿಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದಿಂದ ಆಯ್ಕೆಯಾಗಬೇಕಿರುವ ರಾಜ್ಯಸಭೆಯ ನಾಲ್ಕು ಸ್ಥಾನಗಳು ಹಾಗೂ ವಿಧಾನ ಪರಿಷತ್ತಿನ ಏಳು ಸದಸ್ಯರ ಸ್ಥಾನಗಳಿಗೆ ಜೂನ್ 18 ರಂದು ಚುನಾವಣೆ ನಡೆಸಲು ಸೋಮವಾರ ಅಧಿಸೂಚನೆ ಹೊರಡಿಸಲಾಗಿದೆ.

ಈ ಚುನಾವಣೆಯಲ್ಲಿ ವಿಧಾನಸಭೆಯ ಸದಸ್ಯರು ಮತದಾರರಾಗಿದ್ದು, ರಾಜ್ಯಸಭೆ ಹಾಗೂ ಪರಿಷತ್ತಿನ ಸದಸ್ಯರನ್ನು ಆಯ್ಕೆ ಮಾಡಬೇಕಾಗಿದೆ.

ನಾಮಪತ್ರ ಸಲ್ಲಿಸಲು ಜೂನ್ 8 ಕೊನೆ ದಿನ. ನಾಮಪತ್ರಗಳ ಪರಿಶೀಲನೆ 9ಕ್ಕೆ ನಡೆಯಲಿದ್ದು, ನಾಮಪತ್ರ ಹಿಂದಕ್ಕೆ ಪಡೆಯಲು 10 ಕೊನೆ ದಿನ. ಜೂನ್ 18ರ ಸಂಜೆ 5ಕ್ಕೆ ಮತದಾನ ಮುಗಿದ ನಂತರ ಮತ ಎಣಿಕೆ ನಡೆಯಲಿದೆ ಎಂದು ಚುನಾವಣಾಧಿಕಾರಿಯೂ ಆಗಿರುವ ಎಂ.ಕೆ. ವಿಶಾಲಾಕ್ಷಿ ಹೇಳಿದ್ದಾರೆ. ರಾಜ್ಯಸಭೆಯಲ್ಲಿ ಕರ್ನಾಟಕವನ್ನು ಪ್ರತಿನಿಧಿಸುತ್ತಿರುವ ಎಚ್.ಡಿ. ದೇವೇಗೌಡ, ಮಲ್ಲಿಕಾರ್ಜುನ ಖರ್ಗೆ, ನಾರಾಯಣ, ಈರಣ್ಣ ಕಡಾಡಿ ಸದಸ್ಯತ್ವದ ಅವಧಿ ಮುಕ್ತಾಯವಾಗಲಿದೆ. ಪರಿಷತ್ತಿನಲ್ಲಿ ಗೋವಿಂದರಾಜ್, ನಸೀರ್ ಅಹಮದ್, ಎಂ.ಟಿ.ಬಿ. ನಾಗರಾಜ್, ಪ್ರತಾಪ ಸಿಂಹ ನಾಯಕ್, ತಿಪ್ಪಣ್ಣಪ್ಪ ಕಮಕನೂರ, ಸುನಿಲ್ ವಲ್ಯಾಪುರೆ, ಬಿ.ಕೆ. ಹರಿಪ್ರಸಾದ್ ಅವರ ಸದಸ್ಯತ್ವದ ಅವಧಿ ಕೊನೆಗೊಳ್ಳಲಿದೆ.

ಹೊಣೆ ನಿರ್ಧರಿಸಲಿದೆ ಪಕ್ಷದ ಹೈಕಮಾಂಡ್: ಖಾದರ್

ಮಂಗಳೂರು: 'ಸಾಮಾಜಿಕ ಜಾಲತಾಣ ನೋಡಿ ಯಾರೂ ಅಧಿಕಾರ ನೀಡುವುದಿಲ್ಲ. ಕಾರ್ಯನಿರ್ವಹಣೆಯನ್ನು ನೋಡಿ ಅಧಿಕಾರ ಕೊಡುತ್ತಾರೆ. ನನಗೆ ಯಾವ ಹುದ್ದೆ ನೀಡಬೇಕು ಎಂಬುದನ್ನು ಪಕ್ಷದ ಹೈಕಮಾಂಡ್ ತೀರ್ಮಾನ ಮಾಡಲಿದೆ' ಎಂದು ವಿಧಾನ ಸಭಾಧ್ಯಕ್ಷ ಯು.ಟಿ.ಖಾದರ್ ಹೇಳಿದರು.

ಉಪಮುಖ್ಯಮಂತ್ರಿ ಹುದ್ದೆಗೆ ತಮ್ಮ ಹೆಸರು ಹರಿದಾಡಿದ ಕುರಿತು ಇಲ್ಲಿ ಸುದ್ದಿಗಾರರಿಗೆ ಸೋಮವಾರ ಪ್ರತಿಕ್ರಿಯಿಸಿದ ಅವರು, 'ನನಗೆ ಆ ವಿಚಾರ ಗೊತ್ತಿಲ್ಲ. ಸದ್ಯಕ್ಕೆ ನಾನು ವಿಧಾನ ಸಭಾಧ್ಯಕ್ಷನಾಗಿದ್ದೇನೆ' ಎಂದರು.

'ಪಕ್ಷ ನನ್ನ ಮೇಲೆ ವಿಶ್ವಾಸ ಇಟ್ಟು ನೀಡಿದ ವಿಧಾನಸಭಾಧ್ಯಕ್ಷ ಹುದ್ದೆಯನ್ನು ಸಮರ್ಥವಾಗಿ ನಿಭಾಯಿಸಿದ್ದೇನೆ. ಇನ್ನು ಮುಂದೆ ಏನು ತೀರ್ಮಾನ ಮಾಡುತ್ತಾರೋ ಗೊತ್ತಿಲ್ಲ. ನಾನು ಯಾವತ್ತೂ ಹೈಕಮಾಂಡ್ ಮಾತು ಮೀರಿದವನಲ್ಲ. ನಮ್ಮೆಲ್ಲ ಹಿತಾಸಕ್ತಿಗಿಂತ ಪಕ್ಷ ಮುಖ್ಯ. ಅದಕ್ಕಿಂತ ಮೊದಲು ನಮಗೆ ದೇಶ ಮುಖ್ಯ. ಸದ್ಯಕ್ಕೆ ನನಗೆ ಪಕ್ಷ ಇಲ್ಲ' ಎಂದರು.

'ನಾನಂತೂ ಯಾವುದೇ ಹುದ್ದೆ ಕೇಳಿಲ್ಲ. ಮುಖ್ಯಮಂತ್ರಿಯವರನ್ನು ಭೇಟಿಯಾಗಿ ಮೂರು ವರ್ಷ ವಿಧಾನ ಸಭಾಧ್ಯಕ್ಷನಾಗಿ ಕಾರ್ಯನಿರ್ವಹಿಸಲು ಅವಕಾಶ ಕೊಟ್ಟಿದ್ದಕ್ಕೆ ಧನ್ಯವಾದ ಸಲ್ಲಿಸಿದ್ದೇನೆ" ಎಂದು ಹೇಳಿದರು.

TUNGABHADRA BOARD: TB DAM

e-Procurement Short Term Tender Notice IFB Nos.12/2026-27 to 13/2026-27 Dt.30.05.2026, 35/2026-27, 46/2025-26, 51/2025-26 Dt.16.03.2026 (2nd Call) and 52/2025-26, 54/2025-26 Dt.18.03.2026 (2nd Call)

Tender for 07 Nos. of Works -in respect of HW & HLC Division TB Dam and LLC Division, Ballari under 'Works Category" are invited through • e-Procurement'.

Bid Document downloading Start Date & Time:	01.06.2026 at 11.00 AM
Bid Document downloading End Date & Time:	08.06.2026 at 3:00 PM
Bid Submission End Date & Time:	08.06.2026 at 5:30 PM
Date of opening of Commercial Stage: (for works costing below Rs.50.00 Lakhs)	08.06.2026 at 6:00 PM
Date of opening of PQ Stage: (for works costing above Rs.50.00 Lakhs)	08.06.2026 at 6:00 PM
Date of opening of Commercial Stage: (for works costing above Rs.50.00 Lakhs)	10.06.2026 at 11:00 AM

Further details can be seen @ https://tender.apeprocurement.gov.in

08394 - 259114
Email: seibtbb@yahoo.com

Sd/-
Superintending Engineer
IB., TB Board, TB Dam

ಜಂಗಮಶೆಟ್ಟಿ ರಂಗ ಪ್ರಶಸ್ತಿಗೆ ಅರ್ಜಿ

ಪ್ರಜಾವಾಣಿ ವಾರ್ತೆ

ಕಲಬುರಗಿ: ಇಲ್ಲಿನ ರಂಗ ಸಂಗಮ ಕಲಾ ವೇದಿಕೆಯಿಂದ ನೀಡುವ ಎಸ್.ಬಿ. ಜಂಗಮಶೆಟ್ಟಿ ಮತ್ತು ಸುಭದ್ರಾದೇವಿ ಜಂಗಮಶೆಟ್ಟಿ ರಂಗ ಪ್ರಶಸ್ತಿಗೆ ಕನ್ನಡ ರಂಗಭೂಮಿಯ ಅರ್ಹ ರಂಗ ಸಾಧಕರಿಂದ ಅರ್ಜಿ ಆಹ್ವಾನಿಸಲಾಗಿದೆ.

ಜಂಗಮಶೆಟ್ಟಿ ಜೋಡಿ ಪ್ರಶಸ್ತಿಯು ಒಬ್ಬ ಪುರುಷ ಮತ್ತು ಒಬ್ಬ ಮಹಿಳಾ ಕಲಾವಿದೆಗೆ ನೀಡಲಾಗುವುದು. ಪ್ರಶಸ್ತಿಯು ತಲಾ ₹10 ಸಾವಿರ ನಗದು ಒಳಗೊಂಡಿದೆ. ಜುಲೈ 19ರಂದು ಕಲಬುರಗಿಯಲ್ಲಿ ಪ್ರಶಸ್ತಿ ಪ್ರದಾನ ನಡೆಯಲಿದೆ ಎಂದು ರಂಗಸಂಗಮ ಕಲಾವೇದಿಕೆಯ ಅಧ್ಯಕ್ಷೆ ಶಿವಗೀತಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ 86602 59857 ಸಂಪರ್ಕಿಸಬಹುದು.

ಜೆಇಇ–ಅಡ್ವಾನ್ಸ್ಡ್: ಬಾಲಕರ ಮೇಲುಗೈ

ಒಂದನೇ ಪುಟದಿಂದ...

ಮಹಿಳಾ ಅಭ್ಯರ್ಥಿಗಳ ಪೈಕಿ ಐಐಟಿ ದೆಹಲಿ ವಲಯದ ಆರೋಹಿ ದೇಶಪಾಂಡೆ ಅಗ್ರ ಸ್ಥಾನದಲ್ಲಿದ್ದಾರೆ. 360ಕ್ಕೆ 280 ಅಂಕಗಳನ್ನು ಪಡೆದಿರುವ ಅವರು ಅಖಿಲ ಭಾರತ ರ‍್ಯಾಂಕ್ ಪಟ್ಟಿಯಲ್ಲಿ 77ನೇ ಸ್ಥಾನ ಗಳಿಸಿದ್ದಾರೆ.

ರೂರ್ಕಿಯ ಐಐಟಿ ಪ್ರಕಟಿಸಿರುವ ಫಲಿತಾಂಶದ ದತ್ತಾಂಶದ ಪ್ರಕಾರ 1,87,389 ಅಭ್ಯರ್ಥಿಗಳು ಪರೀಕ್ಷೆಗೆ ಹೆಸರು ನೋಂದಾಯಿಸಿದ್ದರು.

ಐಐಟಿ ಮದ್ರಾಸ್ ವಲಯದಿಂದ ಅತ್ಯಧಿಕ ಅಂದರೆ 14,294 ಅಭ್ಯರ್ಥಿಗಳು ಅರ್ಹತೆ ಪಡೆದಿದ್ದಾರೆ. ಎರಡು ಮತ್ತು ಮೂರನೇ ಸ್ಥಾನದಲ್ಲಿ ಕ್ರಮವಾಗಿ ಐಐಟಿ ಬಾಂಬೆ ವಲಯ (12,389) ಮತ್ತು ಐಐಟಿ ದೆಹಲಿ ವಲಯ (10,697) ಇವೆ.

ಸಾಮಾಜಿಕ ಮಾಧ್ಯಮದಿಂದ ದೂರವಿದ್ದದ್ದು ನೆರವಾಯಿತು: ಶುಭಂ

ಒಂದನೇ ಪುಟದಿಂದ...

360ಕ್ಕೆ 330 ಅಂಕಗಳನ್ನು ಪಡೆದಿರುವ ಶುಭಂ ಮತ್ತು 329 ಅಂಕಗಳನ್ನು ಪಡೆದಿರುವ ಕಬೀರ್ ಚಿಲ್ಲರ್ ಇಬ್ಬರೂ ಕೋಟಾದ ಅಲೆನ್ ಕೆರಿಯರ್ ಇನ್‌ಸ್ಟಿಟ್ಯೂಟ್‌ನಲ್ಲಿ ಕೋಚಿಂಗ್ ಪಡೆದವರು.

'ಎರಡು ವರ್ಷಗಳಿಂದ ಕಷ್ಟಪಟ್ಟು ಓದಿದ್ದರಿಂದ ಯಶಸ್ಸು ಸಿಕ್ಕಿದೆ. ನನ್ನ ಯಶಸ್ಸಿಗೆ ಪೋಷಕರು, ಕೋಟಾದಲ್ಲಿ ತರಬೇತಿ ನೀಡಿದ ಅಧ್ಯಾಪಕರು ನೆರವಾಗಿದ್ದಾರೆ' ಎಂದು 18 ವರ್ಷದ ಶುಭಂ ಪ್ರತಿಕ್ರಿಯಿಸಿದರು.

ಅವರು 11ನೇ ತರಗತಿಯಿಂದ ಕೋಟಾದಲ್ಲಿ ಕೋಚಿಂಗ್ ಪಡೆದಿದ್ದಾರೆ. ಶುಭಂ ಅವರ ತಂದೆ, ಬಿಹಾರದ ಗಯಾದಲ್ಲಿ ಹಾರ್ಡ್‌ವೇರ್ ಉದ್ಯಮಿಯಾಗಿರುವ ಶಿವಕುಮಾರ್, ತಾಯಿ ಗೃಹಿಣಿ ಕಾಂಚನ್ ದೇವಿ. ಕೋಟಾದಲ್ಲಿ ಕೆಲ ವಿದ್ಯಾರ್ಥಿಗಳ ಆತ್ಮಹತ್ಯೆ ಪ್ರಕರಣಗಳಿಗೆ ಸಂಬಂಧಿಸಿದಂತೆ ಬರುತ್ತಿದ್ದ ನಕಾರಾತ್ಮಕ ಸುದ್ದಿಗಳನ್ನು ಮತ್ತು ಸಾಮಾಜಿಕ ಮಾಧ್ಯಮವನ್ನು ಪೂರ್ಣವಾಗಿ ನಿರ್ಲಕ್ಷಿಸಿ ಕಠಿಣ ಅಭ್ಯಾಸ ಮಾಡಿದ್ದರಿಂದ ಉತ್ತಮ ಫಲಿತಾಂಶ ಬಂದಿದೆ ಎಂದು ಶುಭಂ ಹೇಳಿದ್ದಾರೆ.

ಆರ್ಯನ್ ರಾಜ್ಯಕ್ಕೆ ಮೊದಲಿಗ

ಒಂದನೇ ಪುಟದಿಂದ...

ಆರ್ಯನ್ ಅವರ ತಂದೆ, ತಾಯಿ ಹಾಗೂ ಅಣ್ಣ ಎಂಜಿನಿಯರ್‌ಗಳಾಗಿದ್ದು, ಮನು ಅವರ ತಂದೆ–ತಾಯಿಯೂ ಎಂಜಿನಿಯರ್ ವೃತ್ತಿಯಲ್ಲಿದ್ದಾರೆ. ಇಬ್ಬರೂ ಮುಂಬೈನ ಐಐಟಿಯಲ್ಲಿ ಕಂಪ್ಯೂಟರ್ ಸೈನ್ಸ್ ಎಂಜಿನಿಯರಿಂಗ್ (ಸಿಎಸ್‌ಇ) ವ್ಯಾಸಂಗ ಮಾಡುವ ಗುರಿ ಹೊಂದಿದ್ದಾರೆ.

ಜೆಇಇ ಪರೀಕ್ಷೆಯಲ್ಲಿ ಆರ್ಯನ್ ಹಾಗೂ ಮನು ಅವರು 360 ಅಂಕಗಳಿಗೆ 310 ಅಂಕಗಳನ್ನು ಪಡೆದಿದ್ದಾರೆ.

> ಪ್ರತಿದಿನ ಆರು ಗಂಟೆ ಅಧ್ಯಯನ ಮಾಡುತ್ತಿದ್ದೆ. ಆರೋಗ್ಯ ಕಾಪಾಡಿಕೊಳ್ಳಲು ಕ್ರಿಕೆಟ್ ಆಡುತ್ತಿದ್ದೆ. ಪ್ರವಾಸ ಮತ್ತು ನೆಟ್‌ಫ್ಲಿಕ್ಸ್ ವೀಕ್ಷಣೆ ನನ್ನ ಹವ್ಯಾಸಗಳು. ಪದವಿ ಬಳಿಕ ಕಾರ್ಪೊರೇಟ್ ಕ್ಷೇತ್ರಕ್ಕೆ ಸೇರುವ ಗುರಿ ಇದೆ
> **ಆರ್ಯನ್ ರಘುಪತಿ**

> ಐಐಟಿ–ಬಾಂಬೆಯಲ್ಲಿ ಕಂಪ್ಯೂಟರ್ ಸೈನ್ಸ್ ಎಂಜಿನಿಯರಿಂಗ್‌ಗೆ ಸೇರುವ ಉದ್ದೇಶವಿದೆ. ಎಂಜಿನಿಯರಿಂಗ್ ಕ್ಷೇತ್ರದಲ್ಲೇ ವೃತ್ತಿಜೀವನ ರೂಪಿಸಿಕೊಳ್ಳಲು ಬಯಸಿದ್ದೇನೆ
> **ಮನು ಪರಮೇಶ್ವರನ್**

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು
(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)
ನಂ.8, ಕೆಎಸ್‌ಸಿಎಂಎಫ್, ಎಂಎಸ್‌ಬಿ–1, 6ನೇ ಮತ್ತು 7ನೇ ಮಹಡಿ, ಕನ್ನಿಂಗ್‌ಹ್ಯಾಮ್ ರಸ್ತೆ, ಬೆಂಗಳೂರು–560052.
Email Id: ed.kreiska.gov.in, Contact No: 080-22283366, 080-22207722

ಪತ್ರಿಕಾ ಪ್ರಕಟಣೆ ವಿಷಯ

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿರುವ ವಸತಿ ಶಾಲೆ/ಶಾಲೆಜುಗಳ ವಿದ್ಯಾರ್ಥಿಗಳಿಗೆ ಮನೋವೈಜ್ಞಾನಿಕ ಸಲಹೆ ನೀಡಲು ಬಾಗಲಕೋಟೆ, ಬೆಂಗಳೂರು ಗ್ರಾಮಾಂತರ, ಬೀದರ್, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಗದಗ, ಹಾಸನ, ಹಾವೇರಿ, ಕೊಡಗು, ಕೊಪ್ಪಳ, ಮಂಡ್ಯ, ಉಡುಪಿ, ಉತ್ತರ ಕನ್ನಡ, ವಿಜಯಪುರ, ರಾಮನಗರ ಹಾಗೂ ಯಾದಗಿರಿ ಜಿಲ್ಲೆಗಳಿಗೆ ಗೌರವಧನದ ಆಧಾರದ ಮೇಲೆ ಜಿಲ್ಲೆಗೆ ಒಬ್ಬರಂತೆ ಮಕ್ಕಳ ಮನೋವೈದ್ಯರನ್ನು (Child Psychiatrist) ನೇಮಕ ಮಾಡಿಕೊಳ್ಳಲಾಗುತ್ತಿದೆ. ಅಭ್ಯರ್ಥಿಗಳು MD Psychiatry / Diploma in Psychiatric Medicine (DPM) ವಿದ್ಯಾರ್ಹತೆ ಹೊಂದಿರಬೇಕು. ಆಯ್ಕೆಯಾದ ಅಭ್ಯರ್ಥಿಗಳಿಗೆ ಮಾಸಿಕ ರೂ. 50,000/– ಗೌರವಧನ ನೀಡಲಾಗುವುದು. ಆಸಕ್ತ ಅಭ್ಯರ್ಥಿಗಳು ಅಗತ್ಯ ದಾಖಲೆಗಳೊಂದಿಗೆ 08.06.2026 ರ ಸಂಜೆ 5.30 ಗಂಟೆಯೊಳಗೆ ಸಂಘದ ಕೇಂದ್ರ ಕಚೇರಿಗೆ ಅರ್ಜಿ ಸಲ್ಲಿಸಬಹುದು.

ಸಹಿ/–
ಕಾರ್ಯನಿರ್ವಾಹಕ ನಿರ್ದೇಶಕರು
ವಾ.ಸಾ.ಸಂ.ಇ/ವಾಪ್ರ/920/ಆಕಾರ್/2026–27

ಅಂಗವಿಕಲರ ಕೋಟಾ: ವಿಶ್ವರಾಜ ಪ್ರಥಮ

ಪ್ರಜಾವಾಣಿ ವಾರ್ತೆ

ವಿಶ್ವರಾಜ

ಚಿನ್ಮಯ

ಜಯಂತ

ಸಾಯಿಪ್ರಸಾದ

ಭಾಲ್ಕಿ (ಬೀದರ್ ಜಿಲ್ಲೆ): ತಾಲ್ಲೂಕಿನ ಕರಡ್ಯಾಳದ ಚನ್ನಬಸವೇಶ್ವರ ಗುರುಕುಲ ವಿಜ್ಞಾನ ಪಿಯು ಕಾಲೇಜಿನ ವಿದ್ಯಾರ್ಥಿ ವಿಶ್ವರಾಜ ಮರಪಳ್ಳಿ ಅವರು ಜೆಇಇ ಅಡ್ವಾನ್ಸ್ಡ್ ಪರೀಕ್ಷೆಯಲ್ಲಿ ಅಂಗವಿಕಲ ಕೋಟಾದಲ್ಲಿ ರಾಷ್ಟ್ರಕ್ಕೆ ಮೊದಲ ರ‍್ಯಾಂಕ್ ಪಡೆದಿದ್ದಾರೆ ಎಂದು ಪ್ರಾಚಾರ್ಯ ಬಸವರಾಜ ಮೊಳಕೀರೆ ತಿಳಿಸಿದ್ದಾರೆ.

ಅಂಗವಿಕಲ ಕೋಟಾದಲ್ಲಿ ಚಿನ್ಮಯ ಸಂತೋಷಕುಮಾರ 37ನೇ ರ‍್ಯಾಂಕ್, ಎಸ್‌ಸಿ ಕೋಟಾದಲ್ಲಿ ಜಯಂತ ಬಿ.ಚವ್ಹಾಣ 56ನೇ ರ‍್ಯಾಂಕ್, ಇಡಬ್ಲ್ಯೂಎಸ್ ಕೋಟಾದಲ್ಲಿ ಸಾಯಿಪ್ರಸಾದ ಶಿವರಾಜ 70ನೇ ರ‍್ಯಾಂಕ್ ಪಡೆದಿದ್ದಾರೆ. ವಿದ್ಯಾರ್ಥಿಗಳ ಸಾಧನೆಗೆ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಬಸವಲಿಂಗ ಪಟ್ಟದ್ದೇವರು, ಪೀಠಾಧಿಪತಿ ಗುರುಬಸವ ಪಟ್ಟದ್ದೇವರು, ಕಾರ್ಯದರ್ಶಿ ಮಹಾಲಿಂಗ ಸ್ವಾಮೀಜಿ, ಆಡಳಿತಾಧಿಕಾರಿ ಮೋಹನರೆಡ್ಡಿ, ಪ್ರಾಚಾರ್ಯ ಬಸವರಾಜ ಮೊಳಕೀರೆ, ಉಪ ಪ್ರಾಚಾರ್ಯ ಸಿದ್ರಾಮ ಗೊಗ್ಗಾ, ಶೈಕ್ಷಣಿಕ ನಿರ್ದೇಶಕ ಎಂ.ಶ್ರೀನಿವಾಸ ರೆಡ್ಡಿ, ರಾಘವೇಂದ್ರ ಪತ್ರಿ ಸಂತಸ ವ್ಯಕ್ತಪಡಿಸಿದ್ದಾರೆ.

ರಾಜ್ಯದ ನಾಗದೇವ್, ವಿನಯ್ ಸಾಧನೆ

ನಾಗದೇವ್

ವಿನಯ್

ಮಂಗಳೂರು: ಜೆಇಇ ಅಡ್ವಾನ್ಸ್ಡ್ 2026ನೇ ಸಾಲಿನ ಪರೀಕ್ಷೆಯಲ್ಲಿ ಉಡುಪಿ ಜಿಲ್ಲೆ ಕಾರ್ಕಳದ ಕ್ರಿಯೇಟಿವ್ ಶಿಕ್ಷಣ ಸಂಸ್ಥೆಯ ನಾಗದೇವ್ ಎಂ.ಜಿ. ಅವರು ರಾಷ್ಟ್ರ ಮಟ್ಟದಲ್ಲಿ 196ನೇ ರ‍್ಯಾಂಕ್ ಪಡೆದುಕೊಂಡಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿ ತಾಲ್ಲೂಕಿನ ಗುರುವಾಯನಕೆರೆಯ ಎಕ್ಸೆಲ್ ಪದವಿ ಪೂರ್ವ ಕಾಲೇಜಿನ ವಿನಯ್ ಕೆ.ಸಜ್ಜನರ ಅವರು ಒಬಿಸಿ ವಿಭಾಗದಲ್ಲಿ 42ನೇ ರ‍್ಯಾಂಕ್ ಗಳಿಸಿದ್ದಾರೆ.

ಡಿ.ಕೆ.ಶಿವಕುಮಾರ್ ತೆರಿಗೆ ಬರೆ ಹಾಕಲಿದ್ದಾರೆ: ಅಶೋಕ ವ್ಯಂಗ್ಯ

'ಕೆಟ್ಟುಹೋದ ಲಾರಿಯಂತಾದ ಆಡಳಿತ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಿದ್ದರಾಮಯ್ಯ ಅವರು ಆರ್ಥಿಕ ಸುಸ್ಥಿರತೆ ಇಲ್ಲದ, ಕೆಟ್ಟುಹೋದ ಲಾರಿಯಂತಿರುವ ಆಡಳಿತವನ್ನು ಬಿಟ್ಟು ಹೋಗಿದ್ದಾರೆ. ಇವೆಲ್ಲದರ ಪರಿಣಾಮ ಡಿ.ಕೆ.ಶಿವಕುಮಾರ್ ಅವರು ಮುಂದಿನ ದಿನಗಳಲ್ಲಿ ಜನರ ಮೇಲೆ ಇನ್ನಷ್ಟು ತೆರಿಗೆಗಳ ಬರೆ ಎಳೆಯುತ್ತಾರೆ' ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕರ್ನಾಟಕದ ಕಾಂಗ್ರೆಸ್ ಸರ್ಕಾರ ಹಳೇ ಲಾರಿ ಇದ್ದಂತೆ. ಈಗ ಲಾರಿಯ ಚಾಲಕ ಬದಲಾಗಿದ್ದಾನೆಯೇ ಹೊರತು ಲಾರಿ ಬದಲಾಗಿಲ್ಲ' ಎಂದು ಹೇಳಿದರು.

'ಸಿದ್ದರಾಮಯ್ಯ ಮೂರು ವರ್ಷ ನಿರಂತರ ಸಾಲ ಮಾಡಿ ಆಡಳಿತವನ್ನು ಶಿವಕುಮಾರ್‌ಗೆ ನೀಡಿದ್ದಾರೆ. ₹4 ಲಕ್ಷ ಕೋಟಿ ಗಾತ್ರದ ಬಜೆಟ್ ಮಂಡಿಸಿದ್ದ ಸಿದ್ದರಾಮಯ್ಯ, ₹7.64 ಲಕ್ಷ ಕೋಟಿ ಸಾಲ ಬಿಟ್ಟು ಹೋಗಿದ್ದಾರೆ. ಈ ವರ್ಷದ ಬಜೆಟ್‌ನ ಕೊರತೆ ₹94,428 ಕೋಟಿ ಆಗಿದೆ. ಅವೈಜ್ಞಾನಿಕ ಗ್ಯಾರಂಟಿ ಯೋಜನೆಗಳಿಂದಾಗಿ ರಾಜ್ಯದ ಆರ್ಥಿಕ ಸ್ಥಿತಿ ಹದಗೆಟ್ಟಿದೆ' ಎಂದು ಟೀಕಿಸಿದರು.

'ನಮ್ಮ ಸರ್ಕಾರದ ಅವಧಿಯಲ್ಲಿ ಅಭಿವೃದ್ಧಿಗಾಗಿ ₹84,000 ಕೋಟಿ ಖರ್ಚು ಮಾಡುತ್ತಿದ್ದೆವು. ಅವೈಜ್ಞಾನಿಕ ಗ್ಯಾರಂಟಿ ಬಂದ ನಂತರ ಆ ಮೊತ್ತದಲ್ಲಿ ಕಡಿತವಾಗಿದೆ. ಬಿಜೆಪಿ ಇದ್ದಾಗ ಮಿಗತೆ ಬಜೆಟ್ ಮಂಡನೆಯಾಗಿದ್ದರೆ, ಕಾಂಗ್ರೆಸ್ ಬಂದ ನಂತರ ಕೊರತೆ ಬಜೆಟ್ ಮಂಡಿಸಲಾಗಿದೆ' ಎಂದರು.

'ಮೋದಿ ಸರ್ಕಾರ ₹200 ಲಕ್ಷ ಕೋಟಿ ಸಾಲ ಮಾಡಿದ್ದರೂ, ಅದರಲ್ಲಿ ₹170 ಲಕ್ಷ ಕೋಟಿ ರೈಲ್ವೆ, ಸೇತುವೆ, ಹೆದ್ದಾರಿ ಸೇರಿ ದೇಶದ ಮೂಲಸೌಕರ್ಯಗಳ ಅಭಿವೃದ್ಧಿಗೆ ಖರ್ಚು ಮಾಡಿದೆ. ಆದರೆ, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಭಿವೃದ್ಧಿಗೆ ಏನೂ ಖರ್ಚು ಮಾಡಿಲ್ಲ. ಗ್ಯಾರಂಟಿಗಾಗಿ ₹65,000 ಕೋಟಿ ಖರ್ಚು ಮಾಡುವುದನ್ನೇ ದೊಡ್ಡದಾಗಿ ಹೇಳುತ್ತಾರೆ. ಹೆಚ್ಚುವರಿ ತೆರಿಗೆ ಮೂಲಕ ಆ ಮೊತ್ತ ಸರಿದೂಗಿಸಲು ಹೆಣಗಾಡುತ್ತಿದ್ದಾರೆ. ಸರ್ಕಾರ ತೆಗೆದುಕೊಂಡ ಸಾಲಕ್ಕೆ ₹38,000 ಕೋಟಿ ಬಡ್ಡಿಯನ್ನು ಪಾವತಿಬೇಕಾಗಿದೆ' ಎಂದರು.

ಸರ್ಕಾರದಿಂದ ಮನೆ ಬಾಡಿಗೆ ಪಡೆಯುತ್ತಿಲ್ಲ: ಅಶೋಕ



'ಸಿದ್ದರಾಮಯ್ಯ ಮನೆ ಬಿಡಲ್ಲ. ಶಿವಕುಮಾರ್ ನನಗೆ ಮನೆ ಕೊಡಲ್ಲ ಎಂಬಂತಾಗಿದೆ. ಇವರಿಬ್ಬರ ನಡುವಿನ ಸಂಘರ್ಷ ಇನ್ನೂ ಇರುತ್ತದೆ. ನಾನೇನು ಮನೆ ಸಿಗುತ್ತದೆ ಎಂಬ ಅಪೇಕ್ಷೆ ಇಟ್ಟುಕೊಂಡಿಲ್ಲ' ಎಂದು ಅಶೋಕ ಹೇಳಿದರು.

'ಬಿಜೆಪಿ ಅವಧಿಯಲ್ಲಿ ವಿರೋಧಪಕ್ಷದ ನಾಯಕರಿಗೆ ಮನೆ ಕೊಟ್ಟಿದ್ದೆವು. ಮುಂದೆ ನಾವು ಅಧಿಕಾರಕ್ಕೆ ಬಂದಾಗ ವಿರೋಧ ಪಕ್ಷದ ನಾಯಕರಿಗೆ ಮನೆ ನೀಡದೇ ಇರುವುದಿಲ್ಲ. ನಾನು ಸರ್ಕಾರದಿಂದ ಮನೆ ಬಾಡಿಗೆ ಪಡೆಯುತ್ತಿಲ್ಲ. ಹಣದ ಕೊರತೆ ಇರುವ ಕಡೆ ಅದನ್ನು ಸರ್ಕಾರ ಬಳಸಿಕೊಳ್ಳಲಿ' ಎಂದು ಹೇಳಿದರು.

ಶಾಸನಗಳ ಡಿಜಿಟಲೀಕರಣ ಪ್ರಕ್ರಿಯೆ ಆರಂಭ

ತೆಕ್ಕಲಕೋಟೆ (ಬಳ್ಳಾರಿ ಜಿಲ್ಲೆ): 'ತೆಕ್ಕಲಕೋಟೆ, ನಿಟ್ಟೂರು, ಉಡೇಗೋಳ ಸೇರಿದಂತೆ ಸುತ್ತಮುತ್ತಲ ಪ್ರದೇಶಗಳಲ್ಲಿ ಪತ್ತೆಯಾದ ಪುರಾತನ ಶಾಸನಗಳ ಡಿಜಿಟಲೀಕರಣ ಪ್ರಕ್ರಿಯೆಯನ್ನು 'ಭಾರತಶ್ರೀ' ಯೋಜನೆಯಡಿ ಕೈಗೊಳ್ಳಲಾಗುವುದು' ಎಂದು ಮೈಸೂರಿನ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ ಸಹಾಯಕ ಅಧೀಕ್ಷಕ ಅನಿಲ್ ಕುಮಾರ ಆರ್.ವಿ ತಿಳಿಸಿದರು.

ನಿಟ್ಟೂರು ಗ್ರಾಮದ ಬಳಿ ಈಚೆಗೆ ಪತ್ತೆಯಾದ ರಾಷ್ಟ್ರಕೂಟರ ಕಾಲದ ಬಂಡೆಗಲ್ಲು ಶಾಸನ ಸ್ಥಳಕ್ಕೆ ಸೋಮವಾರ ಭೇಟಿ ನೀಡಿದ ಅವರು, 'ಪುರಾತನ ಶಾಸನಗಳನ್ನು ಡಿಜಿಟಲೀಕರಣಗೊಳಿಸಿ ಸಂರಕ್ಷಿಸಲಾಗುವುದು. ಸಾರ್ವಜನಿಕರು ಮತ್ತು ಸಂಶೋಧಕರಿಗೆ ಆನ್‌ಲೈನ್‌ನಲ್ಲಿ ಲಭ್ಯ ಆಗುವಂತೆ ಮಾಡಲಾಗುವುದು' ಎಂದರು.

ಪಟ್ಟಣದ ಪ್ರಾಗೈತಿಹಾಸಿಕ ನೆಲೆ ಬಳಿ ಸಿಕ್ಕ ಗೌಡ್ರ ಮೂಲೆ ಬಂಡೆಗಲ್ಲು ಶಾಸನ, ನಿಟ್ಟೂರಿನ ಆಂಜನೇಯ ದೇವಸ್ಥಾನ ಬಳಿಯ ಬಂಡೆಗಲ್ಲು ಶಾಸನ ಹಾಗೂ ರಾಷ್ಟ್ರಕೂಟರ ಕಾಲದ ಬಂಡೆಗಲ್ಲು ಶಾಸನ ಸ್ಥಳಗಳಿಗೆ ಭೇಟಿ ನೀಡಿ ಶಾಸನಗಳ ಪಡಿಯಚ್ಚು ತೆಗೆದುಕೊಂಡರು.

ಜುಲೈ 1ರಿಂದ 'ವಿಬಿ ಜಿ ರಾಮ್ ಜಿ'

ಒಂದನೇ ಪುಟದಿಂದ...

'ಹೊಸ ಕಾಯ್ದೆಯು ಗ್ರಾಮೀಣ ಭಾಗದ ಪ್ರತಿ ಕುಟುಂಬಕ್ಕೆ ವರ್ಷಕ್ಕೆ ಕನಿಷ್ಠ 125 ದಿನಗಳ ಖಚಿತ ಉದ್ಯೋಗ ನೀಡುತ್ತದೆ. ಈ ಮೊದಲು ನರೇಗಾ ಅಡಿಯಲ್ಲಿ 100 ದಿನಗಳ ಮಿತಿ ಇತ್ತು. ಗುಂಡಿ ತೋಡುವ ಕೆಲಸಗಳಿಗೆ ಸೀಮಿತವಾಗದೆ, ಜಲ ಸಂರಕ್ಷಣೆ, ಗ್ರಾಮೀಣ ರಸ್ತೆಗಳು, ಗೋದಾಮುಗಳು ಮತ್ತು ಮಾರುಕಟ್ಟೆಗಳಂತಹ ದೀರ್ಘಕಾಲ ಬಾಳಿಕೆ ಬರುವ ಉಪಯುಕ್ತ ಆಸ್ತಿಗಳ ನಿರ್ಮಾಣಕ್ಕೆ ಈ ಯೋಜನೆಯು ಆದ್ಯತೆ ನೀಡುತ್ತದೆ. ಯೋಜನೆಯಲ್ಲಿ ಪಾರದರ್ಶಕತೆ ತರಲು ಕಾರ್ಮಿಕರ ಹಾಜರಾತಿಗೆ ಬಯೊಮೆಟ್ರಿಕ್ ವ್ಯವಸ್ಥೆ, ಕೆಲಸದ ಸ್ಥಳದ ಮೇಲೆ ನಿಗಾ ಇಡಲು ಜಿಪಿಎಸ್ ಮತ್ತು ಅಕ್ರಮಗಳನ್ನು ಪತ್ತೆಹಚ್ಚಲು ಕೃತಕ ಬುದ್ಧಿಮತ್ತೆ ತಂತ್ರಜ್ಞಾನವನ್ನು ಕಡ್ಡಾಯಗೊಳಿಸಲಾಗಿದೆ' ಎಂದು ಆಯುಕ್ತಾಲಯದ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

'ಅನುದಾನ: ಪೂರ್ತಿ ವೆಚ್ಚ ಮಾಡಿ'

ನರೇಗಾ ಯೋಜನೆಯಡಿ ಸಾಮಗ್ರಿ ವೆಚ್ಚದ ಬಿಲ್‌ಗಳ ಬಾಕಿ ಪಾವತಿಗೆ ಗ್ರಾಮ ಪಂಚಾಯಿತಿಗಳ ಬಿಲ್ ಪಾವತಿಸುವ ಮತ್ತು ವಿತರಿಸುವ ಅಧಿಕಾರಿಗಳಿಗೆ ಹಣ ಬಿಡುಗಡೆ ಮಾಡಲಾಗಿದೆ.

ಈ ಅನುದಾನವನ್ನು ಯಾವುದೇ ವಿಳಂಬವಿಲ್ಲದೇ ವೆಚ್ಚ ಮಾಡಬೇಕು. ಸಂಪೂರ್ಣವಾಗಿ ವೆಚ್ಚ ಮಾಡದೇ ಇದ್ದರೆ ಸಾಮಗ್ರಿ ವೆಚ್ಚದ ಅಡಿ ಅನುದಾನ ಮಂಜೂರು ಮಾಡುವಂತೆ ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವಾಲಯಕ್ಕೆ ಹಣ ಬಳಕೆ ಪ್ರಮಾಣಪತ್ರ ಸಲ್ಲಿಸಲು ವಿಳಂಬ ಆಗಲಿದೆ. ಹೀಗಾಗಿ, ಜೂನ್ 8ರ ಒಳಗೆ ಯಾವುದೇ ಮೊತ್ತ ಉಳಿಕೆ ಆಗದಂತೆ ಸಂಪೂರ್ಣ ವೆಚ್ಚ ಭರಿಸಿ ಹಣ ಪಾವತಿಸಬೇಕು. ವೆಚ್ಚ ಮಾಡಿರುವ ಬಗ್ಗೆ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯವರ ದೃಢೀಕರಣದೊಂದಿಗೆ ಆಯುಕ್ತಾಲಯಕ್ಕೆ ಮಾಹಿತಿ ನೀಡಬೇಕು. ಜೂನ್ 8ರ ನಂತರವೂ ಅನುದಾನ ವೆಚ್ಚ ಆಗದಿದ್ದರೆ, ಉಳಿಕೆ ಅನುದಾನವನ್ನು ಯಾವುದೇ ಮಾಹಿತಿ ನೀಡದೆ ಹಿಂಪಡೆಯಲಾಗುವುದು ಎಂದು ಗ್ರಾಮೀಣಾಭಿವೃದ್ಧಿ ಆಯುಕ್ತರು ಎಚ್ಚರಿಕೆ ನೀಡಿದ್ದಾರೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್‌ಷನ್ ಸೊಸೈಟಿ
ಆರೋಗ್ಯ ಸೌಧ, 4ನೇ ಮಹಡಿ, 1ನೇ ಅಡ್ಡ ರಸ್ತೆ, ಮಾಗಡಿ ರಸ್ತೆ, ಬೆಂಗಳೂರು–23
ದೂ: 080–080–2955 7021, ಇ–ಮೇಲ್: pdksaps@gmail.com

ಸಂ: ಕೆಎಸ್‌ಎಪಿಎಸ್/ಪಿಆರ್‌ಸಿ/05/2025–26 ದಿನಾಂಕ: 29.05.2026

ಅಲ್ಪಾವಧಿ ಟೆಂಡರ್ (ದ್ವಿ ಲಕೋಟೆ) (4ನೇ ಕರೆ) ಆಹ್ವಾನ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಎಆರ್‌ಟಿ ಕೇಂದ್ರಗಳಿಗೆ ಅವಶ್ಯಕತೆ ಇರುವ **ಉಪಕರಣ/ಸಲಕರಣೆಗಳಾದ Barcode and Scanner machines, sticker** ಇತ್ಯಾದಿಗಳನ್ನು ಸರಬರಾಜು **ಮಾಡುವ ಸಂಬಂಧ** ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಟೆಂಡರ್ (ದ್ವಿ–ಲಕೋಟೆ) (4ನೇ ಕರೆ) ಕರೆಯಲಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 15.06.2026. ಸಮಯ ಸಂಜೆ 5.30 ಗಂಟೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ ವೆಬ್‌ಸೈಟ್: https://kppp.karnataka.gov.in.

ಸಹಿ/– ಯೋಜನಾ ನಿರ್ದೇಶಕರು
ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್‌ಷನ್ ಸೊಸೈಟಿ
ಬೆಂಗಳೂರು
DIPR/CP/915/SA/2026-27

ಕರ್ನಾಟಕ ಸರ್ಕಾರ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು – 560001.
ದೂರವಾಣಿ: 080–22215601, 22211246 ಫ್ಯಾಕ್ಸ್ : 22215602

ಸಂಖ್ಯೆ: ಯುಸೇಇ/ಕ್ರೀಚಪ್ರೋ/ಕ್ರೀವಿಕೆ/02/2026–27 ದಿನಾಂಕ: 01.06.2026

ಟೆಂಡರ್ ಪ್ರಕಟಣೆ 2ನೇ ಕರೆ
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ವಿಷಯ: ಉಪ ನಿರ್ದೇಶಕರು (ಆಡಳಿತ) ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು–560001, ಕರ್ನಾಟಕ ಇವರು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ಮೈಸೂರು ಜಿಲ್ಲೆಯಲ್ಲಿ ಕ್ರೀಡಾ ವಿಜ್ಞಾನ ಕೇಂದ್ರ ನಿರ್ವಹಣೆ ಮತ್ತು ಮಾನವ ಸಂಪನ್ಮೂಲಗಳ ಸೇವೆಯನ್ನು ಒದಗಿಸಲು ಗುತ್ತಿಗೆದಾರರನ್ನು ನೇಮಿಸಲು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ನ್ನು ಆಹ್ವಾನಿಸಿದೆ.

ಕಾಮಗಾರಿ ವಿವರ : ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ಮೈಸೂರು ಜಿಲ್ಲೆಯಲ್ಲಿ ಕ್ರೀಡಾ ವಿಜ್ಞಾನ ಕೇಂದ್ರ ನಿರ್ವಹಣೆ ಮತ್ತು ಮಾನವ ಸಂಪನ್ಮೂಲಗಳ ಸೇವೆಯನ್ನು ಒದಗಿಸಲು ಟೆಂಡರ್. ಇಎಂಡಿ ಮೊತ್ತ : ರೂ. 1,00,000/–. 1) ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಬಿಡ್ ಸಲ್ಲಿಸಲು ಕೊನೆಯ ದಿನಾಂಕ:16.06.2026. ಸಮಯ 16.30 ಗಂಟೆ. 2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 17.06.2026. ಸಮಯ 17.00 ಗಂಟೆ. 3) ಹಣಕಾಸು ಬಿಡ್ ತೆರೆಯುವ ದಿನಾಂಕವನ್ನು ತಿಳಿಸಲಾಗುವುದು.

ಆಸಕ್ತ ಟೆಂಡರ್‌ದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in) ಮೂಲಕ ತಮ್ಮ ಬಿಡ್‌ಗಳನ್ನು ಆನ್ ಲೈನ್ ಮೂಲಕ ಸಲ್ಲಿಸಬಹುದು. ಟೆಂಡರ್ ದಾಖಲೆಗಳನ್ನು ಉಚಿತವಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ವೀಕ್ಷಿಸಬಹುದು. ಹೆಚ್ಚಿನ ಮಾಹಿತಿಗಾಗಿ ಮೇಲ್ಕಾಣಿಸಿದ ವಿಳಾಸ ಸಂಪರ್ಕಿಸಬಹುದು.

ಸಹಿ/–
ಉಪ–ನಿರ್ದೇಶಕರು (ಕ್ರೀಡಾ ಯೋಜನೆ)
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
DIPR/CP/926/Zen/2026-27

ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ KEONICS ISO 9001 : 2008
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಸಂಖ್ಯೆ 59, 1ನೇ ಮಹಡಿ, ಕುಮಾರ ಪಾರ್ಕ್ ಪಶ್ಚಿಮ, ರೈಲ್ವೆ ಪ್ಯಾರಲಲ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು 560020

ನಂ: KSEDC/P140/2026-27 ದಿನಾಂಕ: 01.06.2026

ಇ–ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000ರ ನಿಯಮದನ್ವಯ ಕೆಪಿಪಿಪಿ ಪೋರ್ಟ್‌ಲ್ ಮುಖಾಂತರ ಕರ್ನಾಟಕ ಸರ್ಕಾರದ ಅಂಗ ಸಂಸ್ಥೆಯಾದ ಮೆ: ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ (ಕಿಯೋನಿಕ್ಸ್), ಸಂಸ್ಥೆಯು **"Short Term e-Auction tender document for Fund Management"** ಗಾಗಿ ಸಂಸ್ಥೆಗಳನ್ನು ಆಯ್ಕೆ ಮಾಡಲು 7 ದಿನಗಳ ಅವಧಿಗೆ ಓಪನ್ ಹರಾಜು ಪ್ರಕಟಣೆಯನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಬಿಡ್‌ದಾರರು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: http://kppp.karnataka.gov.inನಲ್ಲಿ ವಿವರವನ್ನು ಪಡೆಯಬಹುದು, ಹೆಚ್ಚಿನ ಮಾಹಿತಿಗಾಗಿ ಕಿಯೋನಿಕ್ಸ್ ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದು (ದೂರವಾಣಿ ಸಂಖ್ಯೆ: 080 2222 5645).

ಕ್ರ. ಸಂ.	ಟೆಂಡರ್ ಪ್ರಕಟಣೆ ಸಂಖ್ಯೆ	ಟೆಂಡರ್ ವಿವರ	ಟೆಂಡರ್‌ನ್ನು ಸಲ್ಲಿಸುವ ಕೊನೆಯ ದಿನಾಂಕ
1	KEONICS/2026-27/AUCTION12	Short Term e- Auction tender document for Fund Management (E-Auction Notification, Eligibility Criteria and Terms and Conditions)	08.06.2026

DIPR/CP/914/SA/2026-27
ಸಹಿ/– ನಿರ್ದೇಶಕರು (ಹಣಕಾಸು)

ಅಭಿಯಾನ ನಿರ್ದೇಶಕರ ಕಛೇರಿ, ರಾಷ್ಟ್ರೀಯ ಜೀವನೋಪಾಯ ಅಭಿಯಾನ
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ.
4, ಮೈಶುಗರ್ ಕಟ್ಟಡ, ಜೆ.ಸಿ. ರಸ್ತೆ, ಟೌನ್ ಹಾಲ್ ಹತ್ತಿರ, ಬೆಂಗಳೂರು–560002.
ಇ–ಮೇಲ್: nrlmkarnataka@gmail.com

ಸಂಖ್ಯೆ: KSRLPS/NFL/GEN/98/2024/NONFL/KSRLPS ದಿನಾಂಕ: 01.06.2026

ಟೆಂಡರ್ ಪ್ರಕಟಣೆ

ರಾಷ್ಟ್ರೀಯ ಜೀವನೋಪಾಯ ಅಭಿಯಾನ–ಸಂಜೀವಿನಿ–KSRLPS ರಡಿ ಸ್ವ–ಸಹಾಯ ಗುಂಪಿನ ಮಹಿಳೆಯರಿಗಾಗಿ ಕರ್ನಾಟಕದಾದ್ಯಂತ ವಿವಿಧ ಸ್ಥಳಗಳಲ್ಲಿ 1840 ಕಾಫಿ ಕಿಯೋಸ್ಕ್‌ಗಳ ತಯಾರಿಕೆ, ಪೂರೈಕೆ, ನಿರ್ಮಾಣ ಹಾಗೂ ಕಾರ್ಯಾರಂಭಕ್ಕಾಗಿ ಅರ್ಹ ಆಸಕ್ತ ಸಂಸ್ಥೆಗಳಿಂದ ಪ್ರಸ್ತಾವನೆಯನ್ನು KPPP ಪೋರ್ಟಲ್‌ನ ಮೂಲಕ ದಿನಾಂಕ: 01.06.2026 ರಂದು ಆಹ್ವಾನಿಸಿದ್ದು, ಆಸಕ್ತ ಸಂಸ್ಥೆಗಳು/ಬಿಡ್ಡುದಾರರು http://www.kppp.karnataka.gov.in ವೆಬ್‌ಸೈಟ್ ಮೂಲಕ ಟೆಂಡರ್‌ನ್ನು ದಿನಾಂಕ: 22.06.2026 ಸಂಜೆ 5.00ರೊಳಗಾಗಿ ಸಲ್ಲಿಸಲು ತಿಳಿಸಲಾಗಿದೆ. ಟೆಂಡರ್‌ನ ವೇಳಾಪಟ್ಟಿ ಹಾಗೂ ಹೆಚ್ಚಿನ ವಿವರಗಳನ್ನು ಟೆಂಡರ್ ದಸ್ತಾವೇಜಿನಲ್ಲಿ ನೀಡಲಾಗಿದೆ. Tender No: KSRLPS/2026-27/IND0002 ಇಲ್ಲಿಂದ ಪಡೆಯಬಹುದಾಗಿದೆ.

ಸಹಿ/–
ಅಪರ ಅಭಿಯಾನ ನಿರ್ದೇಶಕರು
ಸಂಜೀವಿನಿ–ಕೆಎಸ್‌ಆರ್‌ಎಲ್‌ಪಿಎಸ್, ಬೆಂಗಳೂರು.
ವಾ.ಸಾ.ಸಂ.ಇ/ವಾಪ್ರ/923/ಆಕಾರ್/2026–27

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ,
ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ,
ಹೊಸಪೇಟೆ. ವಿಜಯನಗರ.

ಸಂಖ್ಯೆ:ಕಾ.ಅ/ಗ್ರಾ.ನೀ.ಸ&ನೈವಿ/ಹೊ/ತಾಂಶಾ/ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ/2026–27/193 ದಿನಾಂಕ:29–05–2026

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂಖ್ಯೆ–01/2026–27

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ ಹೊಸಪೇಟೆರವರು ಓ&ಎಂ ಯೋಜನೆಯಡಿ ಹೂವಿನಹಡಗಲಿ ತಾಲ್ಲೂಕಿನ ರೂ.238.57 ಲಕ್ಷ 02 ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಹಾಗೂ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಐಟಂವಾರು ಟೆಂಡರ್‌ಗಳನ್ನು, ಕರ್ನಾಟಕ ಪಾರದರ್ಶಕ ಅಧಿನಿಯಮ 1999 ನಿಯಮಗಳು 2000ರ ಮೇರೆಗೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ನ್ನು ಅಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಹಾಗೂ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸುವ ಅವಧಿ **ದಿನಾಂಕ: 29–05–2026** ರಿಂದ **15–06–2026** ರ ಸಾಯಂಕಾಲ 5.00 ಗಂಟೆಯವರೆಗೆ, ಪ್ರೀ ಬಿಡ್ ಮೀಟಿಂಗ್ **ದಿನಾಂಕ:10–06–2026** ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ತೆರೆಯುವ **ದಿನಾಂಕ:16–06–2026** ರಂದು **ಸಾಯಂಕಾಲ 5.05** ಗಂಟೆಗೆ. ಹೆಚ್ಚಿನ ಮಾಹಿತಿಗಾಗಿ ಖಾಲಿ ಟೆಂಡರ್ ಡಾಕ್ಯೂಮೆಂಟನ್ನು **http://kppp.karnataka.gov.in** ವೆಬ್‌ಸೈಟ್‌ನಲ್ಲಿ ನೋಡಬಹುದು.

ಸಹಿ/– ಕಾರ್ಯಪಾಲಕ ಇಂಜಿನೀಯರ್,
ಗ್ರಾ.ನೀ.ಸ&ನೈ. ವಿಭಾಗ, ಹೊಸಪೇಟೆ.
ವಾ.ಸಾ.ಸಂ.ಇ/ವಿಜಯನಗರ/2026–27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/105

ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ
ಆಸ್ತಿ ಅಧಿಕಾರಿಗಳ ಕಛೇರಿ, ಸೀಮಿಕೇರಿ ಕ್ರಾಸ್ ಹತ್ತಿರ, ಹುಬ್ಬಳ್ಳಿ ಬೈಪಾಸ್ ರಸ್ತೆ, ಉದ್ಯಾನಗಿರಿ, ಬಾಗಲಕೋಟೆ – 587 104.

ಸಂಖ್ಯೆ : ಆ.ಅ./ತೋ.ವಿ.ವಿ.ಬಾ./ಟೆಂ.ಪ್ರ. – 258/2026–27
ದಿನಾಂಕ : 02–06–2026

ಟೆಂಡರ್ ಪ್ರಕಟಣೆ

ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬಾಗಲಕೋಟೆಯಲ್ಲಿ ಕಾಮಗಾರಿಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಆನ್‌ಲೈನ್ ಟೆಂಡರ್ ಆಹ್ವಾನಿಸಲಾಗಿದೆ.

ಟೆಂಡರ್‌ನ ಘಟಣಾವಳಿಗಳು (ವೇಳಾಪಟ್ಟಿ)

1) ಟೆಂಡರ್ ಅಂಶಗಳ ಸ್ಪಷ್ಟೀಕರಣಕ್ಕಾಗಿ ಕೊನೆಯ ದಿನಾಂಕ : 19–06–2026 ರ ಮಧ್ಯಾಹ್ನ 4.00 ಘಂಟೆಯವರೆಗೆ, 2) ಪೂರ್ವಭಾವಿ ಬಿಡ್ ಸಭೆಯ ದಿನಾಂಕ : 24–06–2026 ರ ಬೆಳಿಗ್ಗೆ 11.00 ಗಂಟೆಗೆ, 3) ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ : 03–07–2026 ರ ಮಧ್ಯಾಹ್ನ 4.00 ಗಂಟೆಯುವರೆಗೆ, 4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : 06–07–2026 ರ ಮಧ್ಯಾಹ್ನ 4.00 ಘಂಟೆಗೆ, 5) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ (ಸಾಧ್ಯವಾದಲ್ಲಿ) : 08–07–2026 ರ ಮಧ್ಯಾಹ್ನ 4.00 ಘಂಟೆಗೆ.

ವೆಬ್‌ಸೈಟ್ : https://kppp.karnataka.gov.in ಗೆ ಕಾಲಕಾಲಕ್ಕೆ ಭೇಟಿ ನೀಡಿ ಯಾವುದಾದರೂ ತಿದ್ದುಪಡಿ Corrigendum / Addendum ಬಗ್ಗೆ ಮಾಹಿತಿ ಪಡೆಯಬೇಕು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ : 08354–230251 ಗೆ ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/– ಆಸ್ತಿ ಅಧಿಕಾರಿಗಳು,
ತೋ.ವಿ.ವಿ., ಬಾಗಲಕೋಟೆ.
ಡಿಐಪಿಆರ್/ಬಾಗಲಕೋಟೆ/73/ಮಣಿಪಾಲ್/2026–27

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ

ಸುಭಾಷಿತ

ನಿಮ್ಮ ಅಸುರಕ್ಷಿತ ಆಲೋಚನೆಗಳು ನಿಮಗೆ ಹಾನಿ ಮಾಡಿದಷ್ಟು, ಬದ್ಧವೈರಿಯೂ ಮಾಡಲಾರ.

–ಗೌತಮ ಬುದ್ಧ

ಸಂಪಾದಕೀಯ

ಯಶಸ್ಸಿನ ಉತ್ತುಂಗದಲ್ಲಿ ಐಪಿಎಲ್ ಆಟದ ಸೌಂದರ್ಯ ಮುಕ್ಕಾಗದಿರಲಿ

‘ರಾಯಲ್ ಚಾಲೆಂಜರ್ಸ್ ಬೆಂಗಳೂರು’ ತಂಡದ ಗೆಲುವಿನೊಂದಿಗೆ ಕೊನೆಗೊಂಡಿರುವ ‘ಇಂಡಿಯನ್ ಪ್ರೀಮಿಯರ್ ಲೀಗ್’ (ಐಪಿಎಲ್) ಟಿ20 ಕ್ರಿಕೆಟ್‌ನ 19ನೇ ಆವೃತ್ತಿಯು ಚುಟುಕು ಕ್ರಿಕೆಟ್ ಹೊಸ ಎತ್ತರಕ್ಕೆ ಜಿಗಿದಿರುವುದನ್ನು ಸೂಚಿಸುವಂತಿದೆ. ಕಿರುತೆರೆ ಮತ್ತು ಡಿಜಿಟಲ್ ವೇದಿಕೆಗಳಲ್ಲಿ ಸುಮಾರು 100 ಕೋಟಿ ವೀಕ್ಷಕರು ಪಂದ್ಯಾವಳಿ ವೀಕ್ಷಿಸಿದ್ದು, ಫೈನಲ್ ಪಂದ್ಯವು ಐಪಿಎಲ್ ಮಾತ್ರವಲ್ಲದೆ ಟಿ20 ಕ್ರಿಕೆಟ್ ಇತಿಹಾಸದಲ್ಲೇ ಅತ್ಯಧಿಕ ವೀಕ್ಷಣೆ ಪಡೆದ ಪಂದ್ಯಗಳಲ್ಲಿ ಒಂದಾಗಿದೆ ಎನ್ನಲಾಗುತ್ತಿದೆ. ಈ ಜನಪ್ರಿಯತೆ, ‘ಐಪಿಎಲ್’ ಆಟವಾಗಿ ಹಾಗೂ ವಾಣಿಜ್ಯ ಲೆಕ್ಕಾಚಾರದಲ್ಲಿ ತನ್ನ ಯಶಸ್ಸನ್ನು ವರ್ಷದಿಂದ ವರ್ಷಕ್ಕೆ ಹೆಚ್ಚಿಸಿಕೊಳ್ಳುತ್ತಿರುವುದರ ಸಂಕೇತವಾಗಿದೆ. ಈ ಬಾರಿಯ ಐಪಿಎಲ್ ಆವೃತ್ತಿ ಕರ್ನಾಟಕದ ಕ್ರಿಕೆಟ್ ಪ್ರಿಯರಿಗೆ ಸ್ಮರಣೀಯವಾದುದು. ಅಹಮದಾಬಾದಿನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಆರ್‌ಸಿಬಿಯು ಸತತ ಎರಡನೇ ವರ್ಷವೂ ಐಪಿಎಲ್ ಚಾಂಪಿಯನ್ ಆಗಿ ಹೊರಹೊಮ್ಮಿದೆ. ಲೀಗ್ ಇತಿಹಾಸದಲ್ಲಿ ಈ ಸಾಧನೆ ಮಾಡಿದ ಮೂರನೇ ತಂಡ ಎನ್ನುವ ಹೆಗ್ಗಳಿಕೆ ರಜತ್ ಪಾಟೀದಾರ್ ನಾಯಕತ್ವದ ಬಳಗದ್ದು. ಸತತ 17 ಆವೃತ್ತಿಗಳಲ್ಲಿ ಸೋಲು ಕಂಡಿದ್ದ ತಂಡ, ಕಳೆದ ವರ್ಷದ 18ನೇ ಆವೃತ್ತಿಯಲ್ಲಿ ಜಯಗಳಿಸಿತ್ತು. ಆ ಗೆಲುವು ಆಕಸ್ಮಿಕವಲ್ಲ ಎನ್ನುವುದನ್ನು ಮತ್ತೆ ಚಾಂಪಿಯನ್ ಆಗುವ ಮೂಲಕ ಆರ್‌ಸಿಬಿ ಸಾಬೀತುಪಡಿಸಿದೆ. ಆತಿಥೇಯ ‘ಗುಜರಾತ್ ಟೈಟನ್ಸ್’ ವಿರುದ್ಧದ ಫೈನಲ್‌ನಲ್ಲಿ ಆರ್‌ಸಿಬಿಯ ಸಂಘಟಿತ ಪ್ರಯತ್ನ, ಯೋಜನಾಬದ್ಧ ಆಟ ಹಾಗೂ ವೃತ್ತಿಪರತೆಗೆ ಜಯ ಒಲಿದಿದೆ. ಯುವ ಮತ್ತು ಅನುಭವಿ ಆಟಗಾರರ ಹದವಾದ ಸಮೀಕರಣ ತಂಡದಲ್ಲಿತ್ತು. ವಿರಾಟ್ ಕೊಹ್ಲಿ, ಕನ್ನಡಿಗ ದೇವದತ್ತ ಪಡಿಕ್ಕಲ್, ವೆಂಕಟೇಶ್ ಅಯ್ಯರ್, ವೇಗಿಗಳಾದ ಭುವನೇಶ್ವರ್ ಕುಮಾರ್, ಜೋಶ್ ಹೇಜಲ್‌ವುಡ್, ರಸಿಕ್ ಸಲಾಮ್ ದಾರ್, ಆಲ್‌ರೌಂಡರ್ ಕೃಣಾಲ್ ಪಾಂಡ್ಯ, ಟಿಮ್ ಡೇವಿಡ್, ವಿಕೆಟ್‌ಕೀಪರ್ ಜಿತೇಶ್ ಶರ್ಮಾ ಅವರು ತಮ್ಮ ಹೊಣೆಯನ್ನು ಅಚ್ಚುಕಟ್ಟಾಗಿ ನಿಭಾಯಿಸಿದ್ದಾರೆ. ತಂಡದ ಯಶಸ್ಸಿನಲ್ಲಿ ರಜತ್ ಪಾಟೀದಾರ್ ಅವರ ನಾಯಕತ್ವ ವಿಶೇಷ ಉಲ್ಲೇಖಕ್ಕೆ ಅರ್ಹವಾದುದು.

‘ರಾಯಲ್ ಚಾಲೆಂಜರ್ಸ್ ಬೆಂಗಳೂರು’ ತಂಡ ಸತತ ಎರಡನೇ ಬಾರಿ ಐಪಿಎಲ್ ಚಾಂಪಿಯನ್ ಆಗಿ ಹೊರಹೊಮ್ಮಿದೆ. ಈ ಗೆಲುವು ಕರ್ನಾಟಕದಲ್ಲಿ ಕ್ರಿಕೆಟ್ ಬೆಳವಣಿಗೆಗೆ ಪೂರಕವಾಗಲಿ.

ಕೆಲವು ಹೊಸ ಪ್ರತಿಭೆಗಳನ್ನು ಬೆಳಕಿಗೆ ತಂದಿರುವುದನ್ನು ಈ ಐಪಿಎಲ್ ಟೂರ್ನಿಯ ಯಶಸ್ಸಿನ ರೂಪದಲ್ಲಿ ಗಮನಿಸಬೇಕು. ರಾಜಸ್ಥಾನ ರಾಯಲ್ಸ್ ತಂಡವನ್ನು ಪ್ರತಿನಿಧಿಸಿದ 15 ವರ್ಷದ ವೈಭವ್ ಸೂರ್ಯವಂಶಿ ಘಟಾನುಘಟಿ ಬೌಲರ್‌ಗಳನ್ನು ದಂಡಿಸಿದ ಪರಿ ನೋಡುಗರನ್ನು ನಿಬ್ಬೆರಗಾಗಿಸಿತು. 776 ರನ್‌ಗಳನ್ನು ಕಲೆಹಾಕಿದ ಈ ಬಿಹಾರಿ ಹುಡುಗ ಭವಿಷ್ಯದಲ್ಲಿಯೂ ದೊಡ್ಡ ಇನಿಂಗ್ಸ್ ಆಡುವ ಆಶಾಭಾವ ಮೂಡಿಸಿದ್ದಾರೆ. ಯುವಪ್ರತಿಭೆಗಳಾದ ಆಯುಷ್ ಮ್ಹಾತ್ರೆ, ಪ್ರಿಯಾಂಶ್ ಆರ್ಯ, ಸಾಯಿ ಸುದರ್ಶನ್, ಅಭಿಷೇಕ್ ಶರ್ಮಾ, ಇಶಾನ್ ಕಿಶನ್ ಅವರ ಬ್ಯಾಟಿಂಗ್ ಕೂಡ ಗಮನಾರ್ಹವಾಗಿತ್ತು. ಬೌಲರ್‌ಗಳಾದ ಪ್ರಫುಲ್ ಹಿಂಗೆ, ಸಕೀಬ್ ಹಸನ್, ಭುವನೇಶ್ವರ್ ಕುಮಾರ್, ಕಗಿಸೊ ರಬಾಡ, ಜೇಸನ್ ಹೋಲ್ಡರ್, ಲುಂಗಿ ಎನ್‌ಗಿಡಿ, ತುಷಾರ್ ದೇಶಪಾಂಡೆ, ಪ್ರಿನ್ಸ್ ಯಾದವ್ ಅವರ ಉತ್ತಮ ಪ್ರದರ್ಶನದ ನಡುವೆಯೂ, ಆವೃತ್ತಿಯಿಂದ ಆವೃತ್ತಿಗೆ ಐಪಿಎಲ್ ಬ್ಯಾಟರ್‌ಗಳ ಪಕ್ಷಪಾತಿ ಆಗುತ್ತಿರುವುದು ಸ್ಪಷ್ಟವಾಗಿದೆ. ಮನರಂಜನೆ ಹಾಗೂ ವಾಣಿಜ್ಯದ ದೃಷ್ಟಿಯಿಂದ ಈ ಬೆಳವಣಿಗೆಯನ್ನು ಸಮರ್ಥಿಸಬಹುದಾದರೂ, ಆಟದ ಒಟ್ಟಾರೆ ಸೌಂದರ್ಯಕ್ಕೆ ಧಕ್ಕೆ ಉಂಟಾಗುತ್ತಿರುವುದನ್ನು ನಿರ್ಲಕ್ಷಿಸುವುದು ಸಾಧ್ಯವಿಲ್ಲ. ಬೌಲರ್ ಹಾಗೂ ಬ್ಯಾಟರ್‌ಗಳಿಗೆ ಸಮ ಪ್ರಮಾಣದಲ್ಲಿ ಪಿಚ್‌ಗಳು ಸಹಕರಿಸದೆ ಹೋದರೆ, ಕ್ರಿಕೆಟ್‌ನ ಕಲಾತ್ಮಕ ಸೌಂದರ್ಯ ನೇಪಥ್ಯಕ್ಕೆ ಸರಿದು, ಬ್ಯಾಟರ್‌ಗಳ ಬಾಹುಬಲ ಪ್ರದರ್ಶನವೇ ಆಟ ಎಂದಾಗಿಬಿಡುತ್ತದೆ.

ಬೆಂಗಳೂರಿನಲ್ಲಿ ನಡೆಯುವ ಪಂದ್ಯಗಳಿಗೆ ಉಚಿತ ಟಿಕೆಟ್‌ಗಳಿಗಾಗಿ ಕರ್ನಾಟಕದ ಶಾಸಕರು ಒತ್ತಾಯಿಸಿದ್ದು ದೇಶದಾದ್ಯಂತ ಸುದ್ದಿಯಾಯಿತು. ಬೆಂಗಳೂರಿಗೆ ಫೈನಲ್ ಪಂದ್ಯದ ಆತಿಥ್ಯ ಕೈತಪ್ಪಲು ಜನಪ್ರತಿನಿಧಿಗಳ ಆಸೆಬುರುಕತನವೂ ಒಂದು ಕಾರಣವಾಯಿತು. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ದುಷ್ಕರ್ಮಿಗಳು ನಿಷ್ಕ್ರಿಯಗೊಳಿಸಿದ ಪ್ರಕರಣವೂ ನಡೆಯಿತು. ಆಟದ ಘನತೆಗೆ ತಕ್ಕುದಲ್ಲದ ಈ ಘಟನೆಗಳನ್ನು ಮರೆಸುವಂತೆ ಆರ್‌ಸಿಬಿ ತಂಡ ಗೆಲುವು ಸಾಧಿಸಿದೆ. ಈ ಯಶಸ್ಸಿನ ಸಂದರ್ಭದಲ್ಲಿ, ಕಳೆದ ವರ್ಷದ ವಿಜಯೋತ್ಸವ ಸಂದರ್ಭದಲ್ಲಿ ಸಂಭವಿಸಿದ ಕಾಲ್ತುಳಿತದಲ್ಲಿ 11 ಅಭಿಮಾನಿಗಳು ದುರ್ಮರಣಕ್ಕೀಡಾದುದನ್ನು ನೆನಪಿಸಿಕೊಳ್ಳಬೇಕು. ಗೆಲುವಿನ ಸಂಭ್ರಮದಲ್ಲಿ ವಿವೇಕ ಮಸುಕಾಗಬಾರದು ಎನ್ನುವುದನ್ನು ಆ ದುರಂತ ನಮಗೆ ಹೇಳುವಂತಿದೆ. ಆರ್‌ಸಿಬಿ ಗೆಲುವು ಮನರಂಜನೆಯ ಸಾಧ್ಯತೆಯಾಗಿಯಷ್ಟೇ ಉಳಿಯದೆ, ಕರ್ನಾಟಕದ ಕ್ರಿಕೆಟ್ ಬೆಳವಣಿಗೆಗೆ ಪೂರಕವಾಗಿ ಒದಗಬೇಕಾಗಿದೆ.

ಚಾಟಿ

ವಂದೇಮಾತರಂ

ತಾಯಿಯ ಮೇಲೆ ಎಲ್ಲರಿಗೂ ಷರತ್ತಿಲ್ಲದ ಪ್ರೀತಿ, ಕಾಳಜಿ, ಮುನಿಸು, ದೂರು, ಜಗಳ ಭಿನ್ನಮತ ಇದ್ದೇ ಇರುತ್ತದೆ. ಹಾಗೆಯೇ ಮಾತೃಭೂಮಿಯ ಮೇಲೂ... ಅದು ಕಳ್ಳುಬಳ್ಳಿಯ ಸಂಬಂಧ. ಯಾರೂ ಯಾರನ್ನೂ ಶಂಕಿಸಬೇಡಿ ಹುಚ್ಚಪ್ಪಗಳಿರಾ...

ಸವಿತಾ ನಾಗಭೂಷಣ, ಕವಯಿತ್ರಿ, ‘ಫೇಸ್‌ಬುಕ್’ನಿಂದ

ಕಿಡಿನುಡಿ

ಮಂಗಳೂರಿಗೆ ಹೈಕೋರ್ಟ್ ಸಂಚಾರಿ ಪೀಠದ ಬೇಡಿಕೆಯನ್ನು ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳು ಅಲಕ್ಷಿಸಬೇಕು. ಇಂತಹ ಬೇಡಿಕೆಗಳಿಗೆ ಸ್ಪಂದಿಸುತ್ತಾ ಹೋದರೆ ನಾಳೆ ಪ್ರತಿ ಜಿಲ್ಲೆಯವರೂ ಕೇಳುತ್ತಾರೆ.

ವಿವೇಕ್ ಸುಬ್ಬಾರೆಡ್ಡಿ, ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ

25 ವರ್ಷಗಳ ಹಿಂದೆ

ಶನಿವಾರ, 2-6-2001

• ಮೀಸಲಾತಿ: ಇನ್ನಷ್ಟು ವೃತ್ತಿ ಕೋರ್ಸ್‌ಗಳಿಗೆ

ಬೆಂಗಳೂರು, ಜೂ. 1– ಒಂದರಿಂದ 10ನೇ ತರಗತಿವರೆಗೆ ಕನ್ನಡ ಮಾಧ್ಯಮದಲ್ಲಿ ಕಲಿತ ವಿದ್ಯಾರ್ಥಿಗಳಿಗೆ ವೃತ್ತಿ ಶಿಕ್ಷಣದಲ್ಲಿ ನೀಡಿರುವ ಶೇ 5ರಷ್ಟು ಒಳ ಮತ್ತು ಸಮಾನಾಂತರ ಮೀಸಲಾತಿಯನ್ನು ಪಾಲಿಟೆಕ್ನಿಕ್, ಬಿ.ಇಡಿ, ಎಂ.ಇಡಿ, ಬಿ.ಪಿ.ಇಡಿ, ಎಂ.ಪಿ.ಇಡಿ ಮುಂತಾದ ವೃತ್ತಿ ಕೋರ್ಸ್‌ಗಳಿಗೂ ವಿಸ್ತರಿಸಲು ಮುಖ್ಯಮಂತ್ರಿ ಸಮ್ಮತಿಸಿದ್ದಾರೆ.

ಕಳೆದ ತಿಂಗಳು 19ರಂದು ಸೇರಿದ್ದ ಸಂಪುಟ ಸಭೆಯು ತೆಗೆದುಕೊಂಡಿದ್ದ ನಿರ್ಧಾರಕ್ಕೆ ಪೂರಕವಾಗಿ ಮುಖ್ಯಮಂತ್ರಿ ಅವರು ಈ ತೀರ್ಮಾನ ಪ್ರಕಟಿಸಿದ್ದಾರೆ ಎಂದು ತಿಳಿದು ಬಂದಿದೆ.

• ಅರ್ಧದಲ್ಲಿ ಶಾಲೆ ಬಿಡುವ ಮಕ್ಕಳಿಗೆ ತಡೆ; ಆಂದೋಲನ ಇಂದು ಆರಂಭ

ಬೆಂಗಳೂರು, ಜೂ. 1– ರಾಜ್ಯದ ಏಳು ಉತ್ತರ ಜಿಲ್ಲೆಗಳಲ್ಲಿ ಅರ್ಧಕ್ಕೆ ಶಿಕ್ಷಣ ಬಿಡುವ ಮಕ್ಕಳನ್ನು ಮತ್ತೆ ಶಾಲೆಗೆ ಸೇರಿಸಿಕೊಳ್ಳುವ ಆಂದೋಲನವೊಂದು ನಾಳೆ ರಾಯಚೂರು ಜಿಲ್ಲೆಯ ದೇವದುರ್ಗದಲ್ಲಿ ಪ್ರಾರಂಭ ಆಗಲಿದ್ದು, ವಿವರ ಕ್ರಿಯಾ ಯೋಜನೆ ಎರಡು ದಿನಗಳಲ್ಲಿ ಪ್ರಕಟವಾಗಲಿದೆ ಎಂದು ಪ್ರಾಥಮಿಕ ಶಿಕ್ಷಣ ಸಚಿವರಾದ ಎಚ್. ವಿಶ್ವನಾಥ್ ಅವರು ಸುದ್ದಿಗಾರರಿಗೆ ತಿಳಿಸಿದ್ದಾರೆ.

75 ವರ್ಷಗಳ ಹಿಂದೆ

ಶನಿವಾರ, 2-6-1951

• ಪ್ರೌಢಶಾಲೆಗಳಲ್ಲಿ ಕನ್ನಡ ಮಾಧ್ಯಮ

ಬೆಂಗಳೂರು, ಜೂ. 1– ಸಂಸ್ಥಾನದ ಎಲ್ಲಾ ಹೈಸ್ಕೂಲುಗಳಲ್ಲೂ ಕನ್ನಡ ಶಿಕ್ಷಣ ಮಾಧ್ಯಮವನ್ನು ಜಾರಿಗೆ ತರುವ ಪ್ರಶ್ನೆಯನ್ನು ಪರಿಶೀಲಿಸಿ ಸಲಹೆ ಮಾಡಲು ಸರ್ಕಾರ ಶೀಘ್ರದಲ್ಲೆ ತಜ್ಞರ ಸಮಿತಿಯೊಂದನ್ನು ನೇಮಿಸುವುದಾಗಿ ಶಿಕ್ಷಣ ಸಚಿವ ಚೆನ್ನಿಗರಾಮಯ್ಯನವರು ಇಂದು ಶಾಸನ ಸಭೆಯಲ್ಲಿ ತಿಳಿಸಿದರು. ವಿ. ವೆಂಕಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಪ್ರಶ್ನೋತ್ತರಗಳಾದ ನಂತರ ಖಾಸಗಿ ನಿರ್ಣಯಗಳ ಮೇಲೆ ಚರ್ಚೆ ನಡೆಯಿತು.

ಸರಿಯಾದ ಕಟ್ಟಡ, ತೋಟ ಮತ್ತು ಆಟಗಳಿಗೆ ಸಾಕಷ್ಟು ಸ್ಥಳಾವಕಾಶ, ನುರಿತ ಶಿಕ್ಷಕವರ್ಗ, ಇತರ ಶಿಕ್ಷಣ ಸಾಧನಗಳು, ಸರಿಯಾದ ಪರಿಶೀಲನೆ ಈ ಏರ್ಪಾಡುಗಳಿಂದ ಸಂಸ್ಥಾನದ ಪ್ರಾಥಮಿಕ ಶಾಲೆಗಳ ಸ್ಥಿತಿಯನ್ನು ಉತ್ತಮಪಡಿಸಲು ತಕ್ಕ ಕ್ರಮಗಳನ್ನು ಕೈಗೊಳ್ಳಬೇಕೆಂಬ ನಿರ್ಣಯವನ್ನು ಟಿ. ಮಾದಯ್ಯ ಗೌಡ ಅವರು ಮಂಡಿಸಿದರು.

ಕೋಚಿಂಗ್ ದಂಧೆಗೆ ‘ನೀಟ್’ ಹೆದ್ದಾರಿ

ವಿಶ್ಲೇಷಣೆ

ನಿರಂಜನಾರಾಧ್ಯ ವಿ.ಪಿ.

> ನೀಟ್ ಪರೀಕ್ಷೆ ನಡೆಸುವಲ್ಲಿನ ವೈಫಲ್ಯವು ಆಡಳಿತಾತ್ಮಕ ಲೋಪವಷ್ಟೇ ಅಲ್ಲ. ಅದು, ಯಾವುದೇ ಕ್ಷೇತ್ರ ಅತಿಯಾದ ಕೇಂದ್ರೀಕರಣಕ್ಕೆ ಒಳಗಾದಾಗ ಸಂಭವಿಸಬಹುದಾದ ಅಪಾಯದ ಸಂಕೇತ. ನೀಟ್‌ನಂತಹ ಪರೀಕ್ಷಾವ್ಯವಸ್ಥೆಯು ಕೋಚಿಂಗ್ ದಂಧೆಗೆ ಪೂರಕವಾಗಿದ್ದು, ಮಾನವೀಯ ಸಾಧ್ಯತೆಗಳಿಂದ ಶಿಕ್ಷಣವನ್ನು ವಿಮುಖಗೊಳಿಸುತ್ತದೆ.

ದೇಶದಾದ್ಯಂತ ಪ್ರವೇಶ ಪರೀಕ್ಷೆಗಳನ್ನು ಒಂದೇ ವ್ಯವಸ್ಥೆಯಡಿ ನಡೆಸುವ ಉದ್ದೇಶದಿಂದ ಕೇಂದ್ರ ಸರ್ಕಾರ 2017ರಲ್ಲಿ ‘ರಾಷ್ಟ್ರೀಯ ಪರೀಕ್ಷಾ ಸಂಸ್ಥೆ’ಯನ್ನು (ಎನ್‌ಟಿಎ) ಸ್ಥಾಪಿಸಿತು. ‘ರಾಷ್ಟ್ರೀಯ ಶಿಕ್ಷಣ ನೀತಿ 2020’ ಇದನ್ನು ನೀತಿಯನ್ನಾಗಿಸುವ ಮೂಲಕ ಕೇಂದ್ರೀಕೃತ ಪರೀಕ್ಷಾ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸಿ ಜಾರಿಗೊಳಿಸಿತು. ಭಾಷೆ, ಸಾಮಾಜಿಕ ಮತ್ತು ಪ್ರಾದೇಶಿಕ ವೈವಿಧ್ಯಗಳನ್ನು ಪರಿಗಣಿಸದೆ ಒಂದೇ ಮಾದರಿಯ ಪರೀಕ್ಷೆಗಳನ್ನು ಹೇರುವುದು ಒಕ್ಕೂಟ ವ್ಯವಸ್ಥೆಗೆ ಮಾರಕ ಎಂಬ ಟೀಕೆಗಳನ್ನು ಲೆಕ್ಕಿಸದೆ ‘ಒಂದು ಭಾಷೆ, ಒಂದು ದೇಶ, ಒಂದು ಪರೀಕ್ಷೆ’ ಎಂಬ ತನ್ನ ರಾಜಕೀಯ ಅಜೆಂಡಾವನ್ನು ಸರ್ಕಾರ ಜಾರಿಗೊಳಿಸಿತು. ವೈದ್ಯಕೀಯ ಪ್ರವೇಶಕ್ಕಾಗಿ ರೂಪುಗೊಂಡ ರಾಷ್ಟ್ರೀಯ ‘ನೀಟ್’ ಪರೀಕ್ಷೆಯು ರಾಜ್ಯಮಟ್ಟದಲ್ಲಿದ್ದ ವೈವಿಧ್ಯಮಯ ಪ್ರವೇಶ ಪರೀಕ್ಷಾ ವ್ಯವಸ್ಥೆಗಳನ್ನು ಅನೂರ್ಜಿತಗೊಳಿಸಿತು.

ನೀಟ್–2026 ಪರೀಕ್ಷೆ ರದ್ದಾದ ಘಟನೆಯು ಭಾರತದ ಶಿಕ್ಷಣ ವ್ಯವಸ್ಥೆಯ ಆಳವಾದ ಸಾಂಸ್ಥಿಕ ಬಿಕ್ಕಟ್ಟು ಹಾಗೂ ಅನಾರೋಗ್ಯಕರ ಶಿಕ್ಷಣ ಮಾರುಕಟ್ಟೆಯ ಸ್ಪರ್ಧೆಯನ್ನು ಮತ್ತೊಮ್ಮೆ ಬಹಿರಂಗಪಡಿಸಿದೆ. ಪ್ರಶ್ನೆಪತ್ರಿಕೆ ಸೋರಿಕೆ ಹಾಗೂ ಅಕ್ರಮಗಳ ಆರೋಪಗಳ ಹಿನ್ನೆಲೆಯಲ್ಲಿ ಪರೀಕ್ಷೆಯನ್ನು ರದ್ದುಗೊಳಿಸಿದ ಕ್ರಮವು ಲಕ್ಷಾಂತರ ವಿದ್ಯಾರ್ಥಿಗಳು ಮತ್ತು ಅವರ ಕುಟುಂಬಗಳಿಗೆ ಮಾನಸಿಕ ಮತ್ತು ಶೈಕ್ಷಣಿಕ ಆಘಾತ ಉಂಟುಮಾಡಿದೆ. ವೈದ್ಯಕೀಯ ಶಿಕ್ಷಣದ ಕನಸುಗಳನ್ನು ಸಾಕಾರಗೊಳಿಸಲು ವರ್ಷಗಳ ಕಾಲ ಪಟ್ಟ ಕಠಿಣ ಪರಿಶ್ರಮ, ಅಪಾರ ಆರ್ಥಿಕ ವೆಚ್ಚ, ನಿರಂತರ ಸ್ಪರ್ಧಾತ್ಮಕ ಒತ್ತಡ ವಿದ್ಯಾರ್ಥಿಗಳ ಬದುಕನ್ನು ಮರುಪರೀಕ್ಷೆಯ ಅನಿಶ್ಚಿತತೆಗೆ ದೂಡಿದೆ. ಈ ವೈಫಲ್ಯ ‘ಎನ್‌ಟಿಎ’ಯ ಆಡಳಿತಾತ್ಮಕ ಅಥವಾ ಕಾನೂನು ಬಿಗಿ ಭದ್ರತೆಯ ವೈಫಲ್ಯ ಮಾತ್ರವಲ್ಲ; ಅದು, ಶಿಕ್ಷಣದ ಖಾಸಗೀಕರಣ, ವ್ಯಾಪಾರೀಕರಣ, ಅತಿಯಾದ ಕೇಂದ್ರೀಕರಣದ ಜೊತೆಗೆ ಅನಿಯಂತ್ರಿತ ಕೋಚಿಂಗ್ ದಂಧೆ ಆಧಾರಿತ ಸ್ಪರ್ಧಾತ್ಮಕ ಪ್ರಮಾಣೀಕೃತ ಪರೀಕ್ಷೆಗಳಿಗೆ ಜೋತು ಬಿದ್ದು ಶಿಕ್ಷಣವನ್ನು ಲಾಭದಾಯಕ ಉದ್ದಿಮೆಯನ್ನಾಗಿಸಿರುವ ವ್ಯವಸ್ಥೆಯ ವೈಫಲ್ಯವೂ ಆಗಿದೆ.

ಸ್ವಾತಂತ್ರ್ಯಾನಂತರ ಭಾರತೀಯ ಶಿಕ್ಷಣ ಚಿಂತನೆ ಸಾಂವಿಧಾನಿಕ ಮೌಲ್ಯಗಳಾದ ಸಮಾನತೆ, ಸಾಮಾಜಿಕ ನ್ಯಾಯ ಮತ್ತು ಕಲ್ಯಾಣ ರಾಷ್ಟ್ರ ನಿರ್ಮಾಣದ ಮೌಲ್ಯಗಳಿಂದ ಪ್ರಭಾವಿತವಾಗಿತ್ತು. ವ್ಯಾಪಕ ಅಧ್ಯಯನದ ಮೂಲಕ ಶಿಕ್ಷಣವನ್ನು ಸಮಗ್ರವಾಗಿ ವಿಶ್ಲೇಷಿಸಿದ ಮೊದಲ ಶಿಕ್ಷಣ ಆಯೋಗ (ಕೊಠಾರಿ ಆಯೋಗ, 1966), ಶಿಕ್ಷಣವನ್ನು ಸಾಮಾಜಿಕ ಪರಿವರ್ತನೆ ಮತ್ತು ಪ್ರಜಾಪ್ರಭುತ್ವವನ್ನು ಬಲವರ್ಧನೆಗೊಳಿಸುವ ಸಾಧನವನ್ನಾಗಿ ಪರಿಗಣಿಸಿತು. ನೆರೆಹೊರೆ ತತ್ತ್ವದ ಸಮಾನ ಶಾಲಾ ವ್ಯವಸ್ಥೆ, ಪ್ರಾದೇಶಿಕ ಅಸಮಾನತೆ ನಿವಾರಣೆ, ಗುಣಾತ್ಮಕ ಶಿಕ್ಷಣ, ಜಿಡಿಪಿಯ ಶೇ 6ರಷ್ಟು ಹೂಡಿಕೆ ಮತ್ತು ಸಾರ್ವಜನಿಕ ಶಿಕ್ಷಣದ ಬಲವರ್ಧನೆ ಪ್ರಮುಖ ಆಶಯಗಳಾಗಿದ್ದವು. ಶಿಕ್ಷಣವನ್ನು ಮಾನವಹಕ್ಕು ಮತ್ತು ಸರ್ಕಾರದ ಜವಾಬ್ದಾರಿಯಾಗಿ ನೋಡಲಾಯಿತು. ಆದರೆ, 1980ರ ದಶಕದ ಅಂತ್ಯಕ್ಕೆ ಪ್ರಾರಂಭವಾದ ಆರ್ಥಿಕ ಉದಾರೀಕರಣದ ನಂತರ ಶಿಕ್ಷಣ ಕ್ಷೇತ್ರ ಮಾರುಕಟ್ಟೆಗೆ ತೆರೆದುಕೊಂಡಿತು.

ಶಿಕ್ಷಣದ ಖಾಸಗೀಕರಣ ಹಾಗೂ ವ್ಯಾಪಾರೀಕರಣದ ಹೊಸ ಸಂಕಥನ ನ್ಯಾಯಾಲಯಗಳ ಮೇಲೂ ಪ್ರಭಾವ ಬೀರಿತು. ಭಾರತದಲ್ಲಿ ಶಿಕ್ಷಣದ ಅಧಿಕೃತ ವ್ಯಾಪಾರೀಕರಣಕ್ಕೆ ನ್ಯಾಯಾಂಗದ ಹಲವು ಪ್ರಮುಖ ತೀರ್ಪುಗಳು ನೆಲೆ ಒದಗಿಸಿದವು. ಸಂವಿಧಾನದ ಮೂಲ ಆಶಯಗಳ ರಕ್ಷಣೆ ಮಾಡಬೇಕಿದ್ದ ನ್ಯಾಯಾಲಯಗಳು ಶಿಕ್ಷಣ ಸಂಸ್ಥೆಗಳ ಸ್ಥಾಪನೆ ಮತ್ತು ನಿರ್ವಹಣೆಯನ್ನು ಸಂವಿಧಾನದ ವಿಧಿ 19(1)ಜಿ ಅಡಿಯಲ್ಲಿ ‘ವೃತ್ತಿ/ಉದ್ಯೋಗ’ ಎಂದು ವ್ಯಾಖ್ಯಾನಿಸಿದವು (ಟಿಎಂಎಪೈ ಫೌಂಡೇಶನ್ 2002; ಇಸ್ಲಾಮಿಕ್ ಅಕಾಡೆಮಿ 2003; ಪಿ.ಎ. ಇನಾಮದಾರ್ 2005; ಮಾಡರ್ನ್ ಡೆಂಟಲ್ ಕಾಲೇಜು 2016). ಸಮಾಧಾನದ ಸಂಗತಿಯೆಂದರೆ, ನ್ಯಾಯಾಲಯಗಳು ಶಿಕ್ಷಣ ಸಂಸ್ಥೆಗಳ ಸ್ಥಾಪನೆ ಹಾಗೂ ನಿರ್ವಹಣೆ ಉದ್ಯೋಗ ಎಂದು ಹೇಳುತ್ತಲೇ, ಶಿಕ್ಷಣವನ್ನು ಅಬಾಧಿತ ‘ವ್ಯಾಪಾರ’ ಅಥವಾ ಲಾಭದಾಯಕ ವಾಣಿಜ್ಯ ಚಟುವಟಿಕೆ ಎಂದು ಪರಿಗಣಿಸಲು ನಿರಾಕರಿಸಿದವು. ಖಾಸಗಿ ಅನುದಾನರಹಿತ ಮತ್ತು ಅಲ್ಪಸಂಖ್ಯಾತ ಸಂಸ್ಥೆಗಳಿಗೆ ಸ್ವಾಯತ್ತತೆ ಇರಬೇಕೆಂದರೂ, ಪ್ರವೇಶ ಮತ್ತು ಶುಲ್ಕದಲ್ಲಿ ಪಾರದರ್ಶಕತೆ, ಪ್ರತಿಭೆ ಮತ್ತು ಶಿಕ್ಷಣದ ಹೆಸರಿನಲ್ಲಿ ಶೋಷಣೆಯ ನಿಯಂತ್ರಣ ಅಗತ್ಯವೆಂದು ಒತ್ತಿ ಹೇಳಿದವು. ಶಿಕ್ಷಣ ವೃತ್ತಿಯಾಗಬಹುದು, ಆದರೆ ಅದನ್ನು ನಿಯಂತ್ರಣರಹಿತ ವ್ಯಾಪಾರ ಅಥವಾ ಲಾಭದಾಯಕ ಉದ್ಯಮವನ್ನಾಗಿ ಮಾಡಲಾಗದು ಎಂದು ನ್ಯಾಯಾಲಯಗಳು ಸ್ಪಷ್ಟಪಡಿಸಿದವು.

ಸಂವಿಧಾನದ ಮೂಲಭೂತ ಹಕ್ಕುಗಳನ್ನು ರಾಜ್ಯ ನಿರ್ದೇಶಕಗಳ ಜೊತೆಗೆ ಸಮೀಕರಿಸಿದ ಸುಪ್ರೀಂ ಕೋರ್ಟ್ ಕೇಶವಾನಂದ ಭಾರತಿ (1973) ಮತ್ತು ಮಿನರ್ವ ಮಿಲ್ಸ್‌ನ (1980) ತೀರ್ಪುಗಳಲ್ಲಿ ಮೂಲಭೂತ ಹಕ್ಕುಗಳು ಮತ್ತು ರಾಜ್ಯ ನಿರ್ದೇಶಕ ತತ್ತ್ವಗಳಿಗೆ ಪರಸ್ಪರ ವಿರೋಧವಿಲ್ಲ, ಅವು ಸಂವಿಧಾನದ ‘ಸಾಮಾಜಿಕ ಕ್ರಾಂತಿ’ಯ ಗುರಿಯನ್ನು ಸಾಧಿಸುವ ಪೂರಕ ಅಂಶಗಳು ಎಂದು ಹೇಳಿತು.

ನ್ಯಾಯಾಲಯಗಳು ಸಾಂವಿಧಾನಿಕ ನೆಲೆಯಲ್ಲಿ ಶಿಕ್ಷಣ ಕ್ಷೇತ್ರ ಸಾರ್ವಜನಿಕ ಹಿತದೃಷ್ಟಿಯಿಂದ ಕಾರ್ಯನಿರ್ವಹಿಸಬೇಕೆಂಬುದನ್ನು ಒತ್ತಿಹೇಳಿದರೂ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಈ ತತ್ತ್ವಗಳನ್ನು ಸಮಗ್ರವಾಗಿ ಅಳವಡಿಸಿಕೊಂಡು ನೀತಿಗಳನ್ನು ರೂಪಿಸಲು ವಿಫಲವಾದವು. ಒಂದೆಡೆ, ಶಿಕ್ಷಣದ ಮೇಲಿನ ಹೂಡಿಕೆ ಕುಸಿಯುತ್ತಾ ಸಾರ್ವಜನಿಕ ಶಿಕ್ಷಣ ದುರ್ಬಲವಾಗತೊಡಗಿತು; ಮತ್ತೊಂದೆಡೆ, ಶಿಕ್ಷಣದ ಖಾಸಗೀಕರಣ ಮತ್ತು ವ್ಯಾಪಾರೀಕರಣ ನಾಗಾಲೋಟದಿಂದ ಸಾಗಿತು. ಭಾರತದ ಶಿಕ್ಷಣ ಕ್ಷೇತ್ರ ಇಂದು ವಿಶ್ವದ ಅತಿದೊಡ್ಡ ಖಾಸಗಿ ಮಾರುಕಟ್ಟೆಗಳಲ್ಲಿ ಒಂದಾಗಿದೆ. ಇಂಡಿಯಾ ಬ್ರಾಂಡ್ ಇಕ್ವಿಟಿ ಫೌಂಡೇಶನ್ ವರದಿಯ ಪ್ರಕಾರ, 2030ರ ವೇಳೆಗೆ ಭಾರತದ ಶಿಕ್ಷಣ ಮಾರುಕಟ್ಟೆ ಸುಮಾರು 313 ಬಿಲಿಯನ್ ಅಮೆರಿಕನ್ ಡಾಲರ್ ಮೌಲ್ಯ (29.95 ಲಕ್ಷ ಕೋಟಿ ರೂಪಾಯಿಗಳು) ತಲಪುವ ಸಾಧ್ಯತೆ ಇದೆ.

ವಿವಿಧ ಮಾರುಕಟ್ಟೆ ಅಧ್ಯಯನಗಳ ಪ್ರಕಾರ, 2024ರಲ್ಲಿ ಭಾರತದ ಕೋಚಿಂಗ್ ಉದ್ಯಮದ ಮೌಲ್ಯವು ಸುಮಾರು ₹58,000 ಕೋಟಿಗಳಷ್ಟಿದ್ದು, 2028ರ ವೇಳೆಗೆ ಅದು ₹1.3 ಲಕ್ಷ ಕೋಟಿಯನ್ನು ಮೀರುವ ಸಾಧ್ಯತೆ ಇದೆ. ಈ ಉದ್ಯಮವು ವರ್ಷಕ್ಕೆ ಸುಮಾರು ಶೇ 10–12ರ ವೃದ್ಧಿದರದಲ್ಲಿ ಬೆಳೆಯುತ್ತಿದೆ ಎಂದು ಮಾರುಕಟ್ಟೆ ವಿಶ್ಲೇಷಣೆಗಳು ಸೂಚಿಸುತ್ತವೆ. ಈ ಅನಿರ್ಬಂಧಿತ ವ್ಯಾಪಾರೀಕರಣವು ಪಾಲಕರ ಅಸಹಾಯಕತೆ, ವಿದ್ಯಾರ್ಥಿಗಳ ಆತಂಕ, ನಿರುದ್ಯೋಗ, ಸಾಮಾಜಿಕ ಅಸುರಕ್ಷತೆಯನ್ನು ಬಳಸಿಕೊಳ್ಳುತ್ತಿವೆ. ಸರ್ಕಾರಗಳ ನಿರ್ಲಿಪ್ತತೆಯಿಂದಾಗಿ ಖಾಸಗಿ ಸಂಸ್ಥೆಗಳು ಶಿಕ್ಷಣವನ್ನು ದೊಡ್ಡ ವಾಣಿಜ್ಯ ಮಾರುಕಟ್ಟೆಯಾಗಿ ಪರಿವರ್ತಿಸಿ ಅಧಿಕ ಲಾಭಗಳಿಸಲಾರಂಭಿಸಿವೆ. ನೀಟ್ ಪ್ರಶ್ನೆಪತ್ರಿಕೆ ಸೋರಿಕೆಯ ಮೂಲ ಈ ಕೋಚಿಂಗ್ ದಂಧೆಯ ಲಾಭಕೋರ ವ್ಯವಸ್ಥೆಯ ಒಳಸುಳಿಯಲ್ಲಿದೆ.

ಭಾರತದ ಬಹುತೇಕ ನಗರಗಳಲ್ಲಿ ಶಾಲೆಗಳು ‘ಡಮ್ಮಿ ಶಾಲೆ’ಗಳಾಗಿ ರೂಪಾಂತರಗೊಂಡಿವೆ. ಕೋಚಿಂಗ್ ವ್ಯವಸ್ಥೆ ಭಾರತದ ಶಾಲಾ ಶಿಕ್ಷಣದ ಮೂಲ ಉದ್ದೇಶ ಹಾಗೂ ಸ್ವರೂಪವನ್ನೇ ಬದಲಾಯಿಸಿದೆ. ಶಿಕ್ಷಣವೆಂದರೆ ಕಲಿಕೆ, ಸಾಮಾಜೀಕರಣ, ಸಾಮಾಜಿಕ ನ್ಯಾಯ ಹಾಗೂ ಸಮ ಸಮಾಜದ ನಿರ್ಮಾಣ ಎಂಬ ಮೂಲ ಕಲ್ಪನೆಯನ್ನು ಬದಲಾಯಿಸಿ, ಶಿಕ್ಷಣವನ್ನು ತರಬೇತಿ, ಪರೀಕ್ಷೆ, ವೈಯಕ್ತಿಕ ಸಾಧನೆ, ಅಧಿಕ ಗಳಿಕೆ ಹಾಗೂ ಒಬ್ಬರನ್ನು ಸೋಲಿಸಿ ಮತ್ತೊಬ್ಬರು ಗೆಲ್ಲುವ ಅನಾರೋಗ್ಯಕರ ಸ್ಪರ್ಧೆಯನ್ನಾಗಿ ಪರಿವರ್ತಿಸಿದೆ.

ಕೇಂದ್ರೀಕೃತ ಪರೀಕ್ಷಾ ವ್ಯವಸ್ಥೆಯು ಕೋಚಿಂಗ್ ಉದ್ಯಮಕ್ಕೆ ದೊಡ್ಡ ಮಾರುಕಟ್ಟೆಯನ್ನು ನಿರ್ಮಿಸುತ್ತದೆ. ಪರೀಕ್ಷೆಗಳ ಮಾದರಿ ಮತ್ತು ಸ್ವರೂಪ ಪ್ರಮಾಣೀಕೃತವಾಗಿರುವುದರಿಂದ ಕೋಚಿಂಗ್ ಸಂಸ್ಥೆಗಳು ಪ್ರಶ್ನೆಗಳ ಬ್ಯಾಂಕ್, ಮಾದರಿ ಪರೀಕ್ಷೆ, ತಂತ್ರಾಧಾರಿತ ತರಬೇತಿ ಮತ್ತು ಪುನರಾವರ್ತಿತ ಅಭ್ಯಾಸಗಳ ಮೂಲಕ ವಿದ್ಯಾರ್ಥಿಗಳನ್ನು ಸಿದ್ಧಗೊಳಿಸುತ್ತವೆ. ಈ ವ್ಯವಸ್ಥೆಯೊಳಗೆ ದೊಡ್ಡ ಪ್ರಮಾಣದ ಮಧ್ಯವರ್ತಿಗಳು, ಅಂತರರಾಜ್ಯ ಅಕ್ರಮ ಜಾಲಗಳು ಮತ್ತು ಪ್ರಶ್ನೆಪತ್ರಿಕೆ ಸೋರಿಕೆಗಳಂತಹ ಅಕ್ರಮ ಚಟುವಟಿಕೆಗಳು ಬೆಳೆಯಲು ಅನುಕೂಲಕರ ವಾತಾವರಣ ನಿರ್ಮಾಣವಾಗುತ್ತದೆ. ಹೀಗಾಗಿ ಪ್ರಶ್ನೆಪತ್ರಿಕೆ ಸೋರಿಕೆಗಳು ಬರೀ ವೈಯಕ್ತಿಕ ಅಪರಾಧಗಳಾಗಿರದೆ, ಶಿಕ್ಷಣದ ವ್ಯಾಪಾರೀಕರಣ ಮತ್ತು ಅತಿಸ್ಪರ್ಧಾತ್ಮಕ ಪರೀಕ್ಷಾ ವ್ಯವಸ್ಥೆಯ ರಾಚನಿಕ ಪರಿಣಾಮಗಳಾಗಿವೆ. ಒಂದು ಬಗೆಯ ಮಾಫಿಯಾ ಕೇಂದ್ರಗಳಾಗಿವೆ.

ನೀಟ್ ಬಿಕ್ಕಟ್ಟು ಭಾರತದ ಶಿಕ್ಷಣ ವ್ಯವಸ್ಥೆಯಲ್ಲಿ ಅತಿಯಾದ ಖಾಸಗೀಕರಣ, ವ್ಯಾಪಾರೀಕರಣ ಮತ್ತು ಕೇಂದ್ರೀಕರಣದ ಮೂಲಕ ಮಾರುಕಟ್ಟೆಕೇಂದ್ರಿತ ಪರಿವರ್ತನೆಯ ಸಂಕೇತವಾಗಿದೆ. ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ಸಮರ್ಪಕವಾಗಿ ಬಲಪಡಿಸದೆ, ಗ್ರಾಮೀಣ–ನಗರ, ವರ್ಗ, ಲಿಂಗ, ಭಾಷಾ ಮತ್ತು ಪ್ರಾದೇಶಿಕ ಅಸಮಾನತೆಗಳನ್ನು ನಿವಾರಿಸದೆ, ಕೇಂದ್ರೀಕೃತ ಪ್ರವೇಶ ಪರೀಕ್ಷೆಗಳ ಮೂಲಕ ‘ಪ್ರತಿಭೆ’ಯನ್ನು ಅಳೆಯುವ ಹಾಗೂ ಆಯ್ಕೆ ಮಾಡುವ ಶಿಕ್ಷಣ ವ್ಯವಸ್ಥೆಯು ಸಂವಿಧಾನದ ಸಮಾನತೆ, ಸಾಮಾಜಿಕ ನ್ಯಾಯ ಮತ್ತು ಪ್ರಜಾಸತ್ತಾತ್ಮಕ ಮೌಲ್ಯಗಳಿಗೆ ವಿರುದ್ಧವಾಗಿದೆ. ಇಂತಹ ವ್ಯವಸ್ಥೆ ಶಿಕ್ಷಣವನ್ನು ಹಕ್ಕಾಗಿ ಕಾಣುವುದಕ್ಕಿಂತ ಸ್ಪರ್ಧಾತ್ಮಕ ಮಾರುಕಟ್ಟೆಯ ವಸ್ತುವಾಗಿ ಮತ್ತು ವೈಯುಕ್ತಿಕ ಲಾಭದ ಸಾಧನವನ್ನಾಗಿ ಪರಿವರ್ತಿಸುತ್ತದೆ. ಶಿಕ್ಷಣವನ್ನು ಸಾರ್ವಜನಿಕ ಒಳಿತಿನ ಮತ್ತು ಸಾಮಾಜಿಕ ನ್ಯಾಯದ ಸಾಧನವಾಗಿ ಪುನರ್‌ವ್ಯಾಖ್ಯಾನಿಸುವುದು ತುರ್ತು ಅಗತ್ಯವಾಗಿದೆ. ಸರ್ಕಾರಿ ಶಾಲಾ ಶಿಕ್ಷಣದ ಗುಣಮಟ್ಟವನ್ನು ಅಭಿವೃದ್ಧಿಪಡಿಸುವುದು, ಪ್ರಾದೇಶಿಕ ಹಾಗೂ ಭಾಷಾ ವೈವಿಧ್ಯವನ್ನು ಗೌರವಿಸುವುದು, ಖಾಸಗಿ ಶಿಕ್ಷಣ ಸಂಸ್ಥೆ ಮತ್ತು ಕೋಚಿಂಗ್ ಉದ್ಯಮಗಳ ಮೇಲಿನ ಕಟ್ಟುನಿಟ್ಟಿನ ನಿಯಂತ್ರಣವನ್ನು ಜಾರಿಗೊಳಿಸುವುದು ಸಂವಿಧಾನದ ದೃಷ್ಟಿಯಿಂದ ನಿರ್ಣಾಯಕವಾಗುತ್ತದೆ.

ವಾಚಕರ ವಾಣಿ

ಹೊಸ ಸರ್ಕಾರ: ಜನರ ತೆರಿಗೆ ಹಣ ವ್ಯರ್ಥ

ರಾಜ್ಯದಲ್ಲಿ ಹೊಸ ಮುಖ್ಯಮಂತ್ರಿಯ ಪದಗ್ರಹಣಕ್ಕೆ ತಯಾರಿ ನಡೆದಿದೆ. ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದಾಗ ಜನರ ತೆರಿಗೆ ಹಣವೂ ವ್ಯರ್ಥವಾಗುತ್ತದೆ. ಇದಕ್ಕೆ ಕೆಎಸ್‌ಆರ್‌ಟಿಸಿ, ಬಿಎಂಟಿಸಿ ಬಸ್‌ಗಳ ಮೇಲೆ ಅಳವಡಿಸಿರುವ ಸರ್ಕಾರಿ ಯೋಜನೆಗಳ ಕುರಿತ ಪೋಸ್ಟರ್‌ಗಳೇ ನಿದರ್ಶನ. ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಬಳಿಕ ಬಸ್‌ಗಳ ಮೇಲೆ ಹಾಕಿರುವ ಪೋಸ್ಟರ್, ಜಾಹೀರಾತು, ಬ್ಯಾನರ್ ಇತ್ಯಾದಿ ಬದಲಾಯಿಸಿ ಹೊಸದಾಗಿ ಅಳವಡಿಸಬೇಕಿದೆ. ಇದಕ್ಕಾಗಿ ಕೋಟ್ಯಂತರ ರೂಪಾಯಿ ಖರ್ಚಾಗುತ್ತದೆ. ಈಗಾಗಲೇ ಸರ್ಕಾರವು ಗ್ಯಾರಂಟಿ ಯೋಜನೆಗಳಿಂದ ಬಸವಳಿದಿದೆ. ಹಾಗಾಗಿ, ಈ ಬಗ್ಗೆ ಸಕಾರಾತ್ಮಕವಾಗಿ ಯೋಚಿಸಿ ಸಾರ್ವಜನಿಕರ ಹಣ ಪೋಲಾಗದಂತೆ ಎಚ್ಚರವಹಿಸಲಿ.

ಗೋವಿಂದ ಎಸ್. ಭಟ್, ಶಿರಸಿ

ಮಕ್ಕಳು ಕೌಟುಂಬಿಕ ಪರಿಸರದ ಕನ್ನಡಿ!

ಮಕ್ಕಳು ಓದುತ್ತಿಲ್ಲವೆಂದು ಪೋಷಕರು ದೂರುವುದು ಸರ್ವೇ ಸಾಮಾನ್ಯ. ಆದರೆ, ಮನೆಗಳಲ್ಲಿ ಪೋಷಕರು ಹೇಗೆ ನಡೆದುಕೊಳ್ಳುತ್ತಾರೆ, ಮನೆಯ ವಾತಾವರಣ ಹೇಗಿದೆ ಎನ್ನುವುದರ ಮೇಲೆ ಮಕ್ಕಳು ಸ್ವಯಂಪ್ರೇರಿತರಾಗಿ ಓದುತ್ತಾರೆ. ಕೆಲವು ಮಕ್ಕಳು ಆ ಮನೆಯ ವಾತಾವರಣಕ್ಕೆ ಹೊಂದಿಕೊಳ್ಳಲು ಆಗದೆ ಓದದೇ ಇರಬಹುದು. ಪೋಷಕರು ಮೊಬೈಲ್ ನೋಡುತ್ತಾ ಕೂರುವುದು, ಧಾರಾವಾಹಿ ನೋಡುವುದು, ಸಣ್ಣಪುಟ್ಟ ವಿಚಾರಗಳಿಗೆ ದಂಪತಿ ನಡುವೆ ಜಗಳ – ಇವೆಲ್ಲ ಮಕ್ಕಳ ಬೌದ್ಧಿಕತೆಯ ಮೇಲೆ ಪರಿಣಾಮ ಬೀರುತ್ತವೆ. ಹಾಗಾಗಿ, ಮನೆಯಲ್ಲಿನ ಹಿರಿಯರು ಶಿಸ್ತು, ಬದ್ಧತೆ, ತಾಳ್ಮೆ, ಸಹನೆ ಹಾಗೂ ಕ್ರಿಯಾತ್ಮಕವಾಗಿ ನಡೆದುಕೊಳ್ಳಬೇಕು.

ಪ್ರಸನ್ನಕುಮಾರ್ ಕೆ., ಪೆತ್ತಾಂಡ್ಲಹಳ್ಳಿ

ಶುಲ್ಕಕ್ಕೆ ಕಡಿವಾಣ: ಇಚ್ಛಾಶಕ್ತಿ ಪ್ರದರ್ಶಿಸಿ

ತಮಿಳುನಾಡಿನಲ್ಲಿ ಮುಖ್ಯಮಂತ್ರಿ ಜೋಸೆಫ್ ವಿಜಯ್ ಅವರು, ಖಾಸಗಿ ಶಾಲೆಗಳ ಪ್ರವೇಶಕ್ಕಾಗಿ ಸರ್ಕಾರ ನಿಗದಿಪಡಿಸಿರುವ ಬೋಧನಾಶುಲ್ಕವನ್ನು ಸೂಚನಾ ಫಲಕದಲ್ಲಿ ಪ್ರಕಟಿಸಬೇಕು; ಹೆಚ್ಚಿನ ಶುಲ್ಕ ಪಡೆಯಬಾರದು ಎಂದು ಆದೇಶಿಸಿದ್ದಾರೆ. ಪೋಷಕರಿಂದ ದೂರು ಬಂದರೆ ಕಾನೂನು ಕ್ರಮ ಕೈಗೊಳ್ಳುವ ಎಚ್ಚರಿಕೆ ನೀಡಿದ್ದಾರೆ. ಕರ್ನಾಟಕದಲ್ಲಿ ಖಾಸಗಿ ಶಾಲೆಗಳು ಪ್ರಸಕ್ತ ಶೈಕ್ಷಣಿಕವರ್ಷದಲ್ಲಿ ಶುಲ್ಕವನ್ನು ಮನಸೋಇಚ್ಛೆ ಹೆಚ್ಚಿಸಿವೆ. ಬಹಳಷ್ಟು ಶಾಲಾ ಕಾಲೇಜುಗಳು ರಾಜಕಾರಣಿಗಳು ಮತ್ತು ಮಠಾಧೀಶರ ಹಿಡಿತದಲ್ಲಿವೆ. ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಲಿರುವ ಡಿ.ಕೆ. ಶಿವಕುಮಾರ್ ಅವರು ರಾಜ್ಯದಲ್ಲೂ ಶುಲ್ಕ ಕಡಿವಾಣಕ್ಕೆ ಇಚ್ಛಾಶಕ್ತಿ-ಬದ್ಧತೆ ಪ್ರದರ್ಶಿಸಲಿ.

ಬೂಕನಕೆರೆ ವಿಜೇಂದ್ರ, ಮೈಸೂರು

ಬದುಕಿನ ಗಾಯನ ಮುಗಿಸಿದ ಸುಮನ್

ಸುಪ್ರಸಿದ್ಧ ಹಿನ್ನೆಲೆ ಗಾಯಕಿ ಸುಮನ್ ಕಲ್ಯಾಣಪುರ್ ಅವರು ನಿಧನರಾಗಿದ್ದಾರೆ. ಬಾಂಗ್ಲಾದೇಶದ ಢಾಕಾದಲ್ಲಿ ಜನಿಸಿದ್ದ ಅವರ ಬೇರುಗಳು ಕರ್ನಾಟಕದ ಉಡುಪಿಯಲ್ಲೂ ಬೆಸೆದುಕೊಂಡಿರುವುದು ಕನ್ನಡಿಗರಿಗೆ ಹೆಮ್ಮೆಯ ಸಂಗತಿ. ಕನ್ನಡದ ಕೆಲವು ಚಿತ್ರಗಳ ಹಾಡಿಗೆ ಅವರು ಜೀವ ತುಂಬಿದ್ದಾರೆ. ಅದರಲ್ಲೂ ‘ಕಲಾವತಿ’ ಚಿತ್ರದ ‘ಒಡನಾಡಿ ಬೇಕೆಂದು...’ ಹಾಡು ಈಗಲೂ ಕೇಳಬೇಕೆನ್ನುವಷ್ಟು ಮಧುರವಾಗಿದೆ. ಲತಾ ಮಂಗೇಶ್ಕರ್ ಅವರ ಪ್ರಭಾವದ ನಡುವೆಯೂ ಬಾಲಿವುಡ್‌ನಲ್ಲಿ ಸ್ವಂತಿಕೆ ಉಳಿಸಿಕೊಂಡಿದ್ದು ಅವರ ಹೆಗ್ಗಳಿಕೆ. ಎಂಬತ್ತೊಂಬತ್ತು ವರ್ಷಗಳ ಸಾರ್ಥಕ ಬದುಕು ಸಾಗಿಸಿದ ಅವರಿಗೆ ಭಾವಪೂರ್ಣ ನಮನ.

ಚಂದ್ರಶೇಖರ್, ಕಣಜನಹಳ್ಳಿ

ತಬ್ಬಲಿ ಸಮುದಾಯ ತಬ್ಬುವವರು ಯಾರು?

‘ಹಕ್ಕಿಲ್ಲದ ಹಕ್ಕಿಪಿಕ್ಕಿಗಳು’ ವರದಿಯು (ಒಳನೋಟ, ಪ್ರ.ವಾ., ಮೇ 31) ತಬ್ಬಲಿ ಸಮುದಾಯ ಅನುಭವಿಸುತ್ತಿರುವ ಸಂಕಷ್ಟವನ್ನು ತೆರೆದಿಟ್ಟಿದೆ. ಸ್ವಾತಂತ್ರ್ಯ ಬಂದು ಏಳೂವರೆ ದಶಕಗಳು ಉರುಳಿದರೂ ಈ ಜನಾಂಗ ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರ ಎಂಬುದಿಲ್ಲ. ಇಂದಿಗೂ ಇವರ ಪರಿಸ್ಥಿತಿ ಶೋಚನೀಯವಾಗಿದೆ. ಇದು ಆಳುವ ವರ್ಗದ ನಿರ್ಲಕ್ಷ್ಯವನ್ನು ಬಯಲುಗೊಳಿಸಿದೆ. ಸತ್ತಾಗ ಹೂಳಲು ಸ್ಮಶಾನ ಇಲ್ಲ; ಶಿಕ್ಷಣವಂತು ಗಗನಕುಸುಮವಾಗಿದೆ. ಇನ್ನಾದರೂ ಅವರ ಬಗ್ಗೆ ಕರುಣೆ ತೋರಿ ಸಂವಿಧಾನದತ್ತವಾದ ಸೌಲಭ್ಯ ನೀಡಲು ಸರ್ಕಾರ ಮುಂದಾಗಲಿ.

ಯಲುವಹಳ್ಳಿ ಸೊಣ್ಣೇಗೌಡ, ಚಿಕ್ಕಬಳ್ಳಾಪುರ

ಅಂಚೆ ಕಚೇರಿಗಳಿಗೆ ಬೇಕಿದೆ ತಾಂತ್ರಿಕ ಸ್ಪರ್ಶ

ಭಾರತೀಯ ಅಂಚೆ ಇಲಾಖೆಯು ವಿಶ್ವದಲ್ಲಿಯೇ ಅತಿ ದೊಡ್ಡದಾದ ಸೇವಾಜಾಲ ಹೊಂದಿದೆ. ಅದು ದೇಶದ ಭಾವನಾತ್ಮಕ ಕೊಡುಗೆಯೂ ಹೌದು. ಖಾಸಗಿ ಸಂಸ್ಥೆಗಳು ಲಾಭವಿಲ್ಲದ ಕಡೆ ಸೇವೆ ನೀಡಲು ಹಿಂಜರಿಯುವಾಗ ಅಂಚೆ ಇಲಾಖೆಯು ಜನಸಾಮಾನ್ಯರ ಪಾಲಿಗೆ ಆಶಾಕಿರಣವಾಗಿದೆ. ಜನಸಾಮಾನ್ಯರ ದೃಷ್ಟಿಯಿಂದ ಇದರ ಅಗತ್ಯವೂ ಇದೆ. ಆದರೆ, ಅಂಚೆ ಕಚೇರಿಗಳಲ್ಲಿ ಸಮರ್ಪಕವಾಗಿ ತಂತ್ರಜ್ಞಾನದ ಬಳಕೆಯಾಗುತ್ತಿಲ್ಲ. ಇದರಿಂದ ಗ್ರಾಹಕರಿಗೆ ತೊಂದರೆಯಾಗುತ್ತಿದೆ. ಸಿಬ್ಬಂದಿ ಕೊರತೆಯು ಗ್ರಾಹಕರ ಸೇವೆ ಮೇಲೆ ಗಂಭೀರ ಪರಿಣಾಮ ಬೀರುತ್ತಿದೆ. ಕೇಂದ್ರ ಸರ್ಕಾರವು ಇಲಾಖೆಯ ಪ್ರಗತಿ ಬಗ್ಗೆ ಹೆಚ್ಚಿನ ಕಾಳಜಿವಹಿಸಬೇಕಿದೆ.

ಬಿ.ಎಸ್. ಮುಳ್ಳೂರ ಹಲಗತ್ತಿ, ರಾಮದುರ್ಗ

ಜನರ ಸಂಕಷ್ಟಗಳಿಗೆ ಬಂಡೆ ಬೆಣ್ಣೆಯಾಗಲಿ

‘ಕನಕಪುರದ ಬಂಡೆ’ ಎಂದೇ ಹೆಸರಾದ ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಳ್ಳಲು ಸಿದ್ಧರಾಗಿದ್ದಾರೆ. ಹಲವು ವರ್ಷಗಳಿಂದ ಪಕ್ಷಕ್ಕಾಗಿ ದುಡಿದ ಅವರಿಗೆ ಅವರೇ ಕೇಳುವಂತೆ ‘ಕೂಲಿ’ ದೊರಕಿದೆ. ಮುಖ್ಯಮಂತ್ರಿ ಗಾದಿಯಲ್ಲಿ ಕುಳಿತು ಅಹವಾಲು ಸಲ್ಲಿಸುವವರಿಗೆ, ಜನರ ಬೇಡಿಕೆಗಳಿಗೆ ಕರಗದ ಬಂಡೆಯಾಗದೆ, ತಕ್ಷಣವೇ ಸ್ಪಂದಿಸಿ ಕರಗುವ ಬೆಣ್ಣೆಯಾಗಲಿ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಚುರುಮುರಿ

ಕುಸ್ತಿನಾಪುರದ ಕಾಳಗ

• ಡಿ.ಎಸ್. ಲಿಂಗರಾಜು

ಕೈಕಮಾಂಡ್ ಕುಲದೈವಗಳು ‘ಕೊಟ್ಟ ಮಾತಿನಂತೆ ನೀವು ಸಿಂಹಾಸನ ತ್ಯಾಗ ಮಾಡಬೇಕು ಪಿತಾಮಹರೆ’ ಎಂದು ಆದೇಶಿಸಿದಾಗ ಎದುರಾಡದೇ ಪಿತಾಮಹರು ಕುಸ್ತಿನಾಪುರಕ್ಕೆ ವಾಪಸ್ ಬಂದಿದ್ದರು. ತಾವು ಅಧಿಕಾರ ಬಿಟ್ಟು ಶರಶಯ್ಯೆಯಲ್ಲಿ ಮಲಗುವುದಾಗಿ ಘೋಷಿಸಿದಾಗ ಅವರ ಹಿಂಬಾಲಕರು, ಅಭಿಮಾನಿಗಳಲ್ಲಿ ಕಣ್ಣೀರು, ಮಹಾಮೌನ.

ಕುಸ್ತಿನಾಪುರದ ಕೈ ಸಂತತಿಯ ಸಭೆಯಲ್ಲಿ ಪಿತಾಮಹರು ಕುಲದೈವಗಳು ಮತ್ತು ಸಂಧಾನ ಚತುರರ ಪ್ರೇರಣೆಯಂತೆ ‘ನಾನು ಸಿಂಹಾಸನಕ್ಕೆ ಮುಂದಿನ ಉತ್ತರಾಧಿಕಾರಿಯಾಗಿ ಯುವರಾಜ ಕುಮಾರಶಿವರನ್ನು ಸೂಚಿಸುತ್ತಿದ್ದೇನೆ’ ಅಂತಂದು ಕಿರೀಟವನ್ನು ಕುಮಾರಶಿವರ ಶಿರದ ಮೇಲಿಟ್ಟು ಕೂತರು.

ಕೈಪರಿವಾರ ಸಂತತಿಯೆಲ್ಲ ಕೂಡಲೇ ಯುವರಾಜರ ಕಡೆಗೆ ತಿರುಗಿ ‘ಮೂಲಕಾಂಗೈಧರ ಬಂಡೆಗಂಭೀರ, ಸರಳಗುಣ ಹೃದಯ ಗುಣಭರಿತ ಯುವೋದಯ. ಧರಣಿಪ ನೇತಾ, ಕೀರ್ತಿ ಸಮೇತಾ. ಪರಮಪುರುಷ ಭೂವರ. ಪೊರೆಯೋ ಕನಕಾಧಿಪತೇ’ ಎಂದು ಪ್ರಾರ್ಥಿಸಿದರು. ತಲೆದೂಗಿದ ನವ ಮಹಾರಾಜರು ‘ಕುಸ್ತಿನಾಪುರ ಕಾಳಗದಲ್ಲಿ ದಾಯಾದಿಗಳನ್ನು ಸದೆಬಡಿದ ಮಹಾಪಾಪ ಪರಿಹಾರಕ್ಕಾಗಿ ದೇವಗುರುಗಳ ಸಲಹೆಯಂತೆ ಅಶ್ವಮೇಧ ಯಾಗವನ್ನು ಕೈಗೊಳ್ಳಲಿದ್ದೇನೆ’ ಎಂದಾಗ ಋಷಿ–ಮುನಿಗಳು ತಮಗೆ ಒದಗಿ ಬರಲಿರುವ ಭಾಗ್ಯವನ್ನು ನೆನೆನೆನೆದು ರೋಮಾಂಚಿತರಾದರು.

ಶರಶಯ್ಯೆಯಲ್ಲಿ ಮಲಗಿದ್ದ ಪಿತಾಮಹರು ತಮ್ಮ ಕಳ್ಳುಬಳ್ಳಿಗಳನ್ನೆಲ್ಲ ಕರೆಕರೆದು ಮಾತನಾಡಿಸಿ ‘ನಿಮಗ್ಯಾವ ಅಧಿಕಾರ ಬೇಕು, ನಿಮಗೆಷ್ಟು ಮೀಸಲಾತಿ ಬೇಕು’ ಎಂದು ಕೇಳತೊಡಗಿದ್ದರು. ಇದನ್ನು ಕಂಡು ಕಣ್ಣೀರಾದ ಹಿರಿಕಿರಿ ಸ್ತೋತ್ರಧಾರರು ‘ಅವರೇ ನಮ್ಮ ನಾಯಕರು. 2028ರ ಅಂತಿಮ ಯುದ್ಧದವರೆಗೂ ಅವರದ್ದೇ ನಾಯಕತ್ವ’ ಎನ್ನುತ್ತಾ ಅಧಿಕಾರ ಪ್ರಾಪ್ತಿಗಾಗಿ ಕಚ್ಚಾಟ ಆರಂಭಿಸಿದರು.

ಕುಸ್ತಿನಾಪುರದಲ್ಲಿ ಇಷ್ಟೆಲ್ಲ ನಡೆಯುತ್ತಿದ್ದಾಗ ಮಿಥ್ಯಜ್ಞಾನಿ ತುರೇಮಣೆ ‘ಮಹಾಭಾರತದಲ್ಲೂ ಸಿಂಹಾಸನಕ್ಕಾಗಿ ಯುದ್ಧವಾಯ್ತು. ಈಗಲೂ ಆಗಿದೆ. ಆ ಪಿತಾಮಹರಿಗೆ ಚುಚ್ಚಿದ್ದು ಅರ್ಜುನನ ಬಾಣಗಳು. ಈವತ್ತಿನ ಕುಲದೈವಗಳ ಬಾಣಗಳನ್ನು ಬಿಟ್ಟ ಪೋಲ್ ಸ್ಟ್ರಾಟಜಿಸ್ಟ್ ಯಾರು ಅಂತ ತಿಳಿಯಿರಿ’ ಎಂದು ಕುರುಡು ಮತದಾರರನ್ನು ಎಚ್ಚರಿಸುವ ಲೈವ್ ಕಟುವಾಸ್ತವದ ದರ್ಶನ ಮಾಡಿದ.

ಸಂಗತ

ಬರಲಿರುವ ಮುಖ್ಯಮಂತ್ರಿಗೆ ‘ಹಸುರು ಅಜೆಂಡಾ’

ಮುಂದಿನ ಮುಖ್ಯಮಂತ್ರಿ ಎದುರು ಮಹಾನಗರದ ಹಿತಕ್ಕೆ ಸಂಬಂಧಿಸಿದಂತೆ ಸವಾಲುಗಳ ಬೆಟ್ಟವೇ ಇದೆ. ಅವರು ಹಸುರು ಬೆಂಗಳೂರಿಗೆ ಆದ್ಯತೆ ನೀಡಲಿ.

• ಕೇಶವ ಎಚ್. ಕೊರ್ಸೆ

ಬೆಂಗಳೂರಿನೊಂದಿಗೆ ನಿಕಟ ಸಂಪರ್ಕ ಹೊಂದಿರುವ, ನಗರಾಭಿವೃದ್ಧಿ ಸಚಿವರಾಗಿಯೂ ಅನುಭವ ಹೊಂದಿರುವ ಡಿ.ಕೆ. ಶಿವಕುಮಾರ್ ಅವರು ರಾಜ್ಯದ ಹೊಸ ಮುಖ್ಯಮಂತ್ರಿಗಳಾಗಲಿದ್ದಾರೆ. ರಾಜಧಾನಿಯನ್ನು ಗ್ರೇಟರ್ ಬೆಂಗಳೂರಾಗಿ ರೂಪಿಸುವ ಕನಸು ಕಂಡವರು ಅವರು. ನಗರವೊಂದಕ್ಕೆ ಸುಸ್ಥಿರನಿರ್ವಹಣೆ ಸಾಧ್ಯವಾದರೆ, ಆಗ ಅದು ನಿಜವಾಗಿ ‘ಗ್ರೇಟ್’ (ಮಾದರಿ) ಆಗಬಲ್ಲದು. ಅಂಥ ದೂರದೃಷ್ಟಿಯ ಹಾಗೂಪರಿಣಾಮಕಾರಿಯಾದ ನೀತಿಯನ್ನು ರೂಪಿಸಿ, ಅನುಷ್ಠಾನಗೊಳಿಸುವ ಸುವರ್ಣ ಅವಕಾಶ ಅವರ ಮುಂದಿದೆ. ಅದು ಸಾಧ್ಯವಾದಲ್ಲಿ ರಾಜಧಾನಿಯ ಜನರೆಲ್ಲರ ಬದುಕು ಸಾಕಷ್ಟು ಸುಗಮವಾದೀತು. ಜೊತೆಗೆ, ವೇಗವಾಗಿ ಹಿಗ್ಗುತ್ತಿರುವ ನಾಡಿನ ಇತರ ನಗರಗಳ ನಿರ್ವಹಣೆಗೂ ಅದು ದಿಕ್ಕು ತೋರೀತು.

ಗ್ರೇಟರ್ ಬೆಂಗಳೂರು ಜಲಸುರಕ್ಷಿತ ಹಾಗೂ ಹವಾಮಾನ ಬದಲಾವಣೆಗೆ ಒಗ್ಗಿಕೊಳ್ಳಬಲ್ಲ ಸುಸ್ಥಿರ ನಗರವಾಗಬೇಕಾದರೆ, ವೈಜ್ಞಾನಿಕ ನೆಲ–ಜಲ–ಹಸಿರು ಹೊದಿಕೆಯ ನಿರ್ವಹಣೆ ಹಾಗೂ ಪಾರದರ್ಶಕವಾದ ವಿಕೇಂದ್ರೀಕೃತ ಆಡಳಿತಕ್ಕೆ ಆದ್ಯತೆ ಒದಗಲೇಬೇಕು. ಆ ನಿಟ್ಟಿನಲ್ಲಿ ಕೆಲವು ಪ್ರಮುಖ ಸಂಗತಿಗಳತ್ತ ಹೊಸ ಮುಖ್ಯಮಂತ್ರಿ ಅವರು ಆದ್ಯತೆ ನೀಡಲಿ.

ಆದ್ಯತೆಗಳ ಪಟ್ಟಿಯಲ್ಲಿ ಮೊದಲನೆಯದು ಜಲಸುರಕ್ಷತೆ. ನಾಡಿನ ಪ್ರತಿ ಮೂಲೆಯಿಂದ ಪ್ರತಿ ದಿನವೂ ಬೆಂಗಳೂರಿಗೆ ಯುವ ಜನತೆಯ ಗುಳೆ ಹೆಚ್ಚುತ್ತಲೇ ಇದೆ. ಸ್ಥಳೀಯ ಜಲಮೂಲಗಳೆಲ್ಲ ಬರಿದಾಗಿ, ಕಾವೇರಿ ಕಣಿವೆಯ ನೀರು ಖಾಲಿಯಾದರೂ ನೀರಿನ ಬವಣೆ ಮಾತ್ರ ನೀಗುತ್ತಿಲ್ಲ. ಹೀಗಾಗಿ, ನೂರಕ್ಕೆ ನೂರರಷ್ಟು ಜಲ ಮರುಬಳಕೆ ಕಡ್ಡಾಯವಾಗಬೇಕಾದುದು ಅನಿವಾರ್ಯ. ತ್ಯಾಜ್ಯ ನೀರನ್ನು ಶುದ್ಧೀಕರಿಸುವ ಈಗಿರುವ ನಗರಪಾಲಿಕೆಯ ಘಟಕಗಳನ್ನು ಸುವ್ಯವಸ್ಥಿತಗೊಳಿಸುವ ಜೊತೆಗೆ, ವಾಣಿಜ್ಯ ಕಟ್ಟಡಗಳು, ಉದ್ಯಾನಗಳು, ಅಪಾರ್ಟ್‌ಮೆಂಟ್ ಇತ್ಯಾದಿಗಳೆಲ್ಲ ವಿಕೇಂದ್ರೀಕೃತ ತ್ಯಾಜ್ಯನೀರು ಶುದ್ಧೀಕರಣ ಘಟಕ ಅಳವಡಿಸುವುದನ್ನು ಕಡ್ಡಾಯಗೊಳಿಸಬೇಕಿದೆ.



ಕುಡಿಯಲು ಹೊರತುಪಡಿಸಿ ಉಳಿದೆಲ್ಲ ಅಗತ್ಯಕ್ಕೆ ಈ ಶುದ್ಧೀಕರಿಸಿದ ನೀರನ್ನು ವಿತರಿಸುವ ಯೋಜನೆ ರೂಪುಗೊಳ್ಳಬೇಕಿದೆ. ಇದಕ್ಕೆ ಪೂರಕವಾಗಿ, ಕೆರೆಗಳ ರಕ್ಷಣೆ, ಮಳೆನೀರು ಸಂಗ್ರಹದ ವಿವಿಧ ಸೂಕ್ತ ತಂತ್ರಗಳ ಕಡ್ಡಾಯ ಅನುಷ್ಠಾನ, ನೀರಿನ ಹಿತ–ಮಿತ ಬಳಕೆಯ ತಂತ್ರಜ್ಞಾನ ಮತ್ತು ಮನೋಧರ್ಮ ಉತ್ತೇಜಿಸುವುದು ಇತ್ಯಾದಿ ಅಂಶಗಳಿಗೆ ಆದ್ಯತೆ ಒದಗಬೇಕು. ಕೆರೆಗಳ ಸಂರಕ್ಷಣೆ, ಬಫರ್ ವಲಯಗಳ ವಿಸ್ತರಣೆ, ರಾಜಕಾಲುವೆಗಳ ಒತ್ತುವರಿ ತಡೆ ಇತ್ಯಾದಿಗಳನ್ನು ಸಮಗ್ರ ಜಲಾನಯನ ಅಭಿವೃದ್ಧಿ ತತ್ತ್ವದಡಿ ಕೈಗೊಳ್ಳಬೇಕಿದೆ. ಸ್ಪಷ್ಟ ಮತ್ತು ಕಾಲಬದ್ಧ ಯೋಜನೆ ಮಾತ್ರ ಈಗ ಬೆಂಗಳೂರಿಗೆ ಉಳಿದಿರುವ ಭವಿಷ್ಯದ ಏಕೈಕ ದಾರಿ.

ಘನತ್ಯಾಜ್ಯ ನಿರ್ವಹಣೆ ಆಡಳಿತದ ಮುಂದಿರುವ ಬಹುದೊಡ್ಡ ಸವಾಲು. ಮೂಲದಲ್ಲಿಯೇ ಪೂರ್ಣ ಪ್ರಮಾಣದಲ್ಲಿ ತ್ಯಾಜ್ಯ ವಿಂಗಡಣೆ, ಸೂಕ್ತ ವಿಲೇವಾರಿ, ಪ್ರತಿ ವಾರ್ಡ್‌ನಲ್ಲಿ ಕಾಂಪೋಸ್ಟ್ ಘಟಕ, ನಿರಂತರ ನಿಗಾ ಇತ್ಯಾದಿ ವಿಕೇಂದ್ರೀಕೃತ ತಂತ್ರಗಳ ಮೂಲಕ ಈಗಾಗಲೇ ಬೃಹದಾಕಾರವಾಗಿ ಬೆಳೆದಿರುವ ತ್ಯಾಜ್ಯ ವಿಸರ್ಜನಾ ಪ್ರದೇಶಗಳಿಗೆ ತಲಪುತ್ತಿರುವ ತ್ಯಾಜ್ಯದ ಪ್ರಮಾಣ ತಗ್ಗಿಸಲು ಸಾಧ್ಯವಿದೆ.

ಮೂರನೇ ಆದ್ಯತೆ, ವೇಗವಾಗಿ ಏರುತ್ತಿರುವ ಸರಾಸರಿ ತಾಪಮಾನದ ನಿಯಂತ್ರಣ. ನಗರವೇ ಒಂದು ಉಷ್ಣ ದ್ವೀಪವಾಗುತ್ತಿದೆ! ಶೀತಲ ಮೇಲ್ಚಾವಣಿಗಳು, ಸೌರಶಕ್ತಿ ಆಧಾರಿತ ಗೃಹ ಶೀತಲಘಟಕಗಳು, ಮೇಲ್ಚಾವಣಿ ಸೌರವಿದ್ಯುತ್, ಇತ್ಯಾದಿ ಹಲವು ಬಗೆಯ ಸುಸ್ಥಿರ ತಂತ್ರಜ್ಞಾನಗಳು ಈಗ ಲಭ್ಯ. ಅವುಗಳನ್ನು ಒಂದು ಸಮಗ್ರ ಯೋಜನೆಯನ್ನಾಗಿ ರೂಪಿಸಿ ಅನುಷ್ಠಾನಗೊಳಿಸಬೇಕಿದೆ. ನಗರದ ಹಸುರುಕವಚ ಹಿಗ್ಗಿಸುವ ಕಾರ್ಯವಂತೂ ಶೀಘ್ರ ಆಗಲೇಬೇಕಾದ್ದು. ರಸ್ತೆಬದಿಗಳಲ್ಲಿ ಮರ ಬೆಳೆಸುವುದು, ಸಾರ್ವಜನಿಕ ಸ್ಥಳಗಳಲ್ಲಿ ಕಡ್ಡಾಯವಾಗಿ ಗಿಡ ನೆಡುವುದು, ಉದ್ಯಾನಗಳನ್ನು ಪೋಷಿಸುವುದು, ಇತ್ಯಾದಿ ಅಂಶಗಳ ಸಮಗ್ರ ‘ನಗರ ವೃಕ್ಷನೀತಿ’ ಜಾರಿಯಾಗಬೇಕಿದೆ.

ಸಾರಿಗೆ ವ್ಯವಸ್ಥೆಯ ಇಂಗಾಲದ ಹೊರೆ ತಗ್ಗಿಸುವ ಸವಾಲು ಸುಲಭದ್ದಲ್ಲ. ಮೆಟ್ರೊ ಮಾರ್ಗ, ವಿದ್ಯುತ್ ಚಾಲಿತ ಬಸ್ಸುಗಳು, ಇತ್ಯಾದಿಗಳೆಲ್ಲ ಬಂದಿವೆ. ಆದರೆ, ಸಾಮೂಹಿಕ ಸಾರಿಗೆಯನ್ನು ವ್ಯಾಪಕವಾಗಿ ಬಳಸಲು ಅನುಕೂಲವಾಗುವ ಸೌಲಭ್ಯಗಳು ಮತ್ತು ವಾತಾವರಣವನ್ನು ಹಿಗ್ಗಿಸುವ ಕಾರ್ಯ ಆಗಬೇಕಿದೆ. ವಿವೇಕಯುತ ವಾಹನ ಬಳಕೆಯ ಜೀವನವಿಧಾನ ವಿಸ್ತರಣೆಗೆ ಚಿಂತಿಸದೆ, ಸುರಂಗ ರಸ್ತೆಗಳಂಥ ಅವೈಜ್ಞಾನಿಕವಾದ ಭಾರೀ ಕಾಮಗಾರಿಗಳ ಅನುಷ್ಠಾನಕ್ಕೆ ಸರ್ಕಾರ ಮುಂದಾದರೆ ಬೆಂಗಳೂರಿನ ಸುರಕ್ಷತೆ ಮತ್ತಷ್ಟು ಕುಗ್ಗೀತೇ ಹೊರತು, ಸಂಚಾರ ವ್ಯವಸ್ಥೆಯ ಸಮಸ್ಯೆಗಳಲ್ಲ!

ಈ ಎಲ್ಲ ಆಯಾಮಗಳ ಜೊತೆ, ಸಾರ್ವಜನಿಕ ನೈರ್ಮಲ್ಯ, ಆರೋಗ್ಯ, ಸುಸ್ಥಿರ ಇಂಧನ, ಹಳೆಯ ಕಟ್ಟಡಗಳ ಸುರಕ್ಷತೆ ಇತ್ಯಾದಿಗಳಂತೆಲ್ಲ ತೀವ್ರ ಗಮನ ನೀಡಬೇಕಿದೆ.

ಶೀಘ್ರ ಅಧಿಕಾರದ ಸೂತ್ರ ಹಿಡಿಯಲಿರುವ ಹೊಸ ಮುಖ್ಯಮಂತ್ರಿ ಅವರು, ಈ ಬಗೆಯ ಹೊಸ ದೃಷ್ಟಿ ಮತ್ತು ಕರ್ತೃತ್ವಶಕ್ತಿಯ ಮೂಲಕ ಜಡ್ಡುಗಟ್ಟಿದ ನಗರಾಡಳಿತ ವ್ಯವಸ್ಥೆಗೆ ಕಾಯಕಲ್ಪ ನೀಡಬಲ್ಲರೆಂದು ಆಶಿಸೋಣವೆ? ವಾರ್ಡ್ ಸಮಿತಿಗಳು ಮತ್ತು ನಿವಾಸಿಗಳ ಕಲ್ಯಾಣ ಸಂಘಗಳ ಬಲವರ್ಧನೆ ಮಾಡಿ, ಆಡಳಿತದಲ್ಲಿ ಪಾರದರ್ಶಕತೆ ತಂದು ಜನಸ್ನೇಹಿಯಾಗಿಸಲು ಅವರಿಗೆ ಸಾಧ್ಯವಾದೀತೆ? ಇದೆಲ್ಲವೂ ಸಾಧ್ಯವಾದಲ್ಲಿ ಬೆಂಗಳೂರನ್ನು ಸುಸ್ಥಿರ, ಜಲಸುರಕ್ಷಿತ ಮತ್ತು ಹವಾಮಾನ ಬದಲಾವಣೆಗಳಿಗೆ ಹೊಂದಿಕೊಳ್ಳಬಲ್ಲ ನಗರವಾಗಿ ರೂಪಿಸಬಹುದು.

‘ಬ್ರ್ಯಾಂಡ್ ಬೆಂಗಳೂರು’ ಹೇಳಿಕೆ ಅದರ ಸುಸ್ಥಿರ ನಿರ್ವಹಣೆಯಲ್ಲಿ ಪ್ರತಿಫಲನವಾದೀತೆ? ಆ ಮೂಲಕ, ವೇಗವಾಗಿ ಬೆಳೆಯುತ್ತಿರುವ ನಾಡಿನ ಇತರ ನಗರ–ಪಟ್ಟಣಗಳಿಗೂ ನಗರಾಡಳಿತದ ಒಂದು ‘ಆದರ್ಶದ ಮಾದರಿ’ ದೊರಕೀತೆ? ನೂತನ ಮುಖ್ಯಮಂತ್ರಿ ಅವರ ಭವಿಷ್ಯದ ನಡೆಯೇ ಉತ್ತರಿಸಬೇಕು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಆರ್‌ಸಿಬಿ ಗೆಲುವಿನ ರೂವಾರಿಗಳ ಯಶೋಗಾಥೆ

ಪ್ರಜಾವಾಣಿ ವಾರ್ತೆ

'ಈ ಸಲ ಕಪ್ ನಮ್ದೆ..'

ಎರಡು ವರ್ಷಗಳ ಮೊದಲು ಈ ಸ್ಲೋಗನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಅಭಿಮಾನಿಗಳಿಗೆ ಅಪ್ಯಾಯಮಾನವಾಗಿತ್ತು. ಆದರೆ ಟೀಕಾಕಾರರಿಗೆ ವ್ಯಂಗ್ಯದ ಸರಕಾಗಿತ್ತು. ಸಾಮಾಜಿಕ ಜಾಲತಾಣಗಳಲ್ಲಿ ಜಾಲಾಡಿದರೆ ಈಗಲೂ ಹಳೆಯ ಮೀಮ್‌ಗಳು, ಕಾರ್ಟೂನ್‌ಗಳು ಕಾಣುತ್ತವೆ. ಆದರೆ ಅಂದು ಟೀಕಿಸಿದವರೆಲ್ಲರೂ ಈಗ ಸುಮ್ಮನೇ ನಿಂತು ಚಪ್ಪಾಳೆ ತಟ್ಟುವಂತಾಗಿದೆ. ಹೌದು; ಆರ್‌ಸಿಬಿ ಯಶೋಗಾಥೆಯ ಸಾರಾಂಶ ಇದು. ಇದರ ಹಿಂದೆ ತಂಡದ ಆಟಗಾರರ ಮತ್ತು ನೆರವು ಸಿಬ್ಬಂದಿಯ ಶ್ರಮ ಇದೆ. ಎರಡು ವರ್ಷಗಳಲ್ಲಿ ಈ ತಂಡದ ವರ್ಚಸ್ಸನ್ನು ಬದಲಿಸಿದ ಮತ್ತು ಸತತ ಎರಡು ಬಾರಿ ಕಪ್ ಗೆದ್ದುಕೊಂಡ ಪ್ರಮುಖ ಆಟಗಾರರ ಕಾಣಿಕೆಯ ಕುರಿತ ಮಾಹಿತಿ ಇಲ್ಲಿದೆ.

ಕನ್ನಡಿಗ ಪಡಿಕ್ಕಲ್ ಆಟ

ಎಡಗೈ ಬ್ಯಾಟರ್ ದೇವದತ್ತ ಪಡಿಕ್ಕಲ್ ಅವರು ಚಿಕ್ಕವರಿದ್ದಾಗ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಅಪ್ಪನೊಂದಿಗೆ ಬಂದು ಆರ್‌ಸಿಬಿ ಪಂದ್ಯ ವೀಕ್ಷಿಸುತ್ತಿದ್ದರು. ವಿರಾಟ್ ಕೊಹ್ಲಿ, ಎಬಿ ಡಿವಿಲಿಯರ್ಸ್, ಕ್ರಿಸ್ ಗೇಲ್ ಅವಂತಹ ದಿಗ್ಗಜರ ಆಟವನ್ನು ಆನಂದಿಸುತ್ತಿದ್ದರು. ಇದೀಗ ಅದೇ ವಿರಾಟ್ ಅವರೊಂದಿಗೆ ಡ್ರೆಸಿಂಗ್ ರೂಮ್ ಹಂಚಿಕೊಳ್ಳುತ್ತಿದ್ದಾರೆ. ತಮ್ಮ ನೆಚ್ಚಿನ ಆರ್‌ಸಿಬಿ ತಂಡವು ಎರಡು ಪ್ರಶಸ್ತಿ ಗೆಲ್ಲಲು ಉಪಯುಕ್ತ ಕಾಣಿಕೆ ನೀಡಿದ್ದಾರೆ. ಅದರಲ್ಲೂ ಈ ಬಾರಿ ಆರಂಭಿಕರಾಗಿ ಆಡಿದ್ದ ಫಿಲ್ ಸಾಲ್ಟ್ ಸಫಲರಾಗಿರಲಿಲ್ಲ. ಅವರು ಗಾಯಗೊಂಡಾಗ ಆಡಿದ್ದ ಜೇಕಬ್ ಬೆಥೆಲ್ ಕೂಡ ರನ್ ಗಳಿಸಲಿಲ್ಲ. ಆ ಸಂದರ್ಭದಲ್ಲಿ ದೇವದತ್ತ ಅವರು ವಿರಾಟ್ ಕೊಹ್ಲಿಯೊಂದಿಗೆ ಜೊತೆಯಾಟಗಳನ್ನು ಕಟ್ಟಿದರು. ಇನಿಂಗ್ಸ್‌ಗೆ ಬಲ ತುಂಬಿದರು. ಕಳೆದ ಋತುವಿನಲ್ಲಿ ಅವರು ರಣಜಿ ಟ್ರೋಫಿ, ವಿಜಯ್ ಹಜಾರೆ ಮತ್ತು ಸೈಯದ್ ಮುಷ್ತಾಕ್ ಅಲಿ ಟೂರ್ನಿಗಳಲ್ಲಿ ರನ್ ಹೊಳೆ ಹರಿಸಿದ್ದರು. ರಣಜಿ ಟೂರ್ನಿಯ ಫೈನಲ್‌ನಲ್ಲಿ ಕರ್ನಾಟಕದ ನಾಯಕರಾಗಿದ್ದರು.

ಬರ್ತಡೇ ಬಾಯ್ ರಜತ್

ರಜತ್ ಪಾಟೀದಾರ್ ಅವರು ಸೋಮವಾರ 33ನೇ ವಸಂತಕ್ಕೆ ಕಾಲಿಟ್ಟರು. ವಿರಾಟ್ ನಂತರ ನಾಯಕರನ್ನಾಗಿ ಯಾರನ್ನು ಸಿದ್ಧಗೊಳಿಸಬೇಕು ಎಂಬ ಪ್ರಶ್ನೆಗೆ ಸಿಕ್ಕ ಉತ್ತರ ರಜತ್. ಆದರೆ ಅವರ ಅದೃಷ್ಟವೋ, ಆರ್‌ಸಿಬಿಯ ಸೌಭಾಗ್ಯವೋ ಗೊತ್ತಿಲ್ಲ. ಅವರು ನಾಯಕತ್ವ ವಹಿಸಿಕೊಂಡ ವರ್ಷವೇ ತಂಡವು ಚಾಂಪಿಯನ್ ಆಯಿತು. 17 ಆವೃತ್ತಿಗಳಲ್ಲಿ ವಿರಾಟ್ ಸೇರಿದಂತೆ ಹಲವು ದಿಗ್ಗಜರು ನಾಯಕತ್ವ ವಹಿಸಿದಾಗಲೂ ಒಲಿಯದ ಪ್ರಶಸ್ತಿ ರಜತ್ ಅವರಿಗೆ ಲಭಿಸಿತು. ಅಷ್ಟೇ ಅಲ್ಲ. ಸತತ ಎರಡನೇ ಸಲ ಗೆದ್ದು ಮಹೇಂದ್ರಸಿಂಗ್ ಧೋನಿ ಮತ್ತು ರೋಹಿತ್ ಶರ್ಮಾ ಅವರ ಸಾಲಿನಲ್ಲಿ ಬಂದು ನಿಂತರು. ಆದರೆ ರಜತ್ ಅವರು ಈ ಮಟ್ಟಕ್ಕೆ ಬರಲು ಕಠಿಣ ಹಾದಿ ಸವೆಸಿದರು. ಮಧ್ಯಪ್ರದೇಶದ ಇಂದೋರ್‌ನ ರಜತ್ ರಣಜಿ ಟೂರ್ನಿಯಲ್ಲಿ ಉತ್ತಮವಾಗಿ ಆಡಿದ್ದರು. ಅದರಿಂದಾಗಿ 2021ರಲ್ಲಿ ಆರ್‌ಸಿಬಿಯು ₹20 ಲಕ್ಷ ನೀಡಿ ಅವರನ್ನು ಖರೀದಿಸಿತು. ಆದರೆ ಆ ವರ್ಷ ಅವರು ಗಳಿಸಿದ್ದು 71 ರನ್ ಮಾತ್ರ. ಅದರಿಂದಾಗಿ ರಿಲೀಸ್ ಆದರು. 2022ರ ಹರಾಜು ಪ್ರಕ್ರಿಯೆಯಲ್ಲಿ ಅವರನ್ನು ಯಾವುದೇ ಫ್ರ್ಯಾಂಚೈಸಿಯು ಖರೀದಿಸಲಿಲ್ಲ. ನಂತರದ ಅವಧಿಯಲ್ಲಿ ಆರ್‌ಸಿಬಿಯಲ್ಲಿ ಗಾಯಗೊಂಡಿದ್ದ ಆಟಗಾರನ ಬದಲಿಗೆ ಸ್ಥಾನ ಪಡೆದರು. ಅದೇ ವರ್ಷ ಎಲಿಮಿನೇಟರ್‌ನಲ್ಲಿ ಭರ್ಜರಿ ಶತಕ ಗಳಿಸಿದರು. ಆದರೆ ಗಾಯದ ಸಮಸ್ಯೆಯಿಂದ 2023ರಲ್ಲಿ ಆಡಲು ಸಾಧ್ಯವಾಗಲಿಲ್ಲ. 2024ರಲ್ಲಿ 15 ಪಂದ್ಯಗಳನ್ನು ಆಡಿ 395 ರನ್ ಗಳಿಸಿದರು. ನಂತರ ಅಚ್ಚರಿಯ ನಿರ್ಧಾರ ತೆಗೆದುಕೊಂಡ ಆರ್‌ಸಿಬಿಯು ಮೃದುಭಾಷಿ ಮತ್ತು ತೀಕ್ಷ್ಣ ಯೋಚನಾಲಹರಿಯ ರಜತ್ ಅವರಿಗೆ ನಾಯಕನ ಪಟ್ಟ ಕಟ್ಟಿತು.

ಕೃಣಾಲ್ ಪಾಂಡ್ಯ
ಪಂದ್ಯ 16
ವಿಕೆಟ್ 14
ರನ್ 226

ಬೌನ್ಸರ್ ಸ್ಪಿನ್ನರ್ ಕೃಣಾಲ್

ಎಡಗೈ ಸ್ಪಿನ್–ಆಲ್‌ರೌಂಡರ್ ಕೃಣಾಲ್ ಪಾಂಡ್ಯ ಅವರು ಈಗ ಮುಟ್ಟಿದ್ದೆಲ್ಲ ಚಿನ್ನವೇ ಆಗುತ್ತಿದೆ. ಆರ್‌ಸಿಬಿಯಲ್ಲಿ ಎರಡು ಸೇರಿದಂತೆ ಒಟ್ಟಾರೆ ಐದು ಐಪಿಎಲ್ ಫೈನಲ್‌ಗಳಲ್ಲಿ ಆಡಿರುವ ಅವರದ್ದು ಎಲ್ಲದರಲ್ಲೂ ಗೆಲುವಿನ ಓಟ. ಅದರಲ್ಲೂ ಈ ಬಾರಿಯಂತೂ ಅವರದ್ದು ಹೊಸ ಅವತಾರ. ಬ್ಯಾಟರ್‌ಗಳು 360 ಡಿಗ್ರಿಯಲ್ಲಿ ಬ್ಯಾಟ್ ಮಾಡಬಹುದು. ಬೌಲರ್‌ಗಳಿಗೆ ಇಂತಹ ಅವಕಾಶವಿಲ್ಲವೇ ಎಂಬ ಪ್ರಶ್ನೆ ಅವರದ್ದು. ಅದಕ್ಕಾಗಿಯೇ ಸ್ಪಿನ್ ಬೌಲಿಂಗ್‌ನಲ್ಲಿಯೂ ವೇಗ ಮತ್ತು ಬೌನ್ಸರ್‌ಗಳನ್ನು ಪ್ರಯೋಗಿಸುವ ಮೂಲಕ ಈ ಬಾರಿ ಅವರು ಗಮನ ಸೆಳೆದರು. ಕೆಲವು ಪಂದ್ಯಗಳಲ್ಲಿ ಅವರ ಬೌನ್ಸರ್‌ಗಳು ಬ್ಯಾಟರ್ ತಲೆದಾಟಿ ವಿಕೆಟ್‌ಕೀಪರ್ ಜಿತೇಶ್ ಶರ್ಮಾ ಕೈಸೇರಿದ್ದವು. ಅವರು ಬ್ಯಾಟಿಂಗ್‌ಲ್ಲಿಯೂ ಮಿಂಚಿದರು. ಅದರಲ್ಲೂ ರಾಯಪುರದ ಪಂದ್ಯದಲ್ಲಿ ಸ್ನಾಯುಸೆಳೆತದ ನೋವಿನಲ್ಲಿ ಹೊಡೆದ ಅರ್ಧಶತಕವು ತಂಡದ ಗೆಲುವಿಗೆ ಕಾರಣವಾಗಿತ್ತು. ಆದರೆ ವಿಪರ್ಯಾಸ ನೋಡಿ; ಇನ್ನೊಂದೆಡೆ ಅವರ ಸಹೋದರ, ಮುಂಬೈ ಇಂಡಿಯನ್ಸ್ ನಾಯಕ ಹಾರ್ದಿಕ್ ಪಾಂಡ್ಯ ಅವರು ವೈಫಲ್ಯದ ಸುಳಿಗೆ ಸಿಲುಕಿದರು.

ದೇವದತ್ತ ಪಡಿಕ್ಕಲ್
ಪಂದ್ಯ 16
ರನ್ 464

ರಜತ್ ಪಾಟೀದಾರ್
ಪಂದ್ಯ 15
ರನ್ 501

ವಿರಾಟ್ ಕೊಹ್ಲಿ
ಪಂದ್ಯ 16
ರನ್ 675

ಭುವನೇಶ್ವರ್ ಕುಮಾರ್
ಪಂದ್ಯ 16
ವಿಕೆಟ್ 28

ಭುವಿ ಎಂಬ ಸ್ವಿಂಗ್ ಸುಲ್ತಾನ

'ಸೀಕ್ರೆಟ್ ಗೊತ್ತಿದ್ದಿದ್ದರೆ ಪ್ರತಿವರ್ಷವೂ ಇಷ್ಟೇ ವಿಕೆಟ್‌ಗಳನ್ನು ತೆಗೆದುಕೊಳ್ಳುತ್ತಿದ್ದೆ. ಈ ವರ್ಷ ನನ್ನ ಶ್ರಮಕ್ಕೆ ತಕ್ಕ ಫಲ ಸಿಗುತ್ತಿದೆ. ಅದೃಷ್ಟವೂ ಜೊತೆಯಾಗಿದೆ. ಎಲ್ಲಕ್ಕೂ ಸಮಯ ಕೂಡಿಬರಬೇಕು' ಎಂದು ನಗುತ್ತ ಹೇಳಿದ್ದರು ಭುವನೇಶ್ವರ್ ಕುಮಾರ್.

ರಾಯಪುರದಲ್ಲಿ ಪತ್ರಕರ್ತರೊಂದಿಗೆ ಹರಟೆಗೆ ಕೂತಿದ್ದ ಭುವಿ ಅವರು, 'ಈ ವರ್ಷ ಇಷ್ಟೊಂದು ವಿಕೆಟ್ ಗಳಿಸುತ್ತಿರುವುದರ ಹಿಂದಿನ ಗುಟ್ಟು ಏನು' ಎಂಬ ಪ್ರಶ್ನೆಗೆ ಉತ್ತರಿಸಿದ್ದು ಹೀಗೆ. ಪವರ್‌ಪ್ಲೇ ಮತ್ತು ಡೆತ್ ಓವರ್ ಎರಡರಲ್ಲೂ ಭುವಿ ಈ ಬಾರಿ ಮಿಂಚಿದ್ದಾರೆ. ಉತ್ತರ ಪ್ರದೇಶದ 36ರ ಹರೆಯದ ಭುವಿ ಅವರ ಎಸೆತಗಳ ಮೊನಚು ಒಂಚೂರೂ ಕಡಿಮೆಯಾಗಿಲ್ಲ. ಅವರ ಸ್ವಿಂಗ್, ಕಟರ್ ಮತ್ತು ಸ್ಲೋ ಎಸೆತಗಳು ಬ್ಯಾಟರ್‌ಗಳ ನಿದ್ದೆಗೆಡಿಸಿವೆ. ಅಂತರರಾಷ್ಟ್ರೀಯ ಕ್ರಿಕೆಟ್ ಪಯಣ ಬಹುತೇಕ ಕೊನೆಗೊಂಡಿರುವ ಈ ಹೊತ್ತಿನಲ್ಲಿಯೂ ಅವರು ತಮ್ಮ ಆತ್ಮವಿಶ್ವಾಸ ಮತ್ತು ಸಾಧನೆಯ ಹಸಿವನ್ನು ಜೀವಂತವಾಗಿಟ್ಟುಕೊಂಡಿದ್ದಾರೆ. ಫಿಟ್‌ನೆಸ್ ಕಾಪಾಡಿಕೊಂಡಿದ್ದಾರೆ.

ಕಾಶ್ಮೀರಿ ಹುಡುಗ ರಸಿಕ್

ರಸಿಕ್ ಸಲಾಮ್ ದಾರ್
ಪಂದ್ಯ 12
ವಿಕೆಟ್ 19

ಜಮ್ಮು–ಕಾಶ್ಮೀರ ಕಣಿವೆಯ ಪುಟ್ಟ ಗ್ರಾಮ ಅಷ್ಮೂಜಿಯ ಸರ್ಕಾರಿ ಶಾಲೆಯ ಶಿಕ್ಷಕ ಸಲಾಮ್ ದಾರ್ ಅವರ ಮಗ ರಸಿಕ್. ಫೈನಲ್ ಪಂದ್ಯದಲ್ಲಿ ಗುಜರಾತ್ ಟೈಟನ್ಸ್‌ನ ಮೂವರು ಬ್ಯಾಟರ್‌ಗಳ ವಿಕೆಟ್ ಉರುಳಿಸಿದರು. ಇಡೀ ಟೂರ್ನಿಯಲ್ಲಿ ತಂಡವು ತಮ್ಮ ಮೇಲೆ ಇಟ್ಟ ವಿಶ್ವಾಸವನ್ನು ಉಳಿಸಿಕೊಂಡರು.

ಜಮ್ಮು–ಕಾಶ್ಮೀರದಿಂದ ಐಪಿಎಲ್ ಆಡಿದ ಮೂರನೇ ಆಟಗಾರ ಅವರು. 17ನೇ ವಯಸ್ಸಿನಲ್ಲಿಯೇ ಐಪಿಎಲ್‌ಗೆ ಕಾಲಿಟ್ಟವರು. ಮೊದಲಿಗೆ ಮುಂಬೈ ಇಂಡಿಯನ್ಸ್‌ನಲ್ಲಿ ಆಡಿದ್ದರು. 2024ರಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ಪರ ಆಡಿದ್ದರು. ಹೋದ ವರ್ಷ ಆರ್‌ಸಿಬಿಯು ಅವರಿಗೆ ₹ 6 ಕೋಟಿ ನೀಡಿ ಖರೀದಿಸಿತ್ತು. ಈ ವರ್ಷ ಎಡಗೈ ವೇಗಿ ಯಶ್ ದಯಾಳ್ ಅವರು ಅಲಭ್ಯರಾದರು. ಸಿಕ್ಕ ಅವಕಾಶಗಳನ್ನು ಎರಡೂ ಕೈಗಳಿಂದ ಬಾಚಿ ತಬ್ಬಿಕೊಂಡರು. ದೇಶಿ ಕ್ರಿಕೆಟ್ ಟೂರ್ನಿಗಳಲ್ಲಿ ಆಡುವಾಗ ರಸಿಕ್ ಅವರ ಪ್ರತಿಭೆಯನ್ನು ಗುರುತಿಸಿದವರು ಮಾಜಿ ವೇಗದ ಬೌಲರ್ ಇರ್ಫಾನ್ ಪಠಾಣ್ ಅವರು. ರಣಜಿ ಟ್ರೋಫಿ ಟೂರ್ನಿಗಳಲ್ಲಿಉತ್ತಮ ಸಾಧನೆ ಮಾಡಿದವರು. ಆದರೆ 2017–18ರ ಸಂದರ್ಭದಲ್ಲಿ ವಯೋಮಿತಿ ನಕಲಿ ಪ್ರಮಾಣಪತ್ರ ನೀಡಿದ್ದ ಪ್ರಕರಣದಲ್ಲಿ ಎರಡು ವರ್ಷ ಅಮಾನತುಗೊಂಡರು. ಅವರ ಶಿಕ್ಷೆಯ ಅವಧಿ ಮುಗಿಯುವ ಹೊತ್ತಿಗೆ ಕೋವಿಡ್ ಕಾಲ ಶುರುವಾಗಿತ್ತು. ಇದರಿಂದಾಗಿ ಅವರ ಕ್ರಿಕೆಟ್ ಜೀವನ ಮೊಟಕುಗೊಳ್ಳುವ ಆತಂಕ ಮೂಡಿತ್ತು. ಆದರೂ ಎದೆಗುಂದದ ಅವರು ತಮ್ಮ ಹಿಂದಿನ ಎಲ್ಲ ಲೋಪದೋಷಗಳನ್ನು ಮರೆತು ಕಣಕ್ಕಿಳಿದರು.ಅವರಿಗೆ ಮತ್ತೆ ಮರುಜನ್ಮ ಸಿಕ್ಕಿತು.

'ಚೇಸಿಂಗ್ ಮಾಸ್ಟರ್' ಕೊಹ್ಲಿ

2008ರಲ್ಲಿ ವಿರಾಟ್ ಕೊಹ್ಲಿ ಆರ್‌ಸಿಬಿಗೆ ಬಂದಾಗ 19 ವರ್ಷದ ಹುಡುಗ. ಯುವ ವಿಶ್ವಕಪ್ ಗೆದ್ದ ಭಾರತ ತಂಡವನ್ನು ಮುನ್ನಡೆಸಿದ ಅನುಭವದೊಂದಿಗೆ ಐಪಿಎಲ್‌ಗೆ ಬಂದಿದ್ದರು. ಅಲ್ಲಿಂದ ಇಲ್ಲಿಯವರೆಗೆ ಆರ್‌ಸಿಬಿಯೊಂದಿಗೆ ತಾವೂ ತಾರೆಯಾಗಿ ಬೆಳೆದಿದ್ದಾರೆ. 'ಚೇಸಿಂಗ್ ಮಾಸ್ಟರ್' ಎಂಬ ಬಿರುದು ಗಳಿಸುವಷ್ಟರ ಮಟ್ಟಿಗೆ ಅವರ ಆಟ ಹದಗೊಂಡಿದೆ. ಈ ಸಲದ ಐಪಿಎಲ್ ಫೈನಲ್‌ನಲ್ಲಿ ಅವರ ಅಜೇಯ ಅರ್ಧಶತಕವು ತಂಡದ ಗೆಲುವಿಗೆ ಕಾರಣವಾಯಿತು. ಕಳೆದ ಎರಡು ದಶಕಗಳ ವೃತ್ತಿಜೀವನದಲ್ಲಿ ಎಲ್ಲ ಮಾದರಿಗಳಲ್ಲಿಯೂ ಚೇಸಿಂಗ್ ಮೂಲಕ ಪಂದ್ಯಗಳನ್ನು ಗೆಲ್ಲಿಸಿಕೊಟ್ಟಿದ್ದಾರೆ. ಇಷ್ಟಾದರೂ ಟಿ20 ಕ್ರಿಕೆಟ್ ಆಡುವ ಅವರ ಶೈಲಿಯಲ್ಲಿ ಸಾಂಪ್ರದಾಯಿಕ ಕೌಶಲಗಳನ್ನು ಬಿಟ್ಟಿಲ್ಲ. ಅಸಾಂಪ್ರದಾಯಿಕ ಹೊಡೆತಗಳು ಅವರ ಆಟದಲ್ಲಿ ಕಾಣುವುದಿಲ್ಲ. ನಾಲ್ಕು ವರ್ಷಗಳ ಹಿಂದೆ ಆಸ್ಟ್ರೇಲಿಯಾದಲ್ಲಿ ನಡೆದಿದ್ದ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಪಾಕಿಸ್ತಾನದ ಎದುರಿನ ಪಂದ್ಯದಲ್ಲಿ ಅವರು ಹೊಡೆದಿದ್ದ ಎರಡು ಸಿಕ್ಸರ್‌ಗಳು ಇಂದಿಗೂ ಜನಜನಿತ. ಕ್ರಿಕೆಟ್ ಮೂಲಪಾಠವನ್ನು ಸರಿಯಾಗಿ ಅಭ್ಯಾಸ ಮಾಡಿದವರು ಯಾವುದೇ ಮಾದರಿಯಲ್ಲಿಯೂ ಯಶಸ್ವಿಯಾಗುತ್ತಾರೆ ಎಂಬುದಕ್ಕೆ ವಿರಾಟ್ ನಿದರ್ಶನವಾಗುತ್ತಾರೆ. 37ನೇ ವಯಸ್ಸಿನಲ್ಲಿಯೂ ಅವರು ಕಾಪಾಡಿಕೊಂಡಿರುವ ಫಿಟ್‌ನೆಸ್ ಕೂಡ ಅನುಕರಣೀಯ.

ಫುಟ್‌ಬಾಲ್ ವಿಶ್ವಕಪ್: ಪ್ರಸಾರ ಹಕ್ಕು 'ಜೀ' ತೆಕ್ಕೆಗೆ

ನವದೆಹಲಿ (ಪಿಟಿಐ): 'ಜೀ' ಎಂಟರ್‌ಟೈನ್‌ಮೆಂಟ್ ಎಂಟರ್‌ಪ್ರೈಸಸ್ ಲಿಮಿಟೆಡ್ ಸಂಸ್ಥೆಯು ವಿಶ್ವ ಫುಟ್‌ಬಾಲ್ ಫೆಡರೇಷನ್ (ಫಿಫಾ) ಜೊತೆಗೆ ಎಂಟು ವರ್ಷಗಳ ಅವಧಿಗೆ ಪ್ರಸಾರ ಹಕ್ಕು ಒಪ್ಪಂದ ಮಾಡಿಕೊಂಡಿದೆ. ಇದೇ 11ರಂದು ಆರಂಭವಾಗುವ ಫುಟ್‌ಬಾಲ್ ವಿಶ್ವಕಪ್ ಟೂರ್ನಿಯ ಪಂದ್ಯಗಳು ಭಾರತದಲ್ಲಿ 'ಜೀ' ಸ್ಪೋರ್ಟ್ಸ್ ನೆಟ್‌ವರ್ಕ್ ಹಾಗೂ ಝೀ 5 ಆ್ಯಪ್‌ನಲ್ಲಿ ನೇರಪ್ರಸಾರವಾಗಲಿವೆ.

2026 ಹಾಗೂ 2030ರ ಪುರುಷರ ವಿಶ್ವಕಪ್, 2027ರ ಮಹಿಳೆಯರ ವಿಶ್ವಕಪ್ ಸೇರಿ 2034ರ ವರೆಗಿನ ಪ್ರಮುಖ ಫುಟ್‌ಬಾಲ್ ಟೂರ್ನಿಗಳ ಮಾಧ್ಯಮ ಹಕ್ಕುಗಳನ್ನು 'ಜೀ' ಸಂಸ್ಥೆ ಪಡೆದುಕೊಂಡಿದೆ. ಭಾರತದಲ್ಲಿ ಈ ಟೂರ್ನಿಗಳ ನೇರಪ್ರಸಾರವನ್ನು 'ಜೀ' ಸ್ಪೋರ್ಟ್ಸ್ ನೆಟ್‌ವರ್ಕ್‌ನಲ್ಲಿ ಮಾಡಲಾಗುತ್ತದೆ. ಈ ಬಗ್ಗೆ ಫಿಫಾ ಹಾಗೂ ಜೀ ಸಂಸ್ಥೆಗಳು ಸೋಮವಾರ ಜಂಟಿ ಪ್ರಕಟಣೆಯಲ್ಲಿ ತಿಳಿಸಿವೆ.

ಜೀ ಸಂಸ್ಥೆಯು ಯುನೈಟ್ 8 ಸ್ಪೋರ್ಟ್ಸ್ ನೆಟ್‌ವರ್ಕ್ ಹೆಸರಿನಲ್ಲಿ ಈಚೆಗಷ್ಟೇ ಕ್ರೀಡಾ ವಾಹಿನಿಯನ್ನು ಆರಂಭಿಸಿದೆ. ಹಿಂದಿ, ಇಂಗ್ಲಿಷ್ ಸೇರಿ ಬಹುಭಾಷೆಗಳಲ್ಲಿ ಕ್ರೀಡಾ ಕಾರ್ಯಕ್ರಮಗಳ ಪ್ರಸಾರ ಮಾಡಲಿದೆ ಎಂದು ತಿಳಿದುಬಂದಿದೆ.

ಕ್ವಾರ್ಟರ್ ಫೈನಲ್‌ಗೆ ಫೋನ್ಸೆಕಾ, ಮೆನ್ಸಿಕ್

ಫ್ರೆಂಚ್ ಓಪನ್ ಟೆನಿಸ್: ನಾಲ್ಕನೇ ಸುತ್ತಿನಲ್ಲಿ ರೂಡ್, ರುಬ್ಲೆವ್, ಕೀಸ್‌ಗೆ ಆಘಾತ

ಪ್ಯಾರಿಸ್ (ಎಎಫ್‌ಪಿ): ಬ್ರೆಜಿಲ್‌ನ ಯುವ ತಾರೆ ಜೋವೊ ಫೋನ್ಸೆಕಾ ಅವರು ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯಲ್ಲಿ ಕನಸಿನ ಓಟವನ್ನು ಮುಂದುವರಿಸಿದ್ದಾರೆ. ಸರ್ಬಿಯಾದ ದಿಗ್ಗಜ ನೊವಾಕ್ ಜೊಕೊವಿಚ್ ಅವರಿಗೆ ಆಘಾತ ನೀಡಿದ್ದ 19 ವರ್ಷದ ಫೋನ್ಸೆಕಾ ನಾಲ್ಕನೇ ಸುತ್ತಿನಲ್ಲಿ ಎರಡು ಬಾರಿಯ ರನ್ನರ್ಸ್ ಅಪ್ ಕ್ಯಾಸ್ಪರ್ ರೂಡ್ ಅವರನ್ನು ಹಿಮ್ಮೆಟ್ಟಿಸಿದರು.

28ನೇ ಶ್ರೇಯಾಂಕದ ಫೋನ್ಸೆಕಾ ಪುರುಷರ ಸಿಂಗಲ್ಸ್‌ನ 16ರ ಘಟ್ಟದ ಪಂದ್ಯದಲ್ಲಿ 7-5, 7-6 (8), 5-7, 6-2 ರಿಂದ ನಾರ್ವೆಯ ರೂಡ್ ಅವರನ್ನು ಮಣಿಸಿ, ಗ್ರ್ಯಾನ್‌ಸ್ಲಾಮ್ ಟೂರ್ನಿಯಲ್ಲಿ ಮೊದಲ ಬಾರಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು. 2022 ಮತ್ತು 2023ರಲ್ಲಿ ಫೈನಲ್ ತಲುಪಿದ್ದ 15ನೇ ಶ್ರೇಯಾಂಕದ ರೂಡ್ ನಿರಾಸೆಯೊಂದಿಗೆ ಹೊರನಡೆದರು.

ಫೋನ್ಸೆಕಾ ಮೂರನೇ ಸುತ್ತಿನಲ್ಲಿ ಜೊಕೊವಿಚ್ ಅವರನ್ನು ಐದು ಸೆಟ್‌ಗಳ ಹೋರಾಟದಲ್ಲಿ ಮಣಿಸಿದ್ದರು. ಗುಸ್ತಾವೊ ಕುರ್ಟೆನ್ (2004) ನಂತರ ಇಲ್ಲಿ ಕ್ವಾರ್ಟರ್ ಫೈನಲ್ ತಲುಪಿದ ಬ್ರೆಜಿಲ್‌ನ ಮೊದಲ ಆಟಗಾರ ಎಂಬ ಹಿರಿಮೆಗೆ ಫೋನ್ಸೆಕಾ ಪಾತ್ರರಾದರು.

ಫೋನ್ಸೆಕಾ ಮುಂದಿನ ಸುತ್ತಿನಲ್ಲಿ 20 ವರ್ಷದ ಜೇಕಬ್ ಮೆನ್ಸಿಕ್ ಅವರನ್ನು ಎದುರಿಸಲಿದ್ದಾರೆ. 26ನೇ ಶ್ರೇಯಾಂಕದ ಮೆನ್ಸಿಕ್ ಪ್ರಿ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ 6-3, 7-6 (6), 4-6, 2-6, 6-3 ಐದು ಸೆಟ್‌ಗಳ ಹಣಾಹಣಿಯಲ್ಲಿ 11ನೇ ಶ್ರೇಯಾಂಕದ ಆ್ಯಂಡ್ರೆ ರುಬ್ಲೆವ್ ಅವರನ್ನು ಮಣಿಸಿದರು. ಇದರೊಂದಿಗೆ ಇವಾನ್ ಲೆಂಡ್ಲ್ (1980) ಬಳಿಕ ಗ್ರ್ಯಾನ್‌ಸ್ಲಾಮ್ ಟೂರ್ನಿಯಲ್ಲಿ ಎಂಟರ ಘಟ್ಟ ಪ್ರವೇಶಿಸಿದ ಝೆಕ್ ರಿಪಬ್ಲಿಕ್‌ನ ಅತ್ಯಂತ ಕಿರಿಯ ಆಟಗಾರ ಎಂಬ ಹೆಗ್ಗಳಿಕೆಗೆ ಅವರು ಪಾತ್ರರಾದರು.

10ನೇ ಶ್ರೇಯಾಂಕದ ಫ್ಲೇವಿಯೊ ಕೊಬೊಲ್ಲಿ 6-2, 6-3, 6-7 (3), 7-6 (5)ರಿಂದ ಅಮೆರಿಕದ ಜಚಾರಿ ಸ್ವಜ್ದಾ ಅವರನ್ನು ಪರಾಭವಗೊಳಿಸಿದರು. ಇಟಲಿಯ 24 ವರ್ಷದ ಕೊಬೊಲ್ಲಿ ಅವರು 2025ರ ವಿಂಬಲ್ಡನ್ ಬಳಿಕ ಗ್ರ್ಯಾನ್‌ಸ್ಲಾಮ್ ಟೂರ್ನಿಯಲ್ಲಿ ಎರಡನೇ ಬಾರಿ ಕ್ವಾರ್ಟರ್ ಫೈನಲ್ ತಲುಪಿದರು.

ಮೀರಾ ಮುನ್ನಡೆ: 2024ರ ಆವೃತ್ತಿಯಲ್ಲಿ ಸೆಮಿಫೈನಲ್ ತಲುಪಿದ್ದ ರಷ್ಯಾದ ಆಟಗಾರ್ತಿ ಮೀರಾ ಆಂದ್ರೇಯೇವಾ ಅವರು ಎಂಟರ ಘಟ್ಟ ಪ್ರವೇಶಿಸಿದರು. ಎಂಟನೇ ಶ್ರೇಯಾಂಕದ ಮೀರಾ 6-3, 6-2ರಿಂದ ಜಿಲ್ ಟೀಚ್‌ಮನ್ ಅವರನ್ನು ನಿರಾಯಾಸವಾಗಿ ಮಣಿಸಿದರು. ಅವರಿಗೆ ರೊಮೇನಿಯಾದ ಸೊರಾನಾ ಸಿರ್ಸ್ಟಿಯಾ ಮುಂದಿನ ಎದುರಾಳಿಯಾಗಿದ್ದಾರೆ.

ಕೀಸ್‌ಗೆ ಆಘಾತ: 2025ರ ಆಸ್ಟ್ರೇಲಿಯನ್ ಓಪನ್ ಚಾಂಪಿಯನ್ ಮ್ಯಾಡಿಸನ್ ಕೀಸ್ ಅವರಿಗೆ ನಾಲ್ಕನೇ ಸುತ್ತು ದಾಟಲು ಸಾಧ್ಯವಾಗಲಿಲ್ಲ. ರಷ್ಯಾದ 25ನೇ ಶ್ರೇಯಾಂಕದ ಡಯಾನಾ ಶ್ನೈಡರ್ 6-3, 3-6, 6-0ರಿಂದ 19ನೇ ಶ್ರೇಯಾಂಕದ ಕೀಸ್ (ಅಮೆರಿಕ) ಅವರನ್ನು ಸೋಲಿಸಿದರು.

ಹಾಲಿ ಚಾಂಪಿಯನ್ ಕೊಕೊ ಗಾಫ್‌ಗೆ ಆಘಾತ ನೀಡಿದ್ದ ಅನಸ್ತೇಸಿಯಾ ಪೊಟಪೋವಾ ಅವರ ಓಟಕ್ಕೆ ತೆರೆಬಿತ್ತು. ನಾಲ್ಕನೇ ಸುತ್ತಿನಲ್ಲಿ ರಷ್ಯಾದ ಅನ್ನಾ ಕಲಿನ್ಸ್ಕಯಾ 6-4, 2-6, 7-6 (10-7)ರಿಂದ ರಷ್ಯಾ ಸಂಜಾತೆ, ಆಸ್ಟ್ರಿಯಾದ ಅನಸ್ತೇಸಿಯಾ ಅವರನ್ನು ಮಣಿಸಿದರು.

ಝೆಕ್ ರಿಪಬ್ಲಿಕ್‌ನ ಜೇಕಬ್ ಮೆನ್ಸಿಕ್ –ಎಎಫ್‌ಪಿ ಚಿತ್ರ

ಅಂಪೈರ್‌ಗೆ ನಿಂದನೆ: ವ್ಯಾಲೆಜೊಗೆ ದಂಡ

ಪ್ಯಾರಿಸ್ (ಎಎಫ್‌ಪಿ): ಪಂದ್ಯದ ಅಂಪೈರ್ ಅನ್ನು ನಿಂದಿಸಿದ ಕಾರಣಕ್ಕಾಗಿ ಪರಗ್ವೆಯ ಆಟಗಾರ ಅಡಾಲ್ಫೊ ಡೇನಿಯಲ್ ವ್ಯಾಲೆಜೊ ಅವರಿಗೆ 65,000 ಅಮೆರಿಕನ್ ಡಾಲರ್ (₹61 ಲಕ್ಷ) ದಂಡ ವಿಧಿಸಲಾಗಿದೆ ಎಂದು ಟೂರ್ನಿಯ ನಿರ್ದೇಶಕಿ ಅಮೆಲಿ ಮೌರೆಸ್ಮೊ ಸೋಮವಾರ ತಿಳಿಸಿದ್ದಾರೆ.

ಪುರುಷರ ಸಿಂಗಲ್ಸ್ ಎರಡನೇ ಸುತ್ತಿನ ಪಂದ್ಯದಲ್ಲಿ ಫ್ರಾನ್ಸ್‌ನ 17 ವರ್ಷದ ಮೊಯಿಸ್ ಕೌಮೆ ವಿರುದ್ಧ 6-3, 7-5, 3-6, 2-6, 7-6 (10-8) ರಿಂದ ವ್ಯಾಲೆಜೊ ಸೋತರು. ಸ್ಥಳೀಯ ಆಟಗಾರರನ್ನು ತವರಿನ ಪ್ರೇಕ್ಷಕರು ಬೆಂಬಲಿಸಿದ್ದರು. ಇದರಿಂದ ಅಸಮಾಧಾನಗೊಂಡ ವ್ಯಾಲೆಜೊ 'ಪ್ರೇಕ್ಷಕರನ್ನು ನಿಯಂತ್ರಿಸುವ ಸಾಮರ್ಥ್ಯ ನಿಮಗಿಲ್ಲವೇ' ಎಂದು ಬ್ರೆಜಿಲ್‌ನ ಮಹಿಳಾ ಅಂಪೈರ್ ಅನಾ ಕಾರ್ವಾಲ್ಹೋ ಅವರನ್ನು ಉದ್ದೇಶಿಸಿ ಹೇಳಿದ್ದರು.

ಸಂಕ್ಷಿಪ್ತ ಸುದ್ದಿ

ಡೇವಿಡ್‌ಗೆ ಒಂದು ಪಂದ್ಯ ನಿಷೇಧ

ಅಹಮದಾಬಾದ್ (ಪಿಟಿಐ): ಐಪಿಎಲ್ ಫೈನಲ್ ಪಂದ್ಯದಲ್ಲಿ ನಿಯಮ ಉಲ್ಲಂಘನೆ ಮಾಡಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಟಿಮ್ ಡೇವಿಡ್ ಅವರಿಗೆ ಪಂದ್ಯದ ಸಂಭಾವನೆಯ ಶೇ 50ರಷ್ಟು ದಂಡ ಹಾಗೂ 2027ರ ಟೂರ್ನಿಯಲ್ಲಿ ಒಂದು ಪಂದ್ಯದಿಂದ ನಿಷೇಧ ಹೇರಲಾಗಿದೆ.

ಇಲ್ಲಿನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಭಾನುವಾರ ನಡೆದಿದ್ದ ಫೈನಲ್ ಪಂದ್ಯದ ವೇಳೆ ಗುಜರಾತ್ ಟೈಟನ್ಸ್ ಇನ್ನಿಂಗ್ಸ್‌ನ 10ನೇ ಓವರ್‌ನಲ್ಲಿ ಅಂಪೈರ್ ನಿತಿನ್ ಮೆನನ್ ಅವರ ಕಡೆಗೆ ಆಕ್ರಮಣಕಾರಿಯಾಗಿ ಐಸ್ ಬ್ಯಾಗ್ ಎಸೆದಿದ್ದಕ್ಕಾಗಿ ಡೇವಿಡ್ ಅವರಿಗೆ ಈ ಶಿಕ್ಷೆ ನೀಡಲಾಗಿದೆ. ಜೊತೆಗೆ ಎರಡು ಡಿಮೆರಿಟ್ ಅಂಕಗಳನ್ನೂ ನೀಡಲಾಗಿದೆ.

30 ವರ್ಷದ ಡೇವಿಡ್ ಅವರು ಐಪಿಎಲ್ ನೀತಿಸಂಹಿತೆಯ ವಿಧಿ 2.9 ಅನ್ನು ಉಲ್ಲಂಘಿಸಿದ್ದಾರೆ ಎಂದು ಐಪಿಎಲ್ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಟೈಟನ್ಸ್ ತಂಡದ ಬಸ್‌ನಲ್ಲಿ ಬೆಂಕಿ

ಅಹಮದಾಬಾದ್: ಭಾನುವಾರ ರಾತ್ರಿ ಐಪಿಎಲ್ ಫೈನಲ್ ಪಂದ್ಯದ ಬಳಿಕ ಗುಜರಾತ್ ಟೈಟನ್ಸ್ ತಂಡದ ಆಟಗಾರರನ್ನು ಹೋಟೆಲ್‌ಗೆ ಕರೆದೊಯ್ಯುತ್ತಿದ್ದ ತಂಡದ ಬಸ್‌ನಲ್ಲಿ ಬೆಂಕಿ ಕಾಣಿಸಿಕೊಂಡಿದೆ.

ಶಾರ್ಟ್ ಸರ್ಕೀಟ್‌ನಿಂದಾಗಿ ಬಸ್‌ನಲ್ಲಿ ಬೆಂಕಿ ಕಾಣಿಸಿಕೊಂಡಿದೆ. ತಕ್ಷಣ ಆಟಗಾರರನ್ನು ಬಸ್‌ನಿಂದ ಕೆಳಗೆ ಇಳಿಸಿ, ಸ್ಥಳಾಂತರಿಸಲಾಗಿದೆ. ಯಾವುದೇ ದೊಡ್ಡ ಅಪಾಯ ಸಂಭವಿಸಿಲ್ಲ ಎಂದು ಎನ್‌ಡಿಟಿವಿ ವರದಿ ಮಾಡಿದೆ.

ಫೈನಲ್ ಆಡಲು ಮುಲ್ಲನಪುರದಿಂದ ಅಹಮದಾಬಾದ್‌ಗೆ ವಿಮಾನದಲ್ಲಿ ಬರಬೇಕಿದ್ದ ಗುಜರಾತ್ ಟೈಟನ್ಸ್ ತಂಡಕ್ಕೆ ಪ್ರತಿಕೂಲ ವಾತಾವರಣ ಅಡ್ಡಿಯಾಗಿತ್ತು. ಹಾಗಾಗಿ, ಮೇ 30ರ ಸಂಜೆಯಷ್ಟೇ ತಂಡ ಅಹಮದಾಬಾದ್ ತಲುಪಿತ್ತು. ಇದರಿಂದಾಗಿ ಆಟಗಾರರಿಗೆ ಸೂಕ್ತ ವಿಶ್ರಾಂತಿ ಮತ್ತು ಅಭ್ಯಾಸಕ್ಕೆ ಸಮಯ ಸಿಕ್ಕಿಲ್ಲ ಎನ್ನಲಾಗಿದೆ.

ಏಷ್ಯಾ ಕಪ್ ಯುವ ಹಾಕಿ: ಭಾರತಕ್ಕೆ ಮಣಿದ ದಕ್ಷಿಣ ಕೊರಿಯಾ

ಕಕಾಮಿಗಹಾರ (ಜಪಾನ್), (ಪಿಟಿಐ): ನಾಯಕ ಕೇತನ್ ಕುಶ್ವಾಹ ಅವರ ಎರಡು ಗೋಲುಗಳ ನೆರವಿನಿಂದ ಭಾರತ ಪುರುಷರ ತಂಡ, 18 ವರ್ಷದೊಳಗಿನವರ ಏಷ್ಯಾ ಕಪ್ ಹಾಕಿ ಟೂರ್ನಿಯ 'ಎ' ಗುಂಪಿನ ಪಂದ್ಯದಲ್ಲಿ ದಕ್ಷಿಣ ಕೊರಿಯಾ ತಂಡವನ್ನು ಸೋಮವಾರ 4–1 ಗೋಲುಗಳಿಂದ ಸೋಲಿಸಿತು.

ಭಾರತ ಈ ಗೆಲುವಿನಿಂದ ಒಟ್ಟು ಆರು ಅಂಕ ಗಳಿಸಿದೆ. ಕೊರಿಯಾ ಮತ್ತು ಜಪಾನ್ ಸಹ ಇಷ್ಟೇ ಪಾಯಿಂಟ್ಸ್ ಸಂಗ್ರಹಿಸಿವೆ. ಎ ಮತ್ತು ಬಿ ಗುಂಪಿನಲ್ಲಿ ಅಗ್ರಸ್ಥಾನ ಪಡೆಯುವ ತಲಾ ಎರಡು ತಂಡಗಳು ಸೆಮಿಫೈನಲ್‌ನಲ್ಲಿ ಆಡುವ ಅರ್ಹತೆ ಪಡೆಯಲಿವೆ. ಭಾರತ 3ರಂದು ಗುಂಪಿನ ಕೊನೆಯ ಪಂದ್ಯದಲ್ಲಿ ಚೀನಾ ತೈಪೆ ತಂಡವನ್ನು ಎದುರಿಸಲಿದೆ.

ಚೆಸ್: ಭಾರತದ ನಾಲ್ವರಿಗೂ ನಿರಾಸೆ



ಓಸ್ಲೊ (ಪಿಟಿಐ): ಭಾರತದ ನಾಲ್ಕೂ ಮಂದಿ, ನಾರ್ವೆ ಚೆಸ್ ಟೂರ್ನಿಯ ಆರನೇ ಸುತ್ತಿನಲ್ಲಿ ಭಾನುವಾರ ಸೋಲನುಭವಿಸಿದರು. ಈ ಹಿಂದಿನ ಸುತ್ತಿನಲ್ಲಿ ಗೆಲುವಿನ ಹಳಿಗೆ ಮರಳಿದ್ದ ವಿಶ್ವ ಚಾಂಪಿಯನ್ ಗುಕೇಶ್ ಮತ್ತೆ ನಿರಾಶೆ ಅನುಭವಿಸಿದರು. ಅವರ ಜೊತೆಗೆ ಪ್ರಜ್ಞಾನಂದ ಆರ್., ಮಹಿಳೆಯರ ವಿಭಾಗದಲ್ಲಿ ದಿವ್ಯಾ ದೇಶಮುಖ್, ಕೋನೇರು ಹಂಪಿ ಹಿನ್ನಡೆ ಕಂಡರು.

ಹಾಲಿ ಚಾಂಪಿಯನ್ ಹಾಗೂ ವಿಶ್ವದ ಅಗ್ರಮಾನ್ಯ ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್ ಸಕಾಲದಲ್ಲಿ ಲಯಕ್ಕೆ ಮರಳುತ್ತಿದ್ದು, ಐದನೇ ಸುತ್ತಿನವರೆಗೆ ಅಗ್ರಸ್ಥಾನದಲ್ಲಿದ್ದ ಫ್ರಾನ್ಸ್‌ನ ಅಲಿರೇಝಾ ಫಿರೋಝ್‌ಜಾ (10) ಅವರಿಗೆ ಸೋಲುಣಿಸಿದರು. ಆತಿಥೇಯ ನಾರ್ವೆಯ ಆಟಗಾರ ಈಗ ಏಳೂವರೆ ಅಂಕ ಕಲೆಹಾಕಿ ನಾಲ್ಕನೇ ಸ್ಥಾನದಲ್ಲಿದ್ದಾರೆ.

ಅಮೆರಿಕದ ವೆಸ್ಲಿ ಸೊ (11.5) ಅವರು ಪ್ರಜ್ಞಾನಂದ (6) ಅವರನ್ನು ಕ್ಲಾಸಿಕಲ್ ಪಂದ್ಯದಲ್ಲಿ ಮಣಿಸುವ ಮೂಲಕ ಪೂರ್ಣ ಮೂರು ಅಂಕ ಬಾಚಿ ಅಗ್ರಸ್ಥಾನಕ್ಕೇರಿದರು. ಜರ್ಮನಿಯ ವಿನ್ಸೆಂಟ್ ಕೀಮರ್ (8) ಅವರು ಗುಕೇಶ್ (6.5) ಅವರನ್ನು ಸೋಲಿಸಿದರು. ಇನ್ನು ನಾಲ್ಕು ಸುತ್ತುಗಳಷ್ಟೇ ಉಳಿದಿವೆ.

ದಿವ್ಯಾಗೆ ನಿರಾಸೆ: ಐದನೇ ಸುತ್ತಿನ ನಂತರ ಅಗ್ರಸ್ಥಾನದಲ್ಲಿದ್ದ ವಿಶ್ವ ಕಪ್ ವಿಜೇತೆ ದಿವ್ಯಾ ದೇಶಮುಖ್ (8.5) ಅವರು ಐದು ಬಾರಿಯ ವಿಶ್ವ ಚಾಂಪಿಯನ್, ಚೀನಾದ ಜು ವೆನ್‌ಜುನ್ ಅವರಿಗೆ (8) ಸೋತರು.

ಕಜಾಕಸ್ತಾನದ ಬಿಬಿಸಾರ ಅಸೌಬಯೇವಾ (9.5) ಇನ್ನೊಂದು ಪಂದ್ಯದಲ್ಲಿ ಕೋನೇರು ಹಂಪಿ (5) ಅವರನ್ನು ಸೋಲಿಸಿ ಅಗ್ರಸ್ಥಾನಕ್ಕೇರಿದರು.

ಪ್ರಾಯೋಗಿಕವಾಗಿ ಜಾರಿಗೆ ತರಲು ಐಸಿಸಿ ನಿರ್ಧಾರ

ಟೆಸ್ಟ್: ಮಂದ ಬೆಳಕಿದ್ದರೆ ಪಿಂಕ್‌ಬಾಲ್ ಬಳಕೆ

ಅಹಮದಾಬಾದ್ (ಪಿಟಿಐ): ಟೆಸ್ಟ್ ಪಂದ್ಯಗಳ ವೇಳೆ ಮಂದಬೆಳಕಿನಿಂದಾಗಿ ಆಟಕ್ಕೆ ಅಡ್ಡಿಯಾದಲ್ಲಿ ನಸುಗೆಂಪು (ಪಿಂಕ್) ಬಣ್ಣದ ಚೆಂಡನ್ನು ಪ್ರಾಯೋಗಿಕ ನೆಲೆಯಲ್ಲಿ ಬಳಸಲು ಐಸಿಸಿ ಸಮ್ಮತಿ ನೀಡಿದೆ. ಡ್ರಿಂಕ್ಸ್ (ಪಾನೀಯ ವಿರಾಮದ) ವೇಳೆ ಹೆಡ್ ಕೋಚ್‌ಗಳಿಗೆ ಮಧ್ಯಾಹ್ನ ಪ್ರವೇಶಿಸಲು ಅವಕಾಶ ನೀಡಿರುವುದು ಆಟದ ನಿಯಮಗಳಲ್ಲಿ ತಂದಿರುವ ಇನ್ನೊಂದು ಪ್ರಮುಖ ಬದಲಾವಣೆಯಾಗಿದೆ.

ಭಾನುವಾರ ಇಲ್ಲಿ ಮುಕ್ತಾಯಗೊಂಡ ಐಸಿಸಿ ನಿರ್ದೇಶಕ ಮಂಡಳಿಯ ಎರಡು ದಿನಗಳ ಸಭೆಯಲ್ಲಿ ಈ ಪ್ರಮುಖ ನಿರ್ಧಾರಗಳನ್ನು ಕೈಗೊಳ್ಳಲಾಗಿದೆ. ಭ್ರಷ್ಟಾಚಾರ, ಅಕ್ರಮಗಳ ಆರೋಪಗಳನ್ನು ಎದುರಿಸುತ್ತಿರುವ ಕ್ರಿಕೆಟ್ ಕೆನಡಾವನ್ನು ಅಮಾನತುಗೊಳಿಸಲೂ ನಿರ್ಧರಿಸಲಾಯಿತು.

ಬಾಂಗ್ಲಾದೇಶ ಕ್ರಿಕೆಟ್ ಮಂಡಳಿ ಚುನಾವಣೆಯ ಮೇಲ್ವಿಚಾರಣೆಗೆ ಐಸಿಸಿಯ ಹಿರಿಯ ಪ್ರತಿನಿಧಿಗಳ ನಿಯೋಗವನ್ನು ಕಳುಹಿಸಲೂ ತೀರ್ಮಾನಿಸಲಾಗಿದೆ.

'ಟೆಸ್ಟ್ ಪಂದ್ಯಗಳಲ್ಲಿ ಮಂದ ಬೆಳಕಿನ ಸಾಧ್ಯತೆಯಿದ್ದಲ್ಲಿ, ಗರಿಷ್ಠ ಓವರುಗಳ ಆಟ ಸಾಧ್ಯವಾಗಲು ಅನುಕೂಲವಾಗುವಂತೆ ಉಭಯ ತಂಡಗಳ ಪೂರ್ವಾನುಮತಿಯ ಮೇರೆಗೆ ನಸುಗೆಂಪು ಬಣ್ಣದ ಚೆಂಡನ್ನು ಬಳಸಲು ಪ್ರಾಯೋಗಿಕವಾಗಿ ಅವಕಾಶ ನೀಡಲಾಗಿದೆ' ಎಂದು ಐಸಿಸಿ ತಿಳಿಸಿದೆ.

ಪಂದ್ಯದಲ್ಲಿ ಕೆಂಪು ಚೆಂಡನ್ನೇ ಬಳಸಲಾಗುವುದು. ಆದರೆ ನಿಗದಿತ ಓವರುಗಳನ್ನು ಪೂರೈಸುವುದಕ್ಕೆ ಹೊನಲು ಬೆಳಕಿನ ನೆರವು ಪಡೆದಾಗ ನಸುಗೆಂಪು ಬಣ್ಣದ ಚೆಂಡನ್ನು ಬಳಸಲಾಗುವುದು ಎಂದು ಈ ನಿಯಮವನ್ನು ಅರ್ಥೈಸಲಾಗಿದೆ.

ಟಿ20 ಪಂದ್ಯಗಳ 'ಸ್ಟ್ರಟೆಜಿಕ್ ಟೈಮ್ ಔಟ್' ಸಮಯದಲ್ಲಿ ಕೋಚ್ ಮತ್ತು ನೆರವು ಸಿಬ್ಬಂದಿಗೆ ಅಂಗಣ (ಫೀಲ್ಡ್ ಆಫ್ ಪ್ಲೇ) ಪ್ರವೇಶಿಸಲು ಅವಕಾಶ ಇರುವಂತೆ ಟೆಸ್ಟ್ ಪಂದ್ಯಗಳಲ್ಲೂ ಡ್ರಿಂಕ್ಸ್ ವೇಳೆಗೆ ಕೋಚ್‌ಗೆ ಕ್ರೀಡಾಂಗಣದೊಳಗೆ ಬರಲು ಅವಕಾಶ ಕಲ್ಪಿಸಲಾಗುತ್ತದೆ.

ನಿಯಮಬಾಹಿರ ಬೌಲಿಂಗ್ ಶೈಲಿಗೆ ಕಡಿವಾಣ ಹಾಕಲು ಆನ್‌ಫೀಲ್ಡ್ ಅಂಪೈರ್‌ಗಳಿಗೆ ಹಾಕ್‌ಐ ಡೇಟಾ ಲಭ್ಯವಾಗುವ ವ್ಯವಸ್ಥೆ ಮಾಡಲಾಗುವುದು. ಇದರಿಂದ ಬೌಲರ್ ಒಬ್ಬರು 'ಥ್ರೊ' ಮಾಡುತ್ತಾರೆಯೇ ಎಂದು ನಿರ್ಧರಿಸಿ ಮ್ಯಾಚ್ ರೆಫ್ರಿಗೆ ವರದಿ ಮಾಡುವ ಮುನ್ನ ಹಾಕ್‌ಐ ಡೇಟಾ ಪರಿಶೀಲಿಸಲು ಅಂಪೈರ್‌ಗಳಿಗೆ ಅವಕಾಶವಾಗಲಿದೆ.

ಈ ವರ್ಷದ ಅ. 1 ರಿಂದ ಈ ಬದಲಾವಣೆಗಳನ್ನು ಜಾರಿಗೆ ತರಲಾಗುತ್ತದೆ.

ಅವಳಿ ಚಿನ್ನಗಳೊಂದಿಗೆ ದಿವ್ಯಾನ್ಶಿ ದಾಖಲೆ

ಪ್ರಿಸ್ಟಿನಾ (ಕೊಸೊವೊ), (ಪಿಟಿಐ): ಕೇವಲ 15 ವರ್ಷ ವಯಸ್ಸಿನ ದಿವ್ಯಾನ್ಶಿ ಭೌಮಿಕ್ ಅವರು ಡಬ್ಲ್ಯುಟಿಟಿ ಫೀಡರ್ ಟೇಬಲ್ ಟೆನಿಸ್ ಟೂರ್ನಿಯ ಮಹಿಳಾ ಸಿಂಗಲ್ಸ್‌ನಲ್ಲಿ ಪದಕ ಗೆದ್ದ ಭಾರತದ ಅತಿ ಕಿರಿಯ ಆಟಗಾರ್ತಿ ಎಂಬ ಹಿರಿಮೆಗೆ ಪಾತ್ರಳಾದಳು.

ವಿಶ್ವ ಕ್ರಮಾಂಕದಲ್ಲಿ 211ನೇ ಸ್ಥಾನದಲ್ಲಿರುವ ದಿವ್ಯಾನ್ಶಿ ಅಸಾಮಾನ್ಯ ಏಕಾಗ್ರತೆ ಮತ್ತು ಹೋರಾಟದ ಶಕ್ತಿ ಪ್ರದರ್ಶಿಸಿ ವಿಶ್ವ ಕ್ರಮಾಂಕದಲ್ಲಿ 38ನೇ ಸ್ಥಾನದಲ್ಲಿರುವ ಚೀನಾ ತೈಪೆಯ ಯೆ ಯಿ–ತಿಯಾನ್ ಅವರನ್ನು ಐದು ಗೇಮ್‌ಗಳ ರೋಚಕ ಫೈನಲ್‌ನಲ್ಲಿ 3–2 ರಿಂದ (8–11, 11–8, 11–5, 7–11, 11–7) ಸೋಲಿಸಿದಳು.

ಜಪಾನ್‌ನ ಪ್ರತಿಭೆ ಮಿವಾ ಹರಿ ಮೊಟೊ ಅವರ ನಂತರ ಈ (ಡಬ್ಲ್ಯುಟಿಟಿ ಫೀಡರ್ ಸರ್ಕಿಟ್) ಪ್ರಶಸ್ತಿ ಗೆದ್ದ ಅತಿ ಕಿರಿಯ ಆಟಗಾರ್ತಿ ದಿವ್ಯಾನ್ಶಿ ಎನ್ನಲಾಗುತ್ತಿದೆ.

ದಿವ್ಯಾಂಶಿ ಡಬಲ್ಸ್‌ನಲ್ಲೂ ಪ್ರಶಸ್ತಿ ಗೆದ್ದುಕೊಂಡಳು. ಸ್ವದೇಶದ ಸಿಂಡ್ರೆಲಾ ದಾಸ್ ಅವರ ಜೊತೆಗೂಡಿ 3–2 ರಿಂದ (7–11, 14–12, 12–14, 11–8, 11–7 ರಿಂದ) ಜಪಾನ್‌ನ ಸಾಚಿ ಅಯೋಕಿ- ಕೊಕೊನಾ ಮುರಾಮತ್ಸು ಅವರನ್ನು ಸೋಲಿಸಿದರು.

ಸಾತ್ವಿಕ್– ಚಿರಾಗ್ ಮೇಲೆ ಭರವಸೆ

ಜಕಾರ್ತ (ಪಿಟಿಐ): ಸಿಂಗಪುರ ಓಪನ್ ಟೂರ್ನಿಯ ಕಿರೀಟ ಗೆದ್ದ ಉತ್ಸಾಹದಲ್ಲಿರುವ ಭಾರತದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ– ಚಿರಾಗ್ ಶೆಟ್ಟಿ ಅವರು ಮಂಗಳವಾರ ಇಲ್ಲಿ ಆರಂಭವಾಗುವ ಇಂಡೊನೇಷ್ಯಾ ಓಪನ್ ಸೂಪರ್ 1000 ಬ್ಯಾಡ್ಮಿಂಟನ್ ಟೂರ್ನಿಯಲ್ಲಿಯೂ ಲಯ ಮುಂದುವರಿಸುವ ವಿಶ್ವಾಸದಲ್ಲಿದ್ದಾರೆ.

ವಿಶ್ವದ ಮಾಜಿ ಅಗ್ರಮಾನ್ಯ ಜೋಡಿಯು ಅಂದಾಜು ₹13.82 ಕೋಟಿ ಬಹುಮಾನ ಮೊತ್ತದ ಈ ಟೂರ್ನಿಯಲ್ಲಿ ಮಲೇಷ್ಯಾದ ಕಾಂಗ್ ಖೈ ಷಿಂಗ್ ಹಾಗೂ ಆ್ಯರನ್ ತೈ ವಿರುದ್ಧ ಅಭಿಯಾನ ಆರಂಭಿಸಲಿದೆ.

ಭಾರತದ ಇನ್ನೊಂದು ಜೋಡಿ ಎಂ.ಆರ್.ಅರ್ಜುನ್ ಹಾಗೂ ಹರಿಹರನ್ ಅಂಶಕರುಣನ್ ಅವರು ಮೊದಲ ಸುತ್ತಿನಲ್ಲಿ ಮಲೇಷ್ಯಾದ ಮತ್ತೊಂದು ಜೋಡಿ ನೂರ್ ಮೊಹಮ್ಮದ್ ಅಝ್ರಿನ್ ಆಯೂಬ್ ಮತ್ತು ತಾನ್ ವೀ ಕಿಯೊಂಗ್ ಅವರನ್ನು ಎದುರಿಸಲಿದ್ದಾರೆ. ಭಾರತದ ಎರಡೂ ಜೋಡಿಗಳು ಮೊದಲ ಸುತ್ತಿನಲ್ಲಿ ಗೆಲುವು ಸಾಧಿಸಿದರೆ, ಎರಡನೇ ಸುತ್ತಿನಲ್ಲಿ ಪರಸ್ಪರ ಮುಖಾಮುಖಿಯಾಗಲಿವೆ.

ಲಯ ಕಂಡುಕೊಳ್ಳಲು ಪರದಾಡುತ್ತಿರುವ ಅನುಭವಿ ಆಟಗಾರ್ತಿ ಪಿ.ವಿ.ಸಿಂಧು ಅವರು ಥಾಯ್ಲೆಂಡ್‌ನ ಬುಸಾನನ್ ಒಂಗ್ ಬಮ್ರುಂಗ್‌ಫನ್ ವಿರುದ್ಧ ಅಭಿಯಾನ ಆರಂಭಿಸಲಿದ್ದಾರೆ. ಭರವಸೆಯ ಆಟಗಾರ್ತಿಯರಾದ ಮಾಳವಿಕಾ ಬನ್ಸೋಡ್ ಹಾಗೂ ಉನ್ನತಿ ಹೂಡ ಅವರು ಕ್ರಮವಾಗಿ ಪೋರ್ನಪವೀ ಶೊಶುವಾಂಗ್ (ಥಾಯ್ಲೆಂಡ್) ಮತ್ತು ನೊಜೊಮಿ ಒಕುಹಾರಾ (ಜಪಾನ್) ಅವರನ್ನು ಎದುರಿಸಲಿದ್ದಾರೆ.

ಅನುಭವಿ ಆಟಗಾರರಾದ ಲಕ್ಷ್ಯ ಸೇನ್ ಹಾಗೂ ಕಿದಂಬಿ ಶ್ರೀಕಾಂತ್ ಅವರು ಕ್ರಮವಾಗಿ ಆತಿಥೇಯ ರಾಷ್ಟ್ರದ ಅಲ್ವಿ ಫರ್ಹಾನ್ ಮತ್ತು ಯೂಶಿ ತನಾಕ (ಜಪಾನ್) ವಿರುದ್ಧ ಅಭಿಯಾನ ಆರಂಭಿಸಲಿದ್ದಾರೆ. ಕನ್ನಡಿಗ ಆಯುಷ್ ಶೆಟ್ಟಿ ಅವರು ಚೀನಾದ ವೆಂಗ್ ಹಾಂಗ್‌ಯಾಂಗ್ ಎದುರು ಸೆಣಸಲಿದ್ದಾರೆ.